## ಪರಿಕಲ್ಪನೆ ಮತ್ತು ಮಾರ್ಗದರ್ಶನ

1. **ಶ್ರೀ ಜಯಕುಮಾರ್ ಎಸ್.** ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು

## ಸಾಹಿತ್ಯ ರಚನಾ ಸಮಿತಿ

ಅಧ್ಯಕ್ಷರು : **ಶ್ರೀ ಹೊನ್ನಯ್ಯ**, ಸಹಾಯಕ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು

ಸದಸ್ಯರು :

1. **ಶ್ರೀ.ಎಸ್.ಕೃಷ್ಣಪ್ಪ,**
   ಸ.ಶಿ.ಸರ್ಕಾರಿ,
   ಎಂಪ್ರೆಸ್ ಬಾಲಕಿಯರ ಪದವಿ ಪೂರ್ವ ಕಾಲೇಜು,
   ತುಮಕೂರು

2. **ಶ್ರೀ.ಎಂ.ವಿ.ನಂಜಪ್ಪ,**
   ಸ.ಶಿ.ಶ್ರೀ ಸಿದ್ಧಾರ್ಥ ವಸತಿ ಪ್ರೌಢಶಾಲೆ,
   ವಿನೋಬನಗರ, ತುಮಕೂರು.

3. **ಶ್ರೀಮತಿ ಸರಸ್ವತಿ ಹೆಗಡೆ,**
   ಸ.ಶಿ.ಸರ್ಕಾರಿ ಪ್ರೌಢಶಾಲೆ,
   ಹೆಬ್ಬಾಳ, ಬೆಂಗಳೂರು.

4. **ಶ್ರೀ.ಎಂ.ರಮೇಶ್,**
   ಸ.ಶಿ.ಪ್ರೌಢ ಶಾಲೆ, ಜಿ.ಕೆ.ಹಳ್ಳಿ,
   ಚನ್ನಗಿರಿ ತಾ, ದಾವಣಗೆರೆ ಜಿಲ್ಲೆ

## ಕಾರ್ಯಕ್ರಮ ನಿರ್ವಹಣೆ

**ಶ್ರೀಮತಿ ಉಷಾ ಎಂ. ಡಿ.**
**ಹಿರಿಯ ಸಹಾಯಕ ನಿರ್ದೇಶಕರು,**
ಡಿ.ಎಸ್.ಸಿ.ಆರ್.ಟಿ, ಬೆಂಗಳೂರು.

# ಮುನ್ನುಡಿ

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 ರ ತತ್ವಗಳನ್ನು ಆಧರಿಸಿ 2014–15 ಸಾಲಿನಲ್ಲಿ 10ನೇ ತರಗತಿಯಲ್ಲಿ ಎಲ್ಲಾ ವಿಷಯಗಳಿಗೂ ನೂತನ ಪಠ್ಯಪುಸ್ತಕಗಳನ್ನು ಜಾರಿಗೆ ತರಲಾಗಿದೆ. ಪಠ್ಯ ಪುಸ್ತಕದಲ್ಲಿರುವ ವಿಷಯ ಜ್ಞಾನವನ್ನೂ ವಿದ್ಯಾರ್ಥಿಗಳು ತಮ್ಮ ಜ್ಞಾನವನ್ನಾಗಿಸಿಕೊಳ್ಳಲು ಶಿಕ್ಷಕರು ಹೇಗೆ ತರಗತಿ ಪ್ರಕ್ರಿಯೆಗಳನ್ನು ನಡೆಸಬೇಕು ಎಂದು ಈ ಸಾಹಿತ್ಯದಲ್ಲಿ ಪ್ರಯತ್ನಿಸಲಾಗಿದೆ. ಮನವರಿಕೆ ಮಾಡಿಕೊಡಲು ಪಠ್ಯಪುಸ್ತಕದಲ್ಲಿರುವ ಪಾಠಗಳಿಗೆ ಪೂರಕ ಚಟುವಟಿಕೆಗಳನ್ನು ಸೂಚ್ಯವಾಗಿ ತಿಳಿಸಲಾಗಿದೆ. ಮಕ್ಕಳ ತಿಳಿವಳಿಕೆಯನ್ನು ನಿರಂತರವಾಗಿ ಮತ್ತು ಸಮಗ್ರವಾಗಿ ಮೌಲ್ಯಮಾಪನ ಮಾಡುವ ಬಗ್ಗೆ ಸಹ ಶಿಕ್ಷಕರಿಗೆ ಮಾರ್ಗದರ್ಶನ ನೀಡಲಾಗಿದೆ.

ನೂತನವಾಗಿ ಜಾರಿಗೆ ಬಂದಿರುವ ಪಠ್ಯಪುಸ್ತಕಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳು ಜ್ಞಾನವನ್ನು ರಚಿಸಿಕೊಳ್ಳುವ ನಿಟ್ಟಿನಲ್ಲಿ ಶಿಕ್ಷಕರನ್ನು ತೊಡಗಿಸಲು ಐದು ದಿನಗಳ ತರಬೇತಿಯನ್ನು ನೀಡಲು ಸದರಿ ತರಬೇತಿ ಸಾಹಿತ್ಯವನ್ನು ರಚಿಸಲಾಗಿದೆ. ಪಠ್ಯಪುಸ್ತಕ ರಚನಾ ಸಮಿತಿಯ ಸದಸ್ಯರಲ್ಲದೆ ತರಗತಿಗಳಲ್ಲಿ ಬೋಧಿಸುವ ಶಿಕ್ಷಕರನ್ನೊಳಗೊಂಡ ತಂಡವು ಈ ತರಬೇತಿ ಸಾಹಿತ್ಯವನ್ನು ರಚಿಸಿದೆ. ಈ ಸಾಹಿತ್ಯದಲ್ಲಿ ನಮೂದಿಸದೇ ಇರುವ ಚಟುವಟಿಕೆಗಳು ಅಥವಾ ಮೌಲ್ಯಮಾಪನದ ಅಂಶಗಳು ಇದ್ದಲ್ಲಿ ಶಿಕ್ಷಕರು ಅಥವಾ ಶಿಕ್ಷಣಾಸಕ್ತರು ಬರವಣಿಗೆಯಲ್ಲಿ ಸಲಹೆಗಳನ್ನು ನೀಡಬಹುದು. ಸದರಿ ಸಾಹಿತ್ಯವನ್ನು ಬಳಸಿಕೊಂಡು ವಿದ್ಯಾರ್ಥಿಗಳಲ್ಲಿ ಜ್ಞಾನವನ್ನು ಕಟ್ಟಿಕೊಳ್ಳುವ ಪ್ರಕ್ರಿಯೆಗೆ ಚಾಲನೆ ನೀಡುವಿರಿ ಎಂಬ ಆಶಯದೊಂದಿಗೆ ಈ ತರಬೇತಿ ಸಾಹಿತ್ಯವನ್ನು ನಿಮ್ಮ ಕೈಗೆ ನೀಡಲಾಗಿದೆ. ಈ ತರಬೇತಿಯಲ್ಲಿ ಪಾಲ್ಗೊಂಡ ಸಾಹಿತ್ಯ ರಚನಾ ಸಮಿತಿಯ ಎಲ್ಲ ಸದಸ್ಯರ ಪರಿಶ್ರಮ ವ್ಯರ್ಥವಾಗದಂತೆ ಶಿಕ್ಷಕರು ಸದರಿ ಸಾಹಿತ್ಯದ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುತ್ತಾರೆ ಎಂದು ಆಶಿಸುತ್ತೇನೆ.

ತರಗತಿ ಪ್ರಕ್ರಿಯೆಯನ್ನು ವಿದ್ಯಾರ್ಥಿಗಳು ಹೊರೆ ಎಂದು ಭಾವಿಸದಂತೆ ಸಂತಸದಾಯಕ ಕಲಿಕೆಯಲ್ಲಿ ಅವರನ್ನು ತೊಡಗಿಸಿ ಗುಣಾತ್ಮಕ ಕಲಿಕೆಯನ್ನು ಉಂಟುಮಾಡುವ ನಿಟ್ಟಿನಲ್ಲಿ ಶಿಕ್ಷಕರು ಮಾಡುವ ಎಲ್ಲ ಪ್ರಯತ್ನಗಳಿಗೂ ಉತ್ತಮ ಫಲ ಸಿಗಲಿ ಎಂಬ ಶುಭ ಆಶಯದೊಂದಿಗೆ ಈ ತರಬೇತಿ ಸಾಹಿತ್ಯವನ್ನು ಹೊರತರಲಾಗಿದೆ.

**ಜಯಕುಮಾರ್ ಎಸ್.**
**ನಿರ್ದೇಶಕರು**
**ಡಿ.ಎಸ್. ಇ.ಆರ್.ಟಿ.**

# ಪರಿವಿಡಿ


| ಕ್ರಮ. ಸಂ. | ವಿಷಯ ವಿವರ | ಪುಟ ಸಂಖ್ಯೆ |
|---|---|---|
| 1. | ಪೀಠಿಕೆ | 3 – 6 |
| 2. | ಆಶಯ ನುಡಿ | 7 – 8 |
| 3. | ತರಬೇತಿಯ ಉದ್ದೇಶಗಳು | 9 – 11 |
| 4. | ಹತ್ತನೇ ತರಗತಿ ಸಮಾಜ ವಿಜ್ಞಾನ ಪಠ್ಯದ ಪರಿಚಯ | 12 – 15 |
| 5. | ಹತ್ತನೇ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕವನ್ನು ಅರ್ಥೈಸಿಕೊಳ್ಳುವ ಕ್ರಮ | 16 – 22 |
| 6. | ಸಮಾಜ ವಿಜ್ಞಾನ ಪಠ್ಯಪುಸ್ತಕದ ಹೊರತಾಗಿ ಇಲ್ಲಿನ ಪಠ್ಯ ಕ್ರಮವನ್ನು ಶ್ರೀಮಂತಗೊಳಿಸುವಿಕೆಯನ್ನು ಕುರಿತು | 23 – 28 |
| 7. | ಸಮಾಜ ವಿಜ್ಞಾನ ವಿಷಯ ವಸ್ತುವಿನ ಕಲಿಕೆಗಾಗಿ ಬಳಸಬೇಕಾದ ಕಲಿವಿನ ವಿಧಾನಗಳು (ವಿಭಾಗವಾರು) | 29 – 31 |
| 8. | ಸಮಾಜ ವಿಜ್ಞಾನ ಕಲಿಕೆಗಾಗಿ ಅಳವಡಿಸಿಕೊಳ್ಳಬಹುದಾದ ಚಟುವಟಿಕೆಗಳು (ವಿಭಾಗವಾರು) | 32 – 84 |
| 9. | ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಪರಿಕಲ್ಪನೆ ಅನುಷ್ಠಾನ ಹಾಗೂ ನಿರ್ವಹಣೆ | 85 – 112 |
| 10. | ಪರಿಹಾರ ಬೋಧನಾ ಪ್ರಕ್ರಿಯೆ | 113 – 120 |
| 11. | ಮಾದರಿ ಪ್ರಶ್ನೆ ಪತ್ರಿಕೆ ವಿನ್ಯಾಸ | 121 – 132 |
| 12. | ಸಮಾಜ ವಿಜ್ಞಾನ ಪ್ರಯೋಗಾಲಯ ನಿರ್ವಹಣೆ | 133 – 135 |
| 13. | ಅನುಬಂಧಗಳು | 136 – 142 |
| 14. | ಅವಲೋಕನ ನಮೂನೆ | 143 |
| 15. | ತರಬೇತಿ ವೇಳಾಪಟ್ಟಿ | 144 |
| 16. | ಆಂತರಿಕ ಅಂಕಗಳ ವಿನ್ಯಾಸ | . |

## ರಚನಾ – 3

### ಪೀಠಿಕೆ

ಶಿಕ್ಷಣದ ನಿರಂತರ ಬದಲಾವಣೆಗೆ ನಮ್ಮನ್ನು ನಾವು ಒಡ್ಡಿಕೊಳ್ಳಬೇಕಾಗಿರುವುದು ಸಹಜವಾಗಿದ್ದು ಕಾರ್ಯ ನಿರ್ವಹಿಸುತ್ತಿರುವ ಎಲ್ಲರಿಗೂ ಇದು ಅಪೇಕ್ಷಣೀಯವೂ ಹೌದು. ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ಗುಣಮಟ್ಟದ ಶಿಕ್ಷಣ ನೀಡಬೇಕು ಎಂಬ ಕೂಗು ನಿನ್ನೆ ಮೊನ್ನೆಯದಲ್ಲ. ಇಂದು ಈ ಕೂಗಿಗೆ ಎಲ್ಲಾ ಭಾಗೀದಾರರ ಒತ್ತಾಸೆಯೂ ಸೇರಿದೆ ಎನ್ನುವುದನ್ನು ನೆನಪಿನಲ್ಲಿಟ್ಟುಕೊಂಡು ಕಡ್ಡಾಯ ಮೂಲಭೂತ ಶಿಕ್ಷಣ ಹಕ್ಕು 2009ನ್ನು ಪುಷ್ಠೀಕರಿಸುವ ಹಿನ್ನೆಲೆಯಲ್ಲಿ ಇಂದಿನ ನೂತನ ಶಿಕ್ಷಣ ಕ್ರಮವನ್ನು ಪರಿಭಾವಿಸಲಾಗುತ್ತಿದೆ.

ಇದರೊಂದಿಗೆ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005ರ ಆಶಯದಂತೆ ಶಾಲಾ ತರಗತಿಗಳಲ್ಲಿ ಮಗು ಸ್ವತಂತ್ರವಾಗಿ ಜ್ಞಾನವನ್ನು ಕಟ್ಟಿಕೊಳ್ಳಲು ಕಲಿಕಾವಕಾಶಗಳನ್ನು ಹೇಗೆ ಕಲ್ಪಿಸಲು ಸಾಧ್ಯವಾಗಿದೆ ಎಂಬ ಪರಿಗಣನೆ ಇವತ್ತಿನ ಜರೂರಾಗಿದೆ. ಹಾಗೆಯೇ ಮಗುವಿನ ಕಲಿಕಾ ಖಾತ್ರಿಗಾಗಿ ಗುಣಮಟ್ಟದ ಹಾದಿಯ ವಿವಿಧ ಬಗೆಯ ಮೌಲ್ಯಮಾಪನ ತಂತ್ರ ಸಾಧನಗಳ ಬಳಕೆಯೊಂದಿಗೆ ನಿರಂತರ ಮತ್ತು ವ್ಯಾಪಕ ಮೌಲ್ಯ ಮಾಪನ (ಸಿ.ಸಿ.ಇ 2009) ದ ಸಾಧ್ಯತೆಗಳನ್ನು ತರಗತಿ ಕೋಣೆಗೆ ಕಡ್ಡಾಯವಾಗಿ ತರಬೇಕೆಂಬುದು ಅನುಕೂಲಕಾರರ ಈಗಿನ ಬಹು ಚರ್ಚಿತ ವಿಷಯವಾಗಿದೆ.

ಈ ಹಿನ್ನೆಲೆಯಲ್ಲಿ ತರಗತಿಯ ಕೋಣೆಯೊಳಗಿನ ಅನುಕೂಲಕಾರನೊಬ್ಬ ಕಲಿಕೆಯ ಹಾದಿಯನ್ನು ನಿರಂತರವಾಗಿ ವಿಕಾಸಗೊಳಿಸುತ್ತಾ, ಮಗುವಿನ ಜೀವನ ಅವಶ್ಯಕತೆಗಳೊಂದಿಗೆ, ಸ್ವ ಅನುಭವದ ಮೂಲಕ ಪಠ್ಯ ಪುಸ್ತಕದ ಆಚೆಯೇ ಕಲಿಯುವುದಿದೆ ಎಂಬುದನ್ನು ನಿರ್ದಿಷ್ಟ ಪಡಿಸಿಕೊಂಡ ಶಿಕ್ಷಣ ಕುರಿತಾದ ಈ ನೂತನ ಪರಿಕಲ್ಪನೆಯನ್ನು ತಾವೆಲ್ಲರೂ ಹೊಸ ರೂಪದಲ್ಲಿ ಕಟ್ಟಿಕೊಳ್ಳುತ್ತಿರುವುದು ಆಶಾದಾಯಕವಾದ ಬೆಳವಣಿಗೆ ಎಂಬುದನ್ನು ನಾವು ಮರೆಯುವಂತಿಲ್ಲ.

ಏಕೆಂದರೆ ಮಗುವಿನ ಶಿಕ್ಷಣದ ಒಂದು ನಿರ್ದಿಷ್ಟ ಹಾಗೂ ಪ್ರಮುಖ ಹಂತ ಹತ್ತನೆಯ ತರಗತಿಯಾಗಿದೆ. ಅಲ್ಲದೆ ಕಡ್ಡಾಯ ಹಾಗೂ ಉಚಿತ ಶಿಕ್ಷಣದ ಸಾಂವಿಧಾನಿಕ ಹಕ್ಕಿನ ಸೌಲಭ್ಯದ ಪರಿಪೂರ್ಣತೆ ಮಗುವಿಗೆ ಒದಗಿಸುವುದೂ ಈ ಮಹತ್ತರ ಘಟ್ಟದಲ್ಲಿಯೇ. ಆದ್ದರಿಂದ ನಮ್ಮ ನಾಡಿನ ಮಕ್ಕಳು ಮನೆಯಂಗಳದಿಂದ ಹೊರಟು ಪಾಠಶಾಲೆಗೆ ಅಡಿ ಇಡುತ್ತಾ ಹತ್ತು ಸಂವತ್ಸರಗಳನ್ನು ಕಳೆಯುವಲ್ಲಿ ಸಮಾಜದ ಒಳಹೊರಗುಗಳನ್ನು ಚೆನ್ನಾಗಿ ಅರಿತುಕೊಳ್ಳಲು ಪ್ರಾರಂಭಿಸುತ್ತಿರುವ ಈ ಹಂತದಲ್ಲಿ ಹತ್ತನೇ ತರಗತಿಯ ಸಮಾಜ ವಿಜ್ಞಾನ ಪುಸ್ತಕವನ್ನು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ನೆಲೆಗಟ್ಟಿನಲ್ಲಿ ವಿಸ್ತೃತ ಹಾಗೂ ಸರಳವಾಗಿ ರಚಿಸಿರುವುದು ಎಲ್ಲರ ಮೆಚ್ಚುಗೆಗೂ ಪಾತ್ರವಾಗಿದೆ.

ಪ್ರೌಢಶಾಲಾ ಮಟ್ಟದ ವಿದ್ಯಾರ್ಥಿಗಳು ಕೃತಿ, ಉದ್ಯೋಗ, ವ್ಯಾಪಾರ ಮುಂತಾದ ಹಲವು ಔದ್ಯೋಗಿಕ ಕವಲುಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿರುತ್ತಾರೆ. ಇದರ ಜೊತೆಜೊತೆಗೆ ಮತ್ತಷ್ಟು ವಿದ್ಯಾರ್ಥಿಗಳು, ವಿಜ್ಞಾನ ತಾಂತ್ರಿಕ ಶಿಕ್ಷಣ, ವೈದ್ಯಕೀಯ ಶಿಕ್ಷಣದಂತಹ ಕ್ಷೇತ್ರಗಳಲ್ಲಿ ಪರಿಣತಿ ಪಡೆಯಲೂ ತೆರಳಲು ಯೋಚಿಸಿರುತ್ತಾರೆ.

ಈ ಎಲ್ಲಾ ಹಿನ್ನಲೆಯನ್ನು ಗಮನದಲ್ಲಿಟ್ಟುಕೊಂಡು ಹತ್ತನೇ ತರಗತಿಯ ಪರಿಷ್ಕೃತ ಸಮಾಜ ವಿಜ್ಞಾನದ ಪರಿಚಯವನ್ನು ಪರಿಣಾಮಕಾರಿಯಾಗಿ ನೀಡುವ ಪ್ರಾಮಾಣಿಕ ಪ್ರಯತ್ನ ವನ್ನು ಪಠ್ಯಪುಸ್ತಕದಲ್ಲಿ ಮಾಡಲಾಗಿದೆ. ಅದಕ್ಕಾಗಿ ಪಠ್ಯದಲ್ಲಿ ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಭೂಗೋಳ, ಸಮಾಜಶಾಸ್ತ್ರ ಹಾಗೂ ವ್ಯವಹಾರ ಅಧ್ಯಯನವೆಂಬ ವಿಭಾಗಗ ಳೊಂದಿಗೆ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ಮಹತ್ವದ ಅಂಶಗಳನ್ನು ಸಮ ಕಾಲೀನ ವಿಚಾರಧಾರೆಯೊಂದಿಗೆ ಸಂಗ್ರಹ್ಯವಾಗಿ ವಿದ್ಯಾರ್ಥಿಗಳಿಗೆ ನೀಡಲಾಗಿದ್ದು ಈ ಎಲ್ಲಾ ಅಂಶಗಳನ್ನು ಅನುಕೂಲಕಾರರು ಹಿಡಿಯಾಗಿ ಅರ್ಥೈಸಿಕೊಂಡು ಅನುಕೂಲಿಸುವುದು ಅನಿವಾರ್ಯವಾಗಿದೆ.

ಅದಕ್ಕಾಗಿ, ಪ್ರತಿ ಘಟಕದಲ್ಲೂ ಕಲಿಕಾರ್ಥಿಯಲ್ಲಿ ವಿಶ್ಲೇಷಿಸುವ, ಚಿಂತಿಸುವ, ತಾರ್ಕಿಕವಾಗಿ ಆಲೋಚಿಸುವ, ಅಭಿಪ್ರಾಯಗಳನ್ನು ಮಂಡಿಸುವ ಹಾಗೂ ಬಹುಮುಖ್ಯವಾಗಿ

ತೀರ್ಮಾನಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯವನ್ನು ಬೆಳೆಸುವುದು ತರಗತಿ ಕೋಣೆಯ ಮಹತ್ತರವಾದ ಉದ್ದೇಶವಾಗಿದೆ.

ಹಾಗೆಯೇ ಮಗುವಿನಿಂದಲೇ ಜ್ಞಾನವನ್ನು ಅಭಿವೃದ್ಧಿಪಡಿಸಬೇಕಿರುವುದರಿಂದ ಘಟಕಕ್ಕೆ ಸಂಬಂಧಿಸಿದಂತೆ ತರಗತಿ ಕೋಣೆಯ ಪ್ರತಿಯೊಂದು ಮಗುವಿನ ಅನುಭವವನ್ನು ಜ್ಞಾನರಚನೆಯಾಗಿ ಬಳಸಿಕೊಳ್ಳಬೇಕೆಂದು ಈಗ ನಾವೆಲ್ಲರೂ ತಿಳಿದುಕೊಂಡಿರುವ ನೂತನ ಶಿಕ್ಷಣ ಕ್ರಮದ ಆಶಯವಾಗಿದೆ. ಅದಕ್ಕಾಗಿ ತರಗತಿಯು ಸದಾ ಚಟುವಟಿಕೆಯಿಂದ ಕೂಡಿರಬೇಕು, ಪ್ರತಿ ಚಟುವಟಿಕೆಯೂ ಮಗುವಿನಲ್ಲಿ ಆಸಕ್ತಿ, ಕೌಶಲ್ಯ, ಅನ್ವಯ ಮೌಲ್ಯ ಹಾಗೂ ತಿಳುವಳಿಕೆಯಂತಹ ಉದ್ದಿಷ್ಟಗಳನ್ನು ಮಗು ತನ್ನ ಮುಂದಿನ ಜೀವನಾವಶ್ಯಕತೆಗಳಿಗೆ ಹೊಂದುವಂತೆ, ಪಠ್ಯಪುಸ್ತಕದ ಎಲ್ಲೆಯನ್ನು ಮೀರಿ ಸಮಗ್ರ ದೃಷ್ಟಿಯ ಜ್ಞಾನ ಕಟ್ಟಿಕೊಳ್ಳುವುದು ಹೊಸ ಶಿಕ್ಷಣ ಕ್ರಮದ ಬದ್ಧತೆಯಾಗಿದೆ.

ಈ ಎಲ್ಲ ಕಲಿಕಾ ದೃಷ್ಟಿಕೋನಗಳನ್ನು ಗಮನದಲ್ಲಿ ಇಟ್ಟುಕೊಂಡು ಹತ್ತನೇ ತರಗತಿಯ ರಚನಾ–3 ಈಗ ಇನ್ನಷ್ಟು ಗಂಭೀರವಾದ ಚಿಂತನೆ, ಮಾರ್ಗದರ್ಶನವನ್ನು ಕೊಡುವ ನಿಟ್ಟಿನಲ್ಲಿ ರೂಪುಗೊಂಡು, ನಿಮ್ಮ ಕೈ ಸೇರಿದೆ. ಆದ್ದರಿಂದ ತಾವುಗಳೆಲ್ಲರೂ ರಚನಾ–3ರನ್ನು ತರಬೇತಿಯ ಸಂದರ್ಭದಲ್ಲಿ ಹಾಜರಿದ್ದು, ರಚನಾ–3 ರಚನೆಯ ಅಂದಿನ ಉದ್ದೇಶ, ಆಶಯಗಳನ್ನು ಅರ್ಥೈಸಿಕೊಂಡು ತರಗತಿ ಕೋಣೆಯ ಒಬ್ಬ ಪ್ರಜ್ಞಾವಂತ ಅನುಕೂಲಕಾರರಾಗಿ ನಾವೆಲ್ಲರೂ ಮಗುವಿನ ಜ್ಞಾನ ರಚನೆಯಲ್ಲಿ ಶ್ರಮಿಸೋಣ ಎಂದು ಆಶಿಸುತ್ತಾ ಸಮಗ್ರವಾದ ನೂತನ ಶಿಕ್ಷಣ ಕ್ರಮದ ಕಲಿಕಾ ಸಂದರ್ಭವನ್ನು ಅರ್ಥೈಸಿಕೊಳ್ಳಲು ತಪ್ಪದೇ ರಚನಾ 1, 2, 3 ರನ್ನು ಸದಾ ಅನುಕೂಲಕಾರರ ಕೈ ಪಿಡಿಯಂತೆ ತಮ್ಮ ಬಳಿ ಇಟ್ಟುಕೊಂಡು ಇವುಗಳ ಅಂತರಂಗದ ಮಾರ್ಗದರ್ಶನವನ್ನು ತಾವೆಲ್ಲರೂ ಪಡೆಯಲೇ ಬೇಕೆಂದು ಸಾಹಿತ್ಯದ ರಚನಾ ತಂಡವು ಭಾವಿಸುತ್ತದೆ.

**ಸಾಹಿತ್ಯ ರಚನಾ ತಂಡ**
ಡಿ.ಎಸ್.ಇ.ಆರ್.ಟಿ.

## ಆಶಯ

ಬದಲಾಗುತ್ತಿರುವ ಭೌಗೋಳಿಕ, ಸಾಮಾಜಿಕ, ವೈಜ್ಞಾನಿಕ ಹಾಗೂ ಆರ್ಥಿಕ ವ್ಯವಸ್ಥೆಗೆ ಅನ್ವಯವಾಗುವಂತೆ ಪಠ್ಯಕ್ರಮವೂ ಬದಲಾಗಿ ಕಲಿಯುವವರಿಗೆ ಜೀವನ ಕೌಶಲ್ಯಗಳನ್ನು ಕಟ್ಟಿಕೊಡುವ ನಿಟ್ಟಿನಲ್ಲಿ 2005ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ಕರ್ನಾಟಕ ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಹಂತದ ಪಠ್ಯಪುಸ್ತಕಗಳನ್ನು ರಚಿಸಲಾಗಿದ್ದು 2014–15 ನೇ ಶೈಕ್ಷಣಿಕ ಸಾಲಿನಲ್ಲಿ ಹತ್ತನೇ ತರಗತಿಯ ನೂತನ ಪಠ್ಯಪುಸ್ತಕಗಳನ್ನು ರಚಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ನೂತನ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿ ವಿಷಯವಾರು ಅನುಕೂಲಕಾರರಿಗೆ (ಶಿಕ್ಷಕರಿಗೆ) ಹೊಸ ಪಠ್ಯಕ್ರಮದ ಮೂಲ ಹಾಗೂ ಪೂರ್ಣ ಪರಿಕಲ್ಪನೆಯನ್ನು ಕಟ್ಟಿಕೊಳ್ಳಲು ಅನುಕೂಲವಾಗುವಂತೆ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ. ಈ ತರಬೇತಿಯಲ್ಲಿ ಹೊಸ ಪಠ್ಯಪುಸ್ತಕವನ್ನು ಅರ್ಥೈಸಿಕೊಳ್ಳುವುದು ಹೇಗೆ? ಮತ್ತು ಇದನ್ನು ಮಕ್ಕಳಿಗೆ ಹೇಗೆ ಅನುಕೂಲಿಸಬೇಕು ಎಂಬುದರ ಬಗ್ಗೆ ಮಾಹಿತಿಯನ್ನು ನೀಡಲಾಗಿದ್ದು, ರಾಜ್ಯದ ಪ್ರತಿಯೊಬ್ಬ ಅನುಕೂಲಕಾರರಿಗೂ ಈ ತರಬೇತಿಯ ಪ್ರತಿಫಲ ತಲುಪಬೇಕಿದೆ ಎಂಬುದೇ ನಮ್ಮ ಆಶಯ.

ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದಂತೆ ಕಲಿಸುವ ಸಂದರ್ಭದಲ್ಲಿಯೇ ಕಲಿವಿನ ಮೂಲ ಪರಿಕಲ್ಪನೆಯನ್ನು ಮೂಡುವಂತೆ ಹಾಗೂ ಕಲಿಸುವಿಕೆಯು ಪರಿಣಾಮಕಾರಿಯಾಗುವಂತೆ ಈ ರಚನಾ ಸಾಹಿತ್ಯದ ಚೌಕಟ್ಟಿನಲ್ಲಿ ಅನುಕೂಲಕಾರರಿಗೆ ತರಬೇತಿ ನೀಡಲಾಗುವುದು. ಇದೆಲ್ಲದರ ಹಿನ್ನೆಲೆಯಲ್ಲಿ ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ಪ್ರಸ್ತುತ ಬದಲಾಗುತ್ತಿರುವ ವೈಜ್ಞಾನಿಕ, ಸಾಮಾಜಿಕ, ಭೌಗೋಳಿಕ ಮತ್ತು ಆರ್ಥಿಕ ಸನ್ನಿವೇಶಗಳಿಗೆ ಹತ್ತನೇ ತರಗತಿಯ ವಿದ್ಯಾರ್ಥಿಗಳು ತೊಡಗಿಸಿಕೊಳ್ಳುವಂತಹ ಸನ್ನಿವೇಶಗಳನ್ನು ಕಲ್ಪಿಸಿಕೊಡುವ ಮಹದಾಸೆ ನಮ್ಮದು.

ಹತ್ತನೇ ತರಗತಿಯ ನೂತನ ಪಠ್ಯಕ್ರಮದ ಕಲ್ಪಿತ ವಿಷಯಗಳನ್ನು ಕಲಿಯುವವರಿಗೆ ಬಲವಂತವಾಗಿ ಅಥವಾ ಅನಪೇಕ್ಷಿತವಾಗಿ ಕಲಿಸುವುದಕ್ಕೆ ಸೀಮಿತಗೊಳಿಸಬಾರದು. ಬದಲಾಗಿ ವಾಸ್ತವ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ಕಲಿಸುವುದು ಅಗತ್ಯವಾಗಿದೆ. ಇದೆಲ್ಲದರ ಹಿನ್ನೆಲೆಯಲ್ಲಿ ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಭಾರತದ ಭೂಗೋಳಶಾಸ್ತ್ರ, ಅರ್ಥಶಾಸ್ತ್ರ ಮತ್ತು ವ್ಯವಹಾರ ಅಧ್ಯಯನ ವಿಷಯಗಳನ್ನು ಒಳಗೊಂಡಿರುವ ಸಮಾಜ ವಿಜ್ಞಾನವನ್ನು ಕಲಿಕಾ ಪ್ರಕ್ರಿಯೆಗೆ ಕಲ್ಪಿಸಲು ಸಂಶೋಧನಾ ವಿಧಾನ, ಸಮಸ್ಯೆ ಪರಿಹಾರ ವಿಧಾನ, ಮೂಲಾಧಾರ ವಿಧಾನ, ವೀಕ್ಷಣಾ ವಿಧಾನ, ಪ್ರಯೋಗ ವಿಧಾನ ಮತ್ತು ವಿಶ್ಲೇಷಣಾತ್ಮಕ ವಿಧಾನಗಳನ್ನು ಅಳವಡಿಸಿ ಸಿದ್ಧಪಡಿಸಲಾಗಿದೆ.

ಸಮಾಜ ವಿಜ್ಞಾನ ಪಠ್ಯ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳು ಯೋಚಿಸುವಂತೆ ಮಾಡಿ ಪರಿಕಲ್ಪನೆಯನ್ನು ತಂದುಕೊಂಡು ಪರಿಕರಗಳ ಮೂಲಕ ಚಟುವಟಿಕೆಯನ್ನು ಮಾಡಿ, ಸಾಮರ್ಥ್ಯದ ಮೂಲಕ ಜ್ಞಾನ ಪಡೆಯುವಂತೆ ಪ್ರತಿಯೊಬ್ಬ ಅನುಕೂಲಕಾರರು ಅನುಕೂಲಿಸಬೇಕಾಗಿರುವುದು ಇಂದಿನ ಅಗತ್ಯವಾಗಿದೆ. ಪ್ರಸ್ತುತ ಪಠ್ಯವು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿಲ್ಲ. ಕಲಿಕೆಯನ್ನು ಕಲಿಯುವವನ ಅನುಭವಗಳ ಮೂಲಕ ಜೀವನಾವಶ್ಯಕತೆಗಳಿಗೆ ಒತ್ತುಕೊಟ್ಟು ಕಂಠಪಾಠ ಹಾಗೂ ಪರೀಕ್ಷಾ ಒತ್ತಡದಿಂದ ಕಡ್ಡಾಯವಾಗಿ ದೂರ ಮಾಡಿ ಬಾಹ್ಯ ಅನುಭವಕ್ಕೆ ಅವಕಾಶ ಮಾಡುವುದಾಗಿದೆ.

ಇವೆಲ್ಲಾ ಸಹಕಾರಗಳೊಂದಿಗೆ ಮಗುವು ಜೀವನ ಮೌಲ್ಯಗಳನ್ನು ರೂಢಿಸಿಕೊಂಡು ಸನ್ನಡತೆಯ ಪ್ರವೃತ್ತಿಯೊಂದಿಗೆ ಕೌಶಲ್ಯಪೂರ್ಣವಾದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಇದು ಸಾಕಾರಗೊಂಡಲ್ಲಿ ಇಂತಹ ಹೊಸ ಶಿಕ್ಷಣ ಕ್ರಮದ ಜಾರಿಯಿಂದ ನವಯುಗ ಸೃಷ್ಟಿಯಾಗುತ್ತದೆ ಎಂಬ ಆಶಯ ನಮ್ಮದು.

**ಅಧ್ಯಕ್ಷರು**

**ಹೊನ್ನಯ್ಯ**

## ಹತ್ತನೇ ತರಗತಿಯ ಸಮಾಜ ವಿಜ್ಞಾನ ಪಠ್ಯಕ್ಕೆ ಸಂಬಂಧಿಸಿದ ರಚನಾ – 3ರ ತರಬೇತಿಯ ಉದ್ದೇಶಗಳು

2012–13ನೇ ಸಾಲಿನಿಂದ ಎನ್.ಸಿ.ಎಫ್ 2005 ರ ಆಧಾರದ ಮೇಲೆ ಕರ್ನಾಟಕ ರಾಜ್ಯದಲ್ಲೂ ಹೊಸ ಪಠ್ಯಕ್ರಮವನ್ನು ಜಾರಿಗೊಳಿಸುತ್ತಿದ್ದು ಪ್ರಸಕ್ತ ಶೈಕ್ಷಣಿಕ ವರ್ಷ 7 ಮತ್ತು 10ನೇ ತರಗತಿಗೆ ಪರಿಷ್ಕೃತ ಪಠ್ಯಪುಸ್ತಕಗಳನ್ನು ರಚಿಸಿ ಅನುಷ್ಠಾನಗೊಳಿಸಲಾಗಿದೆ.

ಪರಿಷ್ಕೃತ ಪಠ್ಯಕ್ರಮ, ಪಠ್ಯವಸ್ತು ಮತ್ತು ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿರುವ ಹೊಸ ಪರಿಕಲ್ಪನೆಗಳ ಬಗ್ಗೆ ಅನುಕೂಲಿಸುವಿಕೆಯ ಸಂದರ್ಭದಲ್ಲಿ ಅನುಕೂಲಕಾರರು ಅನುಸರಿಸಬೇಕಾದ ವಿಧಿ, ವಿಧಾನಗಳನ್ನು ಅರ್ಥೈಸಿಕೊಳ್ಳಲು, ಕೈಗೊಳ್ಳಬಹುದಾದ ಚಟುವಟಿಕೆ ಹಾಗೂ ಮೌಲ್ಯಮಾಪನ ಪ್ರಕ್ರಿಯೆಯನ್ನು ಕುರಿತಂತೆ ಮಾರ್ಗದರ್ಶನವನ್ನು ನೀಡಲು, ರಚನಾ 3 ರನ್ನು ನುರಿತ, ಅನುಭವಿ, ತರಗತಿ ಅನುಕೂಲಕಾರರಿಂದ ರಚಿಸಿ, ಈ ಸಂಬಂಧದ ತರಬೇತಿಯನ್ನು ಪ್ರೌಢಶಾಲೆಯ ಎಲ್ಲಾ ಸಮಾಜ ವಿಜ್ಞಾನ ಅನುಕೂಲಗಾರರಿಗೆ ತಲುಪಿಸುವ ದೃಷ್ಟಿಯಿಂದ 5 ದಿನಗಳ ತರಬೇತಿಯನ್ನು ನೀಡುವುದು. ಈ ಸಂದರ್ಭದಲ್ಲಿ ರಚನಾ–3ರ ಸಾಹಿತ್ಯದ ಅನ್ವಯ ತರಬೇತಿ ನೀಡಿ ಶಿಕ್ಷಕ (ಅನುಕೂಲಕಾರರು) ಸಮುದಾಯ ತಮ್ಮ ತರಗತಿಯಲ್ಲಿ ಕ್ರಮವಾಗಿ ಬಳಸಿಕೊಂಡು ಪರಿಣಾಮಕಾರಿ ಹಾಗೂ ಅನುಭವಾತ್ಮಕ ಕಲಿಕೆಗೆ ಆದ್ಯತೆ ನೀಡಬೇಕೆಂಬುದು ಇಲ್ಲಿನ ಪ್ರಮುಖ ಉದ್ದೇಶವಾಗಿದೆ.

ಅಲ್ಲದೆ ಮಗು ಸಹಜ ಕಲಿಕೆಯೊಂದಿಗೆ ಅನ್ವಯ, ಆಸಕ್ತಿ, ಮೌಲ್ಯ, ಕೌಶಲ್ಯ, ಮನೋಧೋರಣೆಗಳನ್ನು ಸಮಾಜಮುಖಿಯಾಗಿ ಬಳಸಿಕೊಂಡು ಘಟಕಗಳ ಅರ್ಥೈಸಿಕೊಳ್ಳುವಿಕೆ ಚಿಂತನೆ, ವಿಮರ್ಶೆ, ಅಭಿಪ್ರಾಯ, ತೀರ್ಮಾನಗಳಲ್ಲಿ ಮುನ್ನಡೆಯಲಿ ಎಂದು ಭಾವಿಸಲಾಗಿದೆ.

ಈ ಮೇಲ್ಕಂಡ ಎಲ್ಲಾ ಹಿನ್ನಲೆಯನ್ನು ಒಳಗೊಂಡಂತೆ ರಚನಾ–3 ರ ತರಬೇತಿಯು ಕೆಳಗಿನ ಉದ್ದೇಶಗಳನ್ನು ಹೊಂದಿದೆ.

1. ತರಗತಿಯಲ್ಲಿ ಸಂವಿಧಾನಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯುವುದು.

2. ಪಠ್ಯದಲ್ಲಿನ ಹೊಸ ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳುವುದು.

3. ಸಮಾಜ ವಿಜ್ಞಾನದಲ್ಲಿನ ನೂತನ ಅನುಕೂಲಿಸುವ ವಿಧಾನಗಳನ್ನು ಬಳಸಿಕೊಂಡು ಪಠ್ಯವನ್ನು ತರಗತಿ ಕೋಣೆಯಲ್ಲಿ ಪ್ರಸ್ತುತಪಡಿಸುವುದು.

4. ಕಲಿಕೆಯಲ್ಲಿ ಚಟುವಟಿಕೆಗಳಿಗೆ ಹೆಚ್ಚಿನ ಆಧ್ಯತೆಯನ್ನು ನೀಡಿ, ಆ ಮೂಲಕ ಕಲಿಕಾರ್ಥಿ ಸ್ವ ಅನುಭವ, ಸ್ವ ಕಲಿಕೆ ಮೂಲಕ ತೊಡಗಿಸಿಕೊಂಡು ಜ್ಞಾನವನ್ನು ಪಡೆಯುವುದು ಹೇಗೆ ಎಂಬುದನ್ನು ಶಿಬಿರಾರ್ಥಿಗಳೊಂದಿಗೆ ಚರ್ಚಿಸಿ ತೀರ್ಮಾನಿಸುವುದು.

5. ಕಲಿಕಾಂಶವನ್ನು ಪಠ್ಯಪುಸ್ತಕದ ಆಚೆ ಶ್ರೀಮಂತಗೊಳಿಸಿಕೊಳ್ಳಲು ಜ್ಞಾನ ರಚನೆ ಮತ್ತು ಜ್ಞಾನ ಪುನರ್‌ರಚನೆಯನ್ನು ಅನುಕೂಲಕಾರ ಪಠ್ಯದಲ್ಲಿ ಪರಿಭಾವಿಸುವ ಕ್ರಮವನ್ನು ತಿಳಿಸುವುದು.

6. ರಚನಾ–3 ರಲ್ಲಿ ಕಲಿಕಾ ವಿಧಾನ ಮತ್ತು ಚಟುವಟಿಕೆಗಳಿಗೆ ಪ್ರಾಧಾನ್ಯತೆಯನ್ನು ನೀಡಲಾಗಿದ್ದು, ಈ ಮೂಲಕ ಮಕ್ಕಳಲ್ಲೂ ಅನುಭವಾತ್ಮಕ ಕಲಿಕೆ ಮೇಳವಿಸಿ, ಪಠ್ಯದಲ್ಲಿನ ಹೊಸ ಅಂಶಗಳ ಹಾಗೂ ಅರ್ಥೈಸಿಕೊಳ್ಳುವಿಕೆಯ ಸಂದರ್ಭದ ಬಗ್ಗೆ ಅನುಕೂಲಕಾರನು ತರಗತಿ ಕೋಣೆಯನ್ನು ಹೇಗೆ ಸಿದ್ಧತೆ ಮಾಡಿಕೊಳ್ಳಬೇಕೆಂಬ ಹಿನ್ನೆಲೆಯನ್ನು ಈ ತರಬೇತಿ ಪ್ರಸ್ತುತ ಪಡಿಸುತ್ತದೆ.

7. ಪ್ರಸಕ್ತ ವರ್ಷದ ಹತ್ತನೇ ತರಗತಿಯ ಕಲಿಕೆ ಮತ್ತು ಮೌಲ್ಯಮಾಪನವು 80–20ರ ಅನುಪಾತದ ಚೌಕಟ್ಟಿನ್ನು ಹೊಂದಿದ್ದು ಇದಕ್ಕೆ ಪೂರಕವಾದ ಅನುಕೂಲಕಾರನ ವಿವಿಧ ಹಂತದ ಶೈಕ್ಷಣಿಕ ಕಾರ್ಯಗಳೇನು ಎಂಬುದನ್ನು ಈ ತರಬೇತಿಯ ಸಂದರ್ಭದಲ್ಲಿ ಸೂಚಿಸಲಾಗುವುದು.

8. ಎನ್.ಸಿ.ಎಫ್‌ನ ಬಹುಮುಖ್ಯ ಆಶಯವಾದಂತ ಕಲಿಕೆಯು ರಚನಾತ್ಮಕ ಸ್ವರೂಪದಲ್ಲಿ ಗುಣಾತ್ಮಕ ಹಾಗೂ ಪರಿಣಾಮಕಾರಿ ಕಲಿಕೆಗೆ ತರಗತಿಯಲ್ಲಿ ಅನುಕೂಲಿಸುವುದು ಹೇಗೆ ಎಂಬ ವಿಚಾರವನ್ನು ಚರ್ಚಿಸುವುದು.

9. ಮಗು ತರಗತಿಯಲ್ಲಿ ಕಲಿಯುವುದೇ ಅಂತಿಮ ಎಂಬ ಸಾಂಪ್ರದಾಯಿಕ ಭಾವನೆಯನ್ನು 'ಮಗು' ಮತ್ತು ಅನುಕೂಲಕಾರರಲ್ಲಿ ಮರೆಯಾಗುವಂತೆ ಮಾಡಿ ಶಾಲೆಗಳು ಮಗುವಿಗೆ ಕಲಿಯಲು ಬೇಕಾಗಿರುವ ಪ್ರಜ್ಞೆಯನ್ನು ಮಾತ್ರ ಬೆಳಸುತ್ತವೆ ಎಂಬ ಅರ್ಥಪೂರ್ಣ ಪ್ರಕ್ರಿಯೆಯನ್ನು ಅನುಕೂಲಕಾರ ಅರ್ಥೈಸಿಕೊಳ್ಳುವುದು

ಹಾಗೂ ಮಕ್ಕಳನ್ನು ಈ ನಿಟ್ಟಿನಲ್ಲಿ ಸಿದ್ಧಗೊಳಿಸುವ ವಿಧಾನಗಳ ಅರಿವನ್ನು ತರಬೇತುದಾರರಿಗೆ ತಿಳಿಸಲಾಗುವುದು.

10. ಅನುಕೂಲಕಾರರು, ಈ ರಚನಾ–3 ರ ಸಾಹಿತ್ಯವನ್ನು ಸತತವಾಗಿ ಓದಿ ಅರ್ಥೈಸಿಕೊಳ್ಳುವುದರ ಜೊತೆಗೆ, ರಚನಾ 1 ಮತ್ತು 2 ನ್ನು ಇದರೊಟ್ಟಿಗೆ ಹಿಡಿಯಾಗಿ ಓದಿ ನೂತನ ಶಿಕ್ಷಣ ಕ್ರಮ ಕುರಿತ ಪಠ್ಯಪೂರಕ ಕಲಿಕಾ ಪ್ರಕ್ರಿಯೆಗೆ ತನ್ನನ್ನು ತಾನು ಅಣಿಗೊಳಿಸಿಕೊಳ್ಳುವಂತೆ ಮನವರಿಕೆ ಮಾಡುವುದು ಈ ತರಬೇತಿಯ ಬಹುದೊಡ್ಡ ಉದ್ದೇಶವಾಗಿದೆ.

11. ಮಕ್ಕಳ ಕಲಿಕೆಯಲ್ಲಿ ತೊಡಗಿಸಿಕೊಳ್ಳುವ ಅನುಕೂಲಕಾರನು ಕಲಿಕಾ ಪ್ರಕ್ರಿಯೆಗೆ ಸಂಬಂಧಿಸಿದಂತೆ ಯಾವುದೇ ಅನಾಪೇಕ್ಷಿತವಾದ ಒಡಂಬಡಿಕೆಗಳಿಗೆ ಜೋತು ಬೀಳದೆ ಹೊಸ ಪಠ್ಯದ ಸೈದ್ಧಾಂತಿಕ ಗುಣಾತ್ಮಕತೆಯ ಅರಿವು ಮಗುವನ್ನು ತಲುಪುವಲ್ಲಿ ಎನ್.ಸಿ.ಎಫ್.ನ ಆಶಯ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಉದ್ದೇಶಗಳನ್ನು ಒಳಗೊಂಡ 'ಹೃದಯಶಿಕ್ಷಣ' ಕಲ್ಪಿಸುವುದು ಹೇಗೆ ಎಂಬುದನ್ನು ತರಬೇತಿ ಸಂದರ್ಭದಲ್ಲಿ ವಿವರಿಸಲಾಗುವುದು.

12. ಸಮಾಜ ವಿಜ್ಞಾನದಂತ ಪಠ್ಯ ವಸ್ತು ಕಲಿಕೆಯ ಮೂಲಕ 'ಸಮರಸಬಾಳ್ವೆ' ವಿಶ್ವಕುಟುಂಬದ ಪರಿಕಲ್ಪನೆ, ಶಾಂತಿಯ ಸಮಾನತೆ ಬೆಳೆಯುತ್ತಿರುವ ಮಗುವಿನಲ್ಲಿ ದಾಖಲುಗೊಳ್ಳುವ ಪ್ರಕ್ರಿಯೆಗಳ ಪರಿಚಯವನ್ನು ಮಾಡಿಕೊಡುವುದು.

ಹೀಗೆ ರಚನಾ –3 ರ ತರಬೇತಿಯು ವಿಶಿಷ್ಟವಾದ ಹಾಗೂ ವಿನೂತನವಾದ ಉದ್ದೇಶಗಳನ್ನು ಒಳಗೊಂಡಂತೆ ಪ್ರಸ್ತುತಗೊಳ್ಳುತ್ತಿರುವುದರಿಂದ ಪ್ರತಿಯೊಬ್ಬ ತರಬೇತು ದಾರನು ಈ ಸಂದರ್ಭದಲ್ಲಿ ತನ್ನ ಜವಾಬ್ದಾರಿಗಳೇನು? ಕಲಿಕೆಯಲ್ಲಿ ತನ್ನ ಶ್ರೇಷ್ಠ ಸಾಮರ್ಥ್ಯ ವನ್ನು ವಿಕಾಸಮಾಡಿಕೊಳ್ಳಲು ತರಬೇತಿಯನ್ನು ಬಳಸಿಕೊಳ್ಳುವುದು ಇಲ್ಲಿನ ಸಂಪನ್ಮೂಲ ವ್ಯಕ್ತಿಗಳೊಂದಿಗೆ ಚರ್ಚಿಸಿ ನವನೀತದಂತೆ ಕಲಿಕಾ ಪ್ರಜ್ಞೆಯನ್ನು ಪ್ರತಿಯೊಬ್ಬ ತರಬೇತು ದಾರನೂ ಪಡೆಯುವುದು ಇಲ್ಲಿನ ಬಹು ಮುಖ್ಯ ಉದ್ದೇಶವಾಗಿದೆ.

## 10ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದ ಪರಿಚಯ

ಎನ್.ಸಿ.ಎಫ್ 2005 ರ ಆಧಾರದ ಮೇಲೆ ರಚಿಸಲ್ಪಟ್ಟಿರುವ 10ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕವು ವೈಶಿಷ್ಟತೆಯಿಂದ ಪರಿಷ್ಕೃತಗೊಂಡಿದೆ. ಈ ಪಠ್ಯಪುಸ್ತಕವು ವಿದ್ಯಾರ್ಥಿಗಳ ಸರ್ವಾಂಗೀಣ ವಿಕಾಸಕ್ಕೆ ಪೂರಕ ಜ್ಞಾನವನ್ನು ನೀಡುತ್ತದೆ. ಸಮಾಜ ವಿಜ್ಞಾನದ ಪಠ್ಯಪುಸ್ತಕದಲ್ಲಿ ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಭೂಗೋಳಶಾಸ್ತ್ರ, ಅರ್ಥ ಶಾಸ್ತ್ರ ಮತ್ತು ವ್ಯವಹಾರ ಅಧ್ಯಯನ ವಿಭಾಗಗಳು 8 ಮತ್ತು 9 ನೇ ತರಗತಿಗಳು ಸಮಾಜ ವಿಜ್ಞಾನ ಪಠ್ಯಪುಸ್ತಕದ ಮುಂದುವರೆದ ಭಾಗವಾಗಿದೆ.

ಸಮಾಜ ವಿಜ್ಞಾನ ಪಠ್ಯಪುಸ್ತಕದ ಮುಖಪುಟ ಗಾಂಧೀಜಿಯವರನ್ನೊಳಗೊಂಡ ಸ್ವಾತಂತ್ರ್ಯ ಹೋರಾಟವನ್ನು ಪ್ರತಿಬಿಂಬಿಸುತ್ತಾ ವಿದ್ಯಾರ್ಥಿಗಳಲ್ಲಿ ದೇಶಪ್ರೇಮವನ್ನು ಪ್ರೇರೇಪಿಸು ವಂತೆ ಸುಂದರವಾಗಿ ಮೂಡಿಬಂದಿದೆ. ಹಿಂಭಾಗದ ಪುಟವು ನಮ್ಮ ದೇಶದ ಹಸಿರುಕ್ರಾಂತಿ, ಕೈಗಾರಿಕಾಕ್ರಾಂತಿ, ಸಾರಿಗೆ ಕ್ಷೇತ್ರದ ಅಭಿವೃದ್ಧಿ ಮತ್ತು ಪರ್ವತಾರೋಹಣದ ಸಾಹಸವನ್ನು ಎತ್ತಿತೋರಿಸುತ್ತದೆ. ಎನ್.ಸಿ.ಎಫ್ 2005 ರ ಆಶಯದಂತೆ ಸುಲಭವಾಗಿ ಅರ್ಥೈಸಿಕೊಳ್ಳುತ್ತಾ, ವಿವಿಧ ಚಟುವಟಿಕೆಗಳ ಮೂಲಕ ಕಟ್ಟಿಕೊಂಡ ಜ್ಞಾನವನ್ನು ಕೌಶಲ್ಯಗಳನ್ನು ನಿತ್ಯಜೀವನದಲ್ಲಿ ಅಳವಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಪಠ್ಯಪುಸ್ತಕದ ಪ್ರತಿ ವಿಭಾಗದ ಅಧ್ಯಾಯಗಳಲ್ಲೂ ಘಟಕಕ್ಕೆ ಪೂರಕವಾಗಿರುವ ಹೆಚ್ಚಿನ ಮಾಹಿತಿಗಳನ್ನು ವಿಶೇಷ ಅಂಕಣ (ಬಾಕ್ಸ್) 'ನಿಮಗಿದು ತಿಳಿದಿರಲಿ' ಎಂಬ ಒಕ್ಕಣಿಕೆಯಲ್ಲಿ ನೀಡಲಾಗಿರುವುದು ಪರೀಕ್ಷೆಗೆ ಪರಿಗಣಿಸದೇ ಹೆಚ್ಚಿನ ಜ್ಞಾನ ನೀಡುವುದು ವಿಶೇಷವಾಗಿದೆ. ಅಂತೆಯೇ ಪ್ರತಿ ಅಧ್ಯಾಯದ ಕೊನೆಯ ಭಾಗದಲ್ಲಿ ಪೂರಕವಾದ ಚಟುವಟಿಕೆಗಳನ್ನು ಯೋಜನೆಗಳನ್ನು ಸೂಚಿಸಿ ಶಾಲೆಯ ಹೊರಗಿನ ಜ್ಞಾನ ಕಟ್ಟಿಕೊಳ್ಳುತ್ತಾ ಸ್ವಯಂ ಕಲಿಕೆಗೆ ಅವಕಾಶ ಕಲ್ಪಿಸಲಾಗಿದೆ.

ಪಠ್ಯಪುಸ್ತಕವು ಕೇವಲ ಪರೀಕ್ಷಾ ದೃಷ್ಟಿಯಿಂದ ರಚಿತವಾಗಿರದೇ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕಲಿಕಾರ್ಥಿಯು ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುತ್ತಾ ಜ್ಞಾನ

ಪಡೆಯಲು, ವಿವಿಧಾತ್ಮಕ ಚಿಂತನೆ ಮಾಡಲು ಪೂರಕವಾಗಿದೆ. ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಇಸವಿಗಳನ್ನು ನೀಡಿ ಕಲಿಕಾಂಶವನ್ನು ಸರಳೀಕರಿಸಲಾಗಿದೆ.

ಇತಿಹಾಸ ವಿಭಾಗದಲ್ಲಿ ಎರಡು ಅಧ್ಯಾಯಗಳನ್ನು ಹೊಸದಾಗಿ ಸೇರಿಸಲಾಗಿದೆ. 'ವಸಾಹತು ಆಳ್ವಿಕೆಯಲ್ಲಿ ಕನ್ನಡ ಮಾತನಾಡುವ ಪ್ರದೇಶಗಳು' 'ಈ ಅಧ್ಯಾಯದ ಮೂಲಕ ಕನ್ನಡ ನಾಡಿನಲ್ಲಿ ಬ್ರಿಟೀಷರ ಆಳ್ವಿಕೆಯ ವಿರುದ್ಧ ನಡೆದ ಪ್ರತಿಭಟನೆಗಳ ಪರಿಚಯವನ್ನು ನೀಡಲಾಗಿದೆ. 'ಜನಪದ ಚರಿತ್ರೆ' ಈ ಘಟಕದ ಮೂಲಕ ಮೌಖಿಕ ಚರಿತ್ರೆಯ ಪ್ರಾಮುಖ್ಯತೆಯ ಜ್ಞಾನವನ್ನು ಒದಗಿಸಲಾಗಿದೆ. ಇತಿಹಾಸದಲ್ಲಿ ಯುರೋಪಿಯನ್ನರ ಆಗಮನದಿಂದ ಪ್ರಾರಂಭಿಸಿ, ಅವರ ಆಳ್ವಿಕೆ, ದಬ್ಬಾಳಿಕೆ ದೇಶೀಯ ದೊರೆಗಳ ಹೋರಾಟ, ಪ್ರಥಮ ಸ್ವಾತಂತ್ರ್ಯ ಸಂಗ್ರಾಮ, ಸ್ವಾತಂತ್ರ್ಯ ಹೋರಾಟ, ಸ್ವಾತಂತ್ರ್ಯೋತ್ತರ ಭಾರತ ಈ ಅಧ್ಯಾಯಗಳ ಮೂಲಕ ಭಾರತದ ಇತಿಹಾಸದ ಜ್ಞಾನವನ್ನು ಕಥೆಯ ರೂಪದಲ್ಲಿ ಹೆಣೆದು ಇತಿಹಾಸ ಅಧ್ಯಯನದಲ್ಲಿ ಕಲಿಕಾರ್ಥಿಯ ಆಸಕ್ತಿ ತಳೆಯುವ ನಿಟ್ಟಿನಲ್ಲಿ ರೂಪಿಸಲಾಗಿದೆ.

ಭಾರತಕ್ಕೆ ಯುರೋಪಿಯನ್ನರ ಆಗಮನ ಈ ಘಟ್ಟವನ್ನು ಅಭ್ಯಸಿಸಿದ ಮಗು ತಾರ್ಕಿಕ ಚಿಂತನೆಯಲ್ಲಿ ತೊಡಗುತ್ತದೆ. ಉದಾ: ವ್ಯಾಪಾರದಿಂದ ವಸಾಹತು ಆಳ್ವಿಕೆಯ ಮೂಲಕ ಯುರೋಪಿನ ಚಿಕ್ಕರಾಷ್ಟ್ರ ಭಾರತೀಯರನ್ನು ಶೋಷಿಸಿದ ಬಗೆಯನ್ನು ಚಿಂತಿಸಿದ ಮಗು ಅರ್ಥೈಸಿಕೊಳ್ಳುತ್ತದೆ. ಏಕೆಂದರೆ ಯೂರೋಪಿಯನ್ನರ ಶಕ್ತಿ, ಯುಕ್ತಿ, ತಂತ್ರ, ಕುತಂತ್ರ, ಜೊತೆಗೆ ಭಾರತೀಯರ ದೌರ್ಬಲ್ಯ ಸ್ವಾರ್ಥತೆ, ಅನೈಕ್ಯತೆ ಎಂಬುದಾಗಿ ತೀರ್ಮಾನಿಸುತ್ತದೆ.

ಭಾರತದಲ್ಲಿ ಬ್ರಿಟಿಷ್ ಆಡಳಿತದ ಪರಿಣಾಮಕಾರಿ ಈ ಘಟಕದಲ್ಲಿ ಇಂಗ್ಲಿಷರ ಶಿಕ್ಷಣದ ಪ್ರಭಾವವನ್ನು ಅರಿತ ಮಗು ಪಠ್ಯದ ಹೊರತಾಗಿ ಚಿಂತಿಸುತ್ತದೆ. ಇಂಗ್ಲೀಷರು ವಸಾಹತು ರಾಷ್ಟ್ರಗಳಲ್ಲಿ ಇಂಗ್ಲೀಷ್‌ರ ಶಿಕ್ಷಣ ಜಾರಿಗೆ ತಂದಿದ್ದು ಇಂದು ಪ್ರಪಂಚದ ಅತಿ ಹೆಚ್ಚು ರಾಷ್ಟ್ರಗಳ ಸಂಪರ್ಕಭಾಷೆಯಾಗಿ ಇಂಗ್ಲಿಷ್ ಭಾಷೆ ಬೆಳೆಯಲು ಏನು ಕಾರಣ? ಎಂದು ಉತ್ತರ ಇಷ್ಟೇ. ಇಂಗ್ಲೆಂಡಿನ ಜನತೆಯ ಭಾಷಾಭಿಮಾನ ನಿಷ್ಠೆ, ಬದ್ಧತೆ ಕಾರಣ ಎಂಬ ನಿರ್ಧಾರಕ್ಕೆ ಬರುತ್ತಾರೆ. 'ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆ' ಎಂಬ

ಅಧ್ಯಾಯದಲ್ಲಿ ಪ್ರಜಾಪ್ರಭುತ್ವ, ಸ್ವಾತಂತ್ರ್ಯ, ಸಮಾನತೆ, ರಾಷ್ಟ್ರೀಯತೆಯಂತಹ ವಿಚಾರಗಳು ಹಾಗೂ ಪಾಶ್ಚಾತ್ಯ ಪರಿಕಲ್ಪನೆಗಳನ್ನು ಕಲಿತ ಮಗು ಸಮಾಜ ಸುಧಾರಣೆ ಎದೆಗಾರಿಕೆಯನ್ನು ಮೆಚ್ಚುವುದರ ಜೊತೆ ಅವರ ಗುಣಗಳನ್ನು ತನ್ನ ಜೀವನದಲ್ಲಿ ಸಂದರ್ಭ ಬಂದಾಗ ಅಳವಡಿಸಿಕೊಳ್ಳುವಲ್ಲಿ ಮುಂದಾಗುತ್ತದೆ. 20ನೇ ಶತಮಾನದ ರಾಜಕೀಯ ಆಯಾಮಗಳು ಈ ಅಧ್ಯಾಯವನ್ನು ಅಭ್ಯಸಿಸುವಾಗ ಜಾಗತಿಕ ಯುದ್ಧಗಳು, ವಿದ್ಯಮಾನಗಳನ್ನು ವಿಮರ್ಶಾತ್ಮಕವಾಗಿ ತಿಳಿದುಕೊಳ್ಳುತ್ತದೆ. ಉದಾಃ ಎರಡನೇ ಮಹಾಯುದ್ಧದ ನಂತರದ ಬೆಳವಣಿಗೆಯಲ್ಲಿನ ಕೇವಲ ಸಮರದ ಸನ್ನಿವೇಶದಲ್ಲಿ ಸಮರ್ಥಿಸಿಕೊಂಡು ಮೆಚ್ಚುಗೆ ವ್ಯಕ್ತಪಡಿಸುತ್ತದೆ. ವಿಶ್ವಶಾಂತಿ, ವಿಶ್ವದ ರಾಷ್ಟ್ರಗಳ ನಡುವಿನ ಸಹಕಾರ, ಬಾಂಧವ್ಯಗಳನ್ನು ಕುರಿತು ಚಿಂತನೆ ನಡೆಸುತ್ತದೆ.

ರಾಜ್ಯಶಾಸ್ತ್ರದಲ್ಲಿ ಭಾರತದ ಸಮಸ್ಯೆಗಳು, ಅವುಗಳ ಪರಿಹಾರೋಪಾಯಗಳು, ಭಾರತದ ವಿದೇಶಾಂಗನೀತಿ, ಅನ್ಯರಾಷ್ಟ್ರದೊಂದಿಗೆ ಭಾರತದ ಸಂಬಂಧ, ಜಾಗತಿಕ ಸಮಸ್ಯೆಗಳು ಅವುಗಳಲ್ಲಿ ಭಾರತದ ಪಾತ್ರವನ್ನು ಅರ್ಥೈಸಿಕೊಳ್ಳಲು, ಆ ಕುರಿತು ಜ್ಞಾನ ಪಡೆಯಲು ಸಾಕಷ್ಟು ಮಾಹಿತಿಗಳನ್ನು ನೀಡುತ್ತಾ ಬರಲಾಗಿದೆ. 'ಭಾರತದ ಸಮಸ್ಯೆಗಳು ಮತ್ತು ಅವುಗಳ ಪರಿಹಾರೋಪಾಯಗಳು' ಈ ಅಧ್ಯಾಯವನ್ನು ವಿಮರ್ಶಾತ್ಮಕವಾಗಿ ಅರ್ಥೈಸಿಕೊಳ್ಳಲು ಅವಕಾಶಗಳಿವೆ. ಉದಾ: ಲಂಚಕೋರತನ, ಕಳ್ಳಸಾಗಣೆ, ಭ್ರಷ್ಟಾಚಾರ, ಈ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ತನ್ನ ಸಾಮಾಜಿಕ ಹೊಣೆಗಾರಿಕೆಯನ್ನು ಮಗು ಕಲಿಯುವಂತಾಗುತ್ತದೆ.

ಸಮಾಜಶಾಸ್ತ್ರದ ಮೂಲಕ, ಸಾಮಾಜಿಕ ಪಿಡುಗುಗಳು, ಸಾಮಾಜಿಕ ಸಮಸ್ಯೆಗಳು, ಸಾಮೂಹಿಕ ವರ್ತನೆ, ಪ್ರತಿಭಟನೆಗಳ ಪರಿಚಯದ ಮೂಲಕ ಮಗು ಅವುಗಳ ಪರಿಹಾರೋಪಾಯಗಳನ್ನು ಚಿಂತಿಸುತ್ತಾ ಜ್ಞಾನಕಟ್ಟಿಕೊಳ್ಳುತ್ತದೆ.

ಭೂಗೋಳಶಾಸ್ತ್ರವು ಭಾರತದ ಪ್ರಾಕೃತಿಕ ಲಕ್ಷಣಗಳು ಭೂಸ್ವರೂಪ, ನೈಸರ್ಗಿಕ ಸಂಪನ್ಮೂಲಗಳ ಮಾಹಿತಿ, ಸಾರಿಗೆ, ಸಂಪರ್ಕ, ಕೈಗಾರಿಕೆ ಹಾಗೂ ನೈಸರ್ಗಿಕ ವಿಕೋಪಗಳ

ಕುರಿತು ಕೂಲಂಕುಷವಾಗಿ ಚರ್ಚಿಸುತ್ತದೆ. ಕಲಿಕಾರ್ಥಿ ಕೃಷಿ, ಕೈಗಾರಿಕೆ ಮತ್ತು ಸಂಪನ್ಮೂಲಗಳನ್ನು ಅಭ್ಯಸಿಸುವುದರ ಜೊತೆಗೆ ಆ ಕ್ಷೇತ್ರಗಳ ಮಹತ್ವ, ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಲು ಇರುವ ಅವಕಾಶಗಳನ್ನು ಪರಿಚಯಿಸಲಾಗಿದೆ.

ಅರ್ಥಶಾಸ್ತ್ರ ವಿಭಾಗದಲ್ಲಿ ಸಾಮಾಜಿಕ ಹಣಕಾಸಿನ ಮಹತ್ವವನ್ನು ತಿಳಿಸುತ್ತಾ ಸರ್ಕಾರದ ತೆರಿಗೆಯ ಉದ್ದೇಶ, ಅವುಗಳ ಸದ್ಬಳಕೆ, ತೆರಿಗೆ ಪಾವತಿಯಲ್ಲಿ ಪ್ರಜೆಗಳ ಜವಾಬ್ದಾರಿಗಳನ್ನು ಅರಿಯಲು ಅವಕಾಶವನ್ನು ಕಲ್ಪಿಸಲಾಗಿದೆ. ಗ್ರಾಮೀಣಾಭಿವೃದ್ಧಿ ಘಟ್ಟದಲ್ಲಿ 'ಮಹಿಳೆ ಮತ್ತು ಅಭಿವೃದ್ಧಿ' ಕುರಿತು ಅಭ್ಯಾಸ ಮಾಡಿ ಕಲಿಕಾರ್ಥಿ ಮಹಿಳೆಯರನ್ನು ಕುರಿತು ಗೌರವ ಭಾವನೆ, ಸಮಾನತೆ ಭಾವನೆಯನ್ನು ಬೆಳೆಸಿಕೊಳ್ಳುತ್ತಾನೆ.

ವ್ಯವಹಾರ ಅಧ್ಯಯನದ ವಿಭಾಗದಲ್ಲಿ ಉದ್ಯಮಗಾರಿಕೆ ಘಟಕದಲ್ಲಿ ಪ್ರಖ್ಯಾತ ಉದ್ಯಮದಾರರಾಗಿರುವ ಡಾ। ಪ್ರತಾಪ್‌ರೆಡ್ಡಿ, ನರೇಶ್ ಗೋಯಲ್, ನಾರಾಯಣಮೂರ್ತಿ, ಧೀರುಬಾಯಿ ಅಂಬಾನಿ, ಅಜಿತ್ ಪ್ರೇಮ್‌ಜಿ ಮುಂತಾದವರ ಪರಿಚಯದ ಮೂಲಕ ವಿದ್ಯಾರ್ಥಿಗಳು ಶ್ರಮ, ಸಾಧನೆ, ನಿಷ್ಠೆ, ಸೇವೆ, ಸಮರ್ಪಣಾ ಮನೋಧೋರಣೆಗಳನ್ನು ಬೆಳೆಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಒಟ್ಟಿನಲ್ಲಿ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಶಿಶುಕೇಂದ್ರೀಕೃತ ಕಲಿಕೆಗೆ, ಶಾಲೆಯ ಹೊರಗಿನ ಬದುಕಿಗೆ ಬೇಕಾದ ಜ್ಞಾನವನ್ನು, ವಿಷಯದ ಮೇರೆ ಮೀರಿ ಸಮಗ್ರ ದೃಷ್ಟಿಯ ಬೋಧನೆಯನ್ನು, ಪ್ರಜಾಸತ್ತಾತ್ಮಕ ಜವಾಬ್ದಾರಿಗಳನ್ನು ನೀಡುತ್ತಾ ಪಠ್ಯವನ್ನು ಶ್ರೀಮಂತಗೊಳಿಸಲಾಗಿದೆ. ಆ ಮೂಲಕ ಮಗುವಿನ ಸ್ವಕಲಿಕೆ, ಸ್ವಾನುಭವ, ಜ್ಞಾನಪುನರಚನೆ, ವಿಮರ್ಶಾತ್ಮಕ ಚಿಂತನೆಗಳಿಗೆ ಹೆಚ್ಚು ಒತ್ತು ನೀಡಲಾಗಿದೆ. ಎನ್.ಸಿ.ಎಫ್ ಇದರ ಆಶಯವನ್ನು ಈಡೇರಿಸಲು ಪಠ್ಯಪುಸ್ತಕ ಸಮರ್ಥವಾಗುವಂತೆ ರಚಿಸಲ್ಪಟ್ಟಿದೆ.

## ಹತ್ತನೇ ತರಗತಿ ಸಮಾಜ ವಿಜ್ಞಾನ ಪಠ್ಯವನ್ನು ಅರ್ಥೈಸಿಕೊಳ್ಳುವ ಕ್ರಮ

ಕಳೆದೆರಡು ವರ್ಷಗಳಿಂದಲೂ ಸಮಾಜ ವಿಜ್ಞಾನ ವಿಷಯವು ಆರು ವಿಭಾಗಗಳನ್ನು ಒಳಗೊಂಡು ವಿಸ್ತೃತ ರೂಪದ ಹಿನ್ನೆಲೆಯಲ್ಲೂ ಮಗುವಿನ ಕಲಿಕೆಗೆ ಪೂರಕವಾಗುವಂತೆ ರಚನಾತ್ಮಕ, ಅಂತರ್ಗತ ಹಾಗೂ ಸುರುಳಿಯಾಕಾರದ ಕಲಿಕಾ ವಿದ್ಯಾರ್ಥಿಗಳಿಗೆ ಪೂರಕವಾಗಿ ರಚನೆಯಾಗಿರುವುದು ನಮಗೆ ತಿಳಿದ ವಿಷಯವಾಗಿದೆ.

ಸಮಾಜ ವಿಜ್ಞಾನವನ್ನು ಇಸವಿ, ಘಟನೆ, ವಂಶಾವಳಿ, ನಕ್ಷೆ ಹಾಗೂ ಭೂಗೋಳ ವಿಚಾರವನ್ನು ಮಾತ್ರ ತಿಳಿಸುವ ಪಠ್ಯವಿಷಯವಾಗಿರದೆ, ಮಗುವಿನ ಬದುಕಿಗೆ ಬೇಕಾಗಿರುವ ವ್ಯವಹಾರದ ಕೌಶಲ್ಯವನ್ನು ಬೆಳೆಸುವುದಕ್ಕಾಗಿ ವ್ಯವಹಾರ ಅಧ್ಯಯನ ವಿಭಾಗವನ್ನೂ ರಾಷ್ಟ್ರ ಮತ್ತು ವಿಶ್ವದ ವಿವಿಧ ರೀತಿಯ ರಾಜಕೀಯ ಆಯಾಮಗಳನ್ನು ತಿಳಿಯಲು ರಾಜ್ಯಶಾಸ್ತ್ರ ವಿಭಾಗವನ್ನೂ ಮಗು ತನ್ನ ಕುಟುಂಬ ಹಾಗೂ ಸುತ್ತಲ ಸಮಾಜದ ಸಾಮಾಜಿಕ ಸಂಬಂಧಗಳನ್ನು ಅರ್ಥೈಸಿಕೊಳ್ಳಲು ಸಮಾಜಶಾಸ್ತ್ರ ವಿಭಾಗವನ್ನೂ, ಹಣದ ಮಹತ್ವದ ಜೊತೆಗೆ ಖರ್ಚು ವೆಚ್ಚಗಳ ಅರಿವಿನೊಂದಿಗೆ, ಬರಲಿರುವ ತನ್ನ ನಾಳಿನ ಬದುಕಿನ ಆರ್ಥಿಕ ಚಟುವಟಿಕೆಗಳ ಬಗ್ಗೆ ಜ್ಞಾನ ಕಟ್ಟಿಕೊಳ್ಳಲು ಅರ್ಥಶಾಸ್ತ್ರ ವಿಭಾಗವನ್ನು ಕಲಿಕೆಯಲ್ಲಿನ ಜ್ಞಾನ ರಚನಾ ಅಂಶಗಳನ್ನಾಗಿ ಇಡಲಾಗಿದ್ದು ಇವೆಲ್ಲವನ್ನೂ ವ್ಯವಸ್ಥಿತ ರೀತಿಯಲ್ಲಿ ಅನುಕೂಲಿಸಲಾಗುತ್ತಿದೆ.

ಅಂದರೆ ಪ್ರತಿ ವಿಭಾಗದ ಉದ್ದೇಶಗಳನ್ನು ಜ್ಞಾನಾತ್ಮಕ ಹಾಗೂ ತೊಡಗಿಸಿ ಕೊಳ್ಳುವಿಕೆಯ (ಭಾವನಾತ್ಮಕ) ಸ್ವರೂಪದಲ್ಲಿ ಪ್ರತಿಯೊಂದು ಘಟಕವನ್ನು ಅನುಕೂಲಕಾರರು ಅರ್ಥೈಸಿಕೊಳ್ಳಬೇಕೆಂದು ಇಂದಿನ ಶಿಕ್ಷಣ ಕ್ರಮದ ಬಹು ನಿರೀಕ್ಷಿತ ಉದ್ದೇಶವಾಗಿದೆ.

ಈ ನಿಟ್ಟಿನಲ್ಲಿ ಹತ್ತನೇ ತರಗತಿಯ ಇತಿಹಾಸ ವಿಭಾಗವನ್ನು ಅಧ್ಯಯನ ಮಾಡುವ ಮಗು, ಮೊದಲನೆಯ ಅಧ್ಯಾಯವಾದ 'ಭಾರತಕ್ಕೆ ಯೂರೋಪಿಯನ್ನರ ಆಗಮನ'

ಘಟಕವನ್ನು ಬ್ರಿಟೀಷರು ಭಾರತಕ್ಕೆ ಬರಲು ಕಾರಣ ಸಮುದ್ರಯಾನ ಆಗ ಭಾರತದಲ್ಲಿನ ಪರಿಸ್ಥಿತಿ, ಯೂರೋಪಿಯನ್ನರ ಪೈಪೋಟಿ, ಭಾರತದ ನೆಲದಲ್ಲಿನ ಅವರ ಯುದ್ಧಗಳನ್ನು, ಸಾಮ್ರಾಜ್ಯ ವಿಸ್ತರಣೆಯನ್ನು ತಿಳಿದುಕೊಳ್ಳುವ ಜ್ಞಾನಾತ್ಮಕ ಉದ್ದಿಷ್ಟದ ಜೊತೆಗೆ, ಸಮುದ್ರಯಾನದ ವಿಸ್ಮಯಗಳು, ಭಾರತದ ಸಾಂಬಾರ್ ಪದಾರ್ಥಗಳ ವೈಶಿಷ್ಟ್ಯ, ಬ್ರಿಟೀಷರ ವಿಕೇಂದ್ರೀಕರಣ ನೀತಿಗೆ ಸಹಕರಿಸಿದ ಭಾರತೀಯ ರಾಜರ ಆಂತರಿಕ ದ್ವೇಷ, ಅಸೂಯೆಗಳ ಬಗ್ಗೆ ಹಾಗೂ ಇಲ್ಲಿನ ಪರಸ್ಪರ ಯುದ್ಧಗಳ ರೀತಿಯನ್ನು ಕುರಿತಂತೆ ರಾಜಕೀಯ ಅಸಹಾಯಕತೆಯ ತಿಳುವಳಿಕೆಯನ್ನು ಅರ್ಥೈಸಿಕೊಳ್ಳುವರು.

ಜೊತೆಗೆ ಬ್ರಿಟೀಷರು ಭಾರತಕ್ಕೆ ಬಂದು ಇಲ್ಲಿ ಸಾಮ್ರಾಜ್ಯವನ್ನು ಸ್ಥಾಪಿಸದೇ ಇದ್ದಿದ್ದರೇ, ಭಾರತದಲ್ಲಿ ರಾಜ ಪ್ರಭುತ್ವಗಳು ಹೇಗೆ ಮುಂದುವರೆಯುತ್ತಿದ್ದವು ಎಂಬ ವಿಚಾರದಲ್ಲಿ ಕುತೂಹಲವನ್ನು ಬೆಳೆಸಿಕೊಳ್ಳುವರು. ಹಾಗೆಯೇ ಇಂಗ್ಲೇಂಡಿನ ಬಡದಾಸಿಯ ದತ್ತು ಮಗನಾದ ರಾಬರ್ಟ್ ಕ್ಲೈವ್ ಎಂಬಾತ, ವಿದೇಶೀ ನೆಲಕ್ಕೆ ಬಂದು 150 ವರ್ಷಗಳಿಗೂ ಹೆಚ್ಚು ಕಾಲ ಭಾರತವನ್ನು ಆಳಿದ ಬ್ರಿಟೀಷ್ ಸಾಮ್ರಾಜ್ಯಕ್ಕೆ ಹೇಗೆ, ಅಸ್ಥಿಭಾರವನ್ನು ಹಾಕಿದ ಅದರಲ್ಲಿ ಆತನ ಧೈರ್ಯ, ಸಾಧನೆ, ಮುಂದಾಲೋಚನೆಗಳು ಏನು ಎಂಬುದನ್ನು ಭಾರತದ ಅಂದಿನ ಸ್ಥಿತಿಯೊಂದಿಗೆ ಹೋಲಿಸಿ ತಿಳಿದುಕೊಳ್ಳುವರು ಮತ್ತು ಈ ಸಂದರ್ಭದಲ್ಲಿ ಮತ್ತೆ ಭಾರತಕ್ಕೆ ಅಂತಹ ಸ್ಥಿತಿ ಬಾರದಂತೆ ಮತ್ತು ವಿದೇಶಿಯರ ಆಕ್ರಮಣವನ್ನು ತಡೆಗಟ್ಟಲು ಈಗ ನನ್ನ ಪಾತ್ರವೇನು ಎಂಬುದನ್ನು ಯೋಚಿಸಿ ನಿರ್ಧಾರವನ್ನು ತೆಗೆದುಕೊಳ್ಳುವರು.

ಬ್ರಿಟೀಷರ ಆಗಮನದಿಂದ ಭಾರತಕ್ಕೆ ಪರಿಚಯವಾದ ವೈಜ್ಞಾನಿಕ ಬೆಳವಣಿಗೆ ಇಲ್ಲಿನ ಅನೇಕ ಬದಲಾವಣೆಗೆ ಹೇಗೆ ಕಾರಣವಾಯಿತು ಎಂಬುದನ್ನು ಚಿಂತಿಸಿ ಮನನ ಮಾಡಿಕೊಳ್ಳುವರು. ಅಲ್ಲದೆ ಈ ವೈಜ್ಞಾನಿಕ ಬೆಳವಣಿಗೆ ಭಾರತೀಯ ಗೃಹ ಕೈಗಾರಿಕೆಗಳ ಮೇಲೆ ಬೀರಿದ ಪರಿಣಾಮದ ಬಗ್ಗೆ ಹಾಗೂ ಭಾರತೀಯರ ಅಸಹಾಯಕತೆಯ ಬಗ್ಗೆ ತಾರ್ಕಿಕವಾಗಿ ಆಲೋಚಿಸಿ ಜ್ಞಾನವನ್ನು ಕಟ್ಟಿಕೊಳ್ಳುವಂತಹ ಸಂದರ್ಭದ ಕಲಿಕಾ

ವಾತಾವರಣ ತರಗತಿ ಕೋಣೆಯಲ್ಲಿ ರೂಪುಗೊಳ್ಳುವಂತೆ ಇತಿಹಾಸದ ಘಟಕಗಳನ್ನು ರಚಿಸಲಾಗಿದೆ.

ರಾಜ್ಯಶಾಸ್ತ್ರ ವಿಭಾಗದಲ್ಲಿ ರಾಜ್ಯಶಾಸ್ತ್ರದ ಪರಿಕಲ್ಪನೆ ಮತ್ತು ಅದರ ಪ್ರಾಮುಖ್ಯತೆಗಳನ್ನು ಅರಿಯುವುದರ ಜೊತೆಗೆ ಭಾರತದಂತಹ ಪ್ರಜಾಪ್ರಭುತ್ವವಾದಿ ರಾಷ್ಟ್ರದಲ್ಲಿ ವಿದೇಶಿ ರಾಷ್ಟ್ರಗಳ ಸಹ ಸಂಬಂಧವನ್ನು ಹೇಗೆ ಕಾಯ್ದುಕೊಂಡು ಮುನ್ನಡೆಯಬೇಕು ಎಂಬ ವಿದೇಶಾಂಗ ನೀತಿಯ ಸಮಗ್ರ ಪರಿಕಲ್ಪನೆಯ ಉದ್ದೇಶಗಳನ್ನು ಅದರ ಸ್ವರೂಪವನ್ನು ಅರ್ಥೈಸಿಕೊಂಡು ವಿಶ್ವ ಮಾನವ ಸಂದೇಶದ ಇಂದಿನ ತುರ್ತನ್ನು ಅನ್ವಯ ಮಾಡಿಕೊಳ್ಳುವಂತೆ ಭಾರತದ ವಿದೇಶಾಂಗ ನೀತಿ ಮತ್ತು ಇತರ ರಾಷ್ಟ್ರಗಳ ಸಂಬಂಧದ ಅಧ್ಯಾಯವನ್ನು ತರಲಾಗಿದೆ.

ಹಾಗೆಯೇ ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ ಹಿನ್ನೆಲೆಯಲ್ಲಿ ಮಾನವ ಹಕ್ಕುಗಳು ಮತ್ತು ಮಕ್ಕಳ ಹಕ್ಕುಗಳ ತುಲನಾತ್ಮಕ ಪಟ್ಟಿಯನ್ನು ವಿಶ್ಲೇಷಣಾತ್ಮಕವಾಗಿ ಚರ್ಚಿಸಿ, ಪಠ್ಯದಲ್ಲಿ ತರಲಾಗಿದೆ. ಇದೆಲ್ಲದರ ಜೊತೆಗೆ ವಿಶ್ವರಾಷ್ಟ್ರಗಳ ಶಸ್ತ್ರಾಗಳ ಪೈಪೋಟಿ ಎಂಬ ಅಧ್ಯಾಯವು ಆಧುನಿಕ ಜಗತ್ತಿನಲ್ಲಿ 'ಶಸ್ತ್ರಾಸ್ತ್ರಗಳ ಬಳಕೆ ಸರ್ವನಾಶಕ್ಕೆ ಹೇತು'ವಾಗುತ್ತದೆ ಎಂಬ ಸಂದೇಶವನ್ನು ಮಗುವಿಗೆ ನೀಡುವಂತೆ ರಚಿಸಲಾಗಿದೆ.

ಸಮಾಜಶಾಸ್ತ್ರ ವಿಭಾಗದಲ್ಲಿ ಸಮಾಜ ಜೀವಿಯಾಗಿರುವ ಮಾನವನು ಕುಟುಂಬ ಜೀವನದೊಂದಿಗೆ ಸಾಮಾಜಿಕ ಸ್ತರ ವಿನ್ಯಾಸಗಳನ್ನು ಮೊದಲನೆಯ ಅಧ್ಯಾಯದಲ್ಲಿ ಕೂಡ ಮಾಡತ್ತಾ, ಈ ಸ್ತರ ವಿನ್ಯಾಸಗಳೊಟ್ಟಿಗೆ ಸೃಷ್ಟಿ, ಅಸ್ಪೃಷ್ಟತೆಯ ವಿವಿಧ ಮಾದರಿಗಳನ್ನು ತಾರ್ಕಿಕವಾಗಿ ಚಿಂತಿಸಿ ಜ್ಞಾನ ಕಟ್ಟಿಕೊಳ್ಳುವಂತೆ ಸಮಾಜಶಾಸ್ತ್ರ ವಿಭಾಗದ ಪ್ರತಿಯೊಂದು ಘಟಕವನ್ನು ರಚಿಸಲಾಗಿದೆ.

ಅಲ್ಲದೆ ಮಕ್ಕಳನ್ನು ಸಾಂಸ್ಕೃತಿಕವಾಗಿ ವಿವಿಧ ಬಗೆಯ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡುವುದು, ಜೊತೆಗೆ ಸುತ್ತಮುತ್ತಲಿನ ವಿವಿಧ ವೃತ್ತಿಗಳು, ಅವರ ಜೀವನಶೈಲಿ, ದುಡಿಮೆ, ಆರ್ಥಿಕ ಜೀವನ ಕುರಿತಂತೆ ಆಸಕ್ತಿಯನ್ನು ಬೆಳಸಿಕೊಳ್ಳುವ

ಕುತೂಹಲಕಾರಿ ವಿಷಯಗಳೊಂದಿಗೆ ಸಮಾಜಶಾಸ್ತ್ರ ವಿಭಾಗದ ಸಾಮಾಜಿಕ ಸ್ತರ ವಿನ್ಯಾಸ ಮತ್ತು ದುಡಿಮೆ ಮತ್ತು ಆರ್ಥಿಕ ಜೀವನದ ಅಧ್ಯಾಯಗಳನ್ನು ಪ್ರಸ್ತುತಪಡಿಸಲಾಗಿದೆ.

ಭೂಗೋಳ ವಿಭಾಗಕ್ಕೆ ಬಂದಾಗ 9ನೇ ತರಗತಿಯಲ್ಲಿ ಕರ್ನಾಟಕ ರಾಜ್ಯದ 'ಭೂಗೋಳವನ್ನು ಪರಿಚಯಿಸಲಾಗಿದ್ದು, ಪ್ರಸಕ್ತ 10ನೇ ತರಗತಿಯಲ್ಲಿ ಈ ಹಿಂದಿನಂತೆ ಭಾರತದ ಭೂಗೋಳವನ್ನು ಪರಿಚಯಿಸಿದ್ದರೂ, ಹೊಸ ಪಠ್ಯಕ್ಕೆ ಸಂಬಂಧಿಸಿದಂತೆ ವಿನೂತನವಾದ ನಿರೂಪಣಾ ವಿಧಾನವನ್ನು ಪಠ್ಯಪುಸ್ತಕ ರಚನಾ ಕಾರಣ ಬಳಸಿ ಕೊಂಡಿರುವುದು ಓದುಗರ ಮೆಚ್ಚುಗೆಗೆ ಪಾತ್ರವಾಗಿದೆ.

ಈ ಸಂಬಂಧ ಸ್ಪಷ್ಟವಾದ ನಕ್ಷೆ ವಿನೂತನವಾದ ಹೊಸ ಅಂಶಗಳು ಮಕ್ಕಳನ್ನು ಆಕರ್ಷಿಸುವಂತಿವೆ. ಪ್ರಾರಂಭದ ಘಟಕವಾದ 'ಭಾರತ ನಮ್ಮ ಮಾತೃಭೂಮಿ' ಎಂಬ ಅಧ್ಯಾಯವು ಮಾತೃಭೂಮಿ ಅರ್ಥದೊಂದಿಗೆ ತಾಯಿ ಭಾರತೀಯ ಮಹತ್ವವನ್ನು ಬಿಂಬಿಸುವಂತಿದೆ. ಇದೇ ಅಧ್ಯಾಯದಲ್ಲಿನ ಭಾರತದ ಮೇಲೆ ಹಾದು ಹೋಗುವ ಅಕ್ಷಾಂಶ ಮತ್ತು ರೇಖಾಂಶ ವೃತ್ತಗಳು ನೀಡಲಾಗಿರುವ ಮಾಹಿತಿಯನ್ನು ಚಟುವಟಿಕೆಯ ಹಿನ್ನೆಲೆಯಲ್ಲಿ ತರಗತಿಯಲ್ಲಿ ಅನುಕೂಲಿಸುವುದು ಕಡ್ಡಾಯವಾಗಿದೆ. ಭಾರತದ ಪ್ರಾಕೃತಿಕ ಸಂಪತ್ತನ್ನು ಅರ್ಥೈಸುವಾಗ ಇಲ್ಲಿನ ಪ್ರಾಕೃತಿಕ ಹಿರಿಮೆಯನ್ನು ಮೆಚ್ಚಿಕೊಳ್ಳುತ್ತಾ, ತಾರ್ಕಿಕವಾದ ಆಲೋಚನೆಗಳೊಂದಿಗೆ ಭಾರತದ ಭೌಗೋಳಿಕ ಸನ್ನಿವೇಶ 'ಸಾಂಸ್ಕೃತಿಕ ಸಿರಿಗೆ' ಕೈಗನ್ನಡಿಯಂತಿರುವ ಹಿನ್ನೆಲೆಯಲ್ಲಿ ಪ್ರತಿಯೊಬ್ಬ ಭಾರತೀಯನು ಮೌಲ್ಯಯುಕ್ತ ಪರಿಸರ ಪ್ರೇಮದೊಂದಿಗೆ, ವಿಶ್ವಕುಟುಂಬದ ಪರಿಕಲ್ಪನೆಯನ್ನು ಈ ರೂಪದ ಅಧ್ಯಾಯಗಳಲ್ಲಿ ಕಟ್ಟಿಕೊಳ್ಳುವಂತೆ ಎಣೆಯಲಾಗಿದೆ ಎಂಬುದನ್ನು ಅನುಕೂಲಕಾರ ಅರ್ಥೈಸಿಕೊಳ್ಳಬೇಕು.

ಭಾರತದ ವಾಯುಗುಣ, ಇಲ್ಲಿನ ಸಸ್ಯವರ್ಗ, ಪ್ರಾಣಿ, ನೈಸರ್ಗಿಕ ಕೊಡುಗೆಗಳ ಬಗ್ಗೆ ಕಾಳಜಿಯನ್ನು ಹೊಂದುವಂತೆ ಅಧ್ಯಾಯಗಳನ್ನು ಬಳಸಿಕೊಳ್ಳಬೇಕೆಂಬುದು ಪ್ರಮುಖ ಆಶಯವಾಗಿದೆ.

ಅರ್ಥಶಾಸ್ತ್ರ ವಿಭಾಗಕ್ಕೆ ಸಂಬಂಧಿಸಿದಂತೆ, ಅರ್ಥಶಾಸ್ತ್ರದ ಅಧ್ಯಯನದ ಮಹತ್ವವನ್ನು ಪ್ರತಿಕಲಿಕಾರ್ಥಿಯು ಅರ್ಥೈಸಿಕೊಳ್ಳುವಂತೆ ಮಾಡುವುದು ಆ ಮೂಲಕ ಮಾನವನು ಕೈಗೊಳ್ಳುವ ವಿವಿಧ ಬಗೆಯ ಆರ್ಥಿಕ ಚಟುವಟಿಕೆಗಳು ಜನರ ಜೀವನ ಮಟ್ಟ, ತಲಾದಾಯ ಮತ್ತು ರಾಷ್ಟ್ರಾದಾಯದ ಅರಿವನ್ನು ಮೂಡಿಸುವುದು ಹಾಗೂ ದೇಶದ ಆರ್ಥಿಕ ಪರಿಸ್ಥಿತಿ, ಪಂಚವಾರ್ಷಿಕ ಯೋಜನೆಗಳ ಅನುಷ್ಠಾನದ ಪರಿಕಲ್ಪನೆಯ ತಿಳುವಳಿಕೆಯೊಂದಿಗೆ ಮನನ ಮಾಡಿಕೊಳ್ಳಬೇಕು. ಜೊತೆಗೆ ಮಾನವ ಅಭಿವೃದ್ಧಿಯ ಸೂಚಕಗಳನ್ನೊಳಗೊಂಡ ಅಂಕಿ ಅಂಶಗಳ ಸಂಗ್ರಹ ಅಲ್ಲಿನ ವ್ಯತ್ಯಾಸ, ಸಾಮ್ಯತೆಯ ಅಂಶಗಳನ್ನು ಆಸಕ್ತಿಯಿಂದ ಕ್ರೋಢೀಕರಿಸಿದ ನಂತರ ವಿಶ್ಲೇಷಿಸಿ ತೀರ್ಮಾನಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯ ಮಗುವಿನಲ್ಲಿ ಬೆಳೆಯುವಂತೆ ಅನುಕೂಲಿಸುವುದು ಬಹುಮುಖ್ಯವಾಗಿದೆ.

'ಅರ್ಥವ್ಯವಸ್ಥೆ ಮತ್ತು ಸರ್ಕಾರ' ಎಂಬ ಅಧ್ಯಾಯದ ಮೂಲಕ, ಅರ್ಥವ್ಯವಸ್ಥೆಯೂ ಸರ್ಕಾರದ ಪಾತ್ರ, ಯೋಜನೆ ಮತ್ತು ಅರ್ಥವ್ಯವಸ್ಥೆ, ಪಂಚವಾರ್ಷಿಕ ಯೋಜನೆಗಳು ಇಲ್ಲಿನ ಹಸಿರುಕ್ರಾಂತಿ, ಇದರ ಪರಿಣಾಮಗಳ ಜೊತೆಗೆ ಇವತ್ತಿನ ಉದಾರೀಕರಣ ಮತ್ತು ಜಾಗತೀಕರಣಗಳು ಭಾರತದ ಅರ್ಥವ್ಯವಸ್ಥೆಯನ್ನು ಹೇಗೆ ತಟ್ಟುತ್ತಿವೆ ಎಂಬ ತಾರ್ಕಿಕ ಚಿಂತನೆಗಳನ್ನು ಒಳಗೊಂಡಂತೆ ಯೋಚಿಸಿ ಅಭಿಪ್ರಾಯಗಳನ್ನು ಪಟ್ಟಿ ಮಾಡಿಕೊಳ್ಳುವುದು. ಆ ಮೂಲಕ ಭಾರತದ ಅರ್ಥವ್ಯವಸ್ಥೆಯ ಮೇಲೆ ವಿದೇಶಗಳ ಪ್ರಭಾವವನ್ನು ತಿಳುವಳಿಕೆಗೆ ತೆಗೆದುಕೊಂಡು ಭಾರತದ ಆರ್ಥಿಕ ಚಟುವಟಿಕೆಯ ಮೂಲವಾದ ಕೃಷಿಯಲ್ಲಿ ಕೌಶಲ್ಯವರ್ದನೆಗೆ ಆದ್ಯತೆಗಳನ್ನು ಗ್ರಹಿಸಿಕೊಳ್ಳುವುದರ ಮೂಲಕ ವಿವಿಧ ಬಗೆಯ ವೃತ್ತಿ ಧರ್ಮದ ಪಾಲನೆಯನ್ನು ಆರ್ಥಿಕ ವ್ಯವಸ್ಥೆಯ ಹಿನ್ನಲೆಯಲ್ಲಿ ಹೇಗೆ ಮಾಡಲಾಗುವುದು ಎಂಬುದನ್ನು ತಿಳಿಯುವರು.

ಈ ಬಾರಿ ಅರ್ಥಶಾಸ್ತ್ರ ವಿಭಾಗದಲ್ಲಿ ಸಾರ್ವಜನಿಕ ಹಣಕಾಸು ಮತ್ತು ಆಯವ್ಯಯವನ್ನು ಹೊಸದಾಗಿ ಸೇರಿಸಲಾಗಿದೆ. ಈ ಹಿನ್ನಲೆಯಲ್ಲಿ ಸಾರ್ವಜನಿಕ ಹಣಕಾಸಿನ

ಅರ್ಥ, ಮಹತ್ವ, ಸಾರ್ವಜನಿಕವಾದ ವೆಚ್ಚ ಮತ್ತು ಆದಾಯಗಳನ್ನು ವಿತ್ತೀಯ ಕೊರತೆಗಳನ್ನು ಪಠ್ಯದಲ್ಲಿನ ಮಾಹಿತಿ ಅನ್ವಯ ಅರ್ಥೈಸಿಕೊಂಡು ಒಂದು ರಾಷ್ಟ್ರದ ಆರ್ಥಿಕ ಸಾಮರ್ಥ್ಯ ಅಲ್ಲಿನ ಆಯವ್ಯಯವನ್ನು ಅವಲಂಬಿಸಿರುತ್ತದೆ ಎಂಬುದನ್ನು ಗ್ರಹಿಸಿಕೊಳ್ಳುವುದು ಇದರೊಂದಿಗೆ ಮಗು ತನ್ನ ಕುಟುಂಬದ ಪ್ರತಿದಿನದ ಆದಾಯ ಖರ್ಚುಗಳ ವಿವರಣೆಯೊಂದಿಗೆ ರಾಷ್ಟ್ರದ ಆಯವ್ಯಯವನ್ನು ಅರ್ಥ ಮಾಡಿಕೊಳ್ಳುವುದು. ಈ ಸಂದರ್ಭದಲ್ಲೂ ಮಗು ತನಗೆ ಬೇಕಾದ ಅವಶ್ಯ ಜ್ಞಾನವನ್ನು ಕಟ್ಟಿಕೊಳ್ಳಲು, ಪಟ್ಟಿ ತಯಾರಿಕೆ, ವರದಿ ತಯಾರಿಕೆ, ರಚನೆ, ವ್ಯತ್ಯಾಸಗಳ ಪರಿಕಲ್ಪನೆಗಳೊಂದಿಗೆ ಅರಿವನ್ನು ಬೆಳೆಸಿಕೊಳ್ಳುವಂತಹ ಅವಕಾಶಗಳನ್ನು ತರಗತಿ ಕೋಣೆಯಲ್ಲಿ ಕಲ್ಪಿಸಬೇಕು.

ವ್ಯವಹಾರ ಅಧ್ಯಯನದ ವಿಭಾಗದಲ್ಲೂ, ಮಗುವಿನ ನಾಳಿನ ಜೀವನಾವಶ್ಯಕ ಬದುಕಿನಲ್ಲಿ ಬರಬಹುದಾದ ಬ್ಯಾಂಕುಗಳು, ವಿಮೆ, ಉದ್ಯಮಗಾರಿಕೆ, ಹಣ 'ವ್ಯವಹಾರದ ಜಾಗತೀಕರಣ' ಎಂಬ ಘಟಕಗಳನ್ನು ಇಡಲಾಗಿದೆ. ಮನುಷ್ಯನಿಗೆ ಬ್ಯಾಂಕುಗಳಿಂದಾಗುವ ಉಪಯೋಗಗಳು, ಬ್ಯಾಂಕಿನ ವಿಧಗಳು, ಅಲ್ಲಿನ ವಿವಿಧ ಬಗೆಯ ವ್ಯವಹಾರಗಳನ್ನು ಸಮರ್ಪಕವಾಗಿ ಅರ್ಥೈಸುವುದು ಈ ಸಂಬಂಧ ಬ್ಯಾಂಕಿನ ಭೇಟಿ, ಅವಲೋಕನ ವಿಧಾನಗಳನ್ನು ಅನುಕೂಲಕಾರರು ಕಲಿಕಾರ್ಥನೆ ಒದಗಿಸಿಕೊಡಬೇಕಾಗುತ್ತದೆ. ಹಾಗೆಯೇ 'ವಿಮೆ' ವಿಮೆಯ ಅರ್ಥ, ಮಹತ್ವ, ವಿಮಾ ಪಾಲಿಸಿಗಳು, ವಿಮೆಯ ಅನುಕೂಲಗಳು, ವಿಮಾಧಾರನ ಕರ್ತವ್ಯಗಳನ್ನು ಕುತೂಹಲ, ಪ್ರಶ್ನಾವಳಿಗಳ ಮೂಲಕ, ಘಟಕವನ್ನು ಮಗುವಿನ ತಿಳುವಳಿಕೆಗೆ ತರಬೇಕು. ಈ ಸಂಬಂಧ ಒಬ್ಬ ವಿಮಾ ಏಜೆಂಟ್‌ನನ್ನು ತರಗತಿಗೆ ಕರೆಸಿ, ಆತನ ಮೂಲಕ ಹೆಚ್ಚು ಮಾಹಿತಿ ಕೊಡುವುದು. ಈ ಘಟಕದ ಉದ್ದೇಶವಾಗಿದೆ.

ಈ ಸಂಬಂಧ ಭಾರತೀಯ ಜೀವ ವಿಮಾ ಕಂಪನಿಗೆ ಕಲಿಕಾರ್ಥಿಗಳನ್ನು ಭೇಟಿ ಮಾಡಿಸಿ, ನಿರ್ದಿಷ್ಟ ಪಡಿಸಿದ ಪ್ರಶ್ನಾವಳಿಗಳೊಂದಿಗೆ ಹೆಚ್ಚಿನ ಮಾಹಿತಿಯನ್ನು ಘಟಕಕ್ಕೆ ಪೂರಕವಾಗಿ ಪಡೆದು ಜ್ಞಾನ ಕಟ್ಟಕೊಳ್ಳುವುದು ಅಗತ್ಯವಾಗಿದೆ.

ಮಗು ತನ್ನ ಕಳೆದೆರಡು ವರ್ಷಗಳಲ್ಲೂ ವ್ಯವಹಾರ ಅಧ್ಯಯನದ ವಿಭಾಗವನ್ನು ಅರ್ಥೈಸಿಕೊಂಡಿದ್ದರ ಜ್ಞಾನದ ಹಿನ್ನಲೆಯಲ್ಲಿ ಹತ್ತನೇ ತರಗತಿಯಲ್ಲಿ ಈ ವಿಭಾಗದ ವಿಸ್ತೃತವಾದ ಪರಿಕಲ್ಪನೆಯನ್ನು ನೀಡಲಾಗಿರುವ ಅಧ್ಯಾಯಗಳೊಂದಿಗೆ ಈ ವಿಭಾಗದಲ್ಲಿ ಆಸಕ್ತಿಯನ್ನು ಬೆಳೆಸುವುದು ಅನಿವಾರ್ಯವಾಗಿದೆ. ವ್ಯವಹಾರ ಅಧ್ಯಯನವು ಹೆಚ್ಚಿನದಾಗಿ ಮಗುವಿನ ಅನ್ವಯಿಕ ಸಾಮರ್ಥ್ಯವನ್ನು ಹೆಚ್ಚಿಸುವಂತೆ ಘಟಕಗಳನ್ನು ಅನುಕೂಲಿಸಬೇಕೆಂದು, ಇದಕ್ಕೆ ಸಂಬಂಧಿಸಿದಂತೆ ಕಲಿಕಾರ್ಥಿನಗೆ ಅನುಭವಯುಕ್ತ ಕಲಿಕೆಗೆ ಆದ್ಯತೆ ನೀಡಲು, ಭೇಟಿ, ಸಂಗ್ರಹಾ ಸಮೀಕ್ಷೆ, ಸಂದರ್ಶನ, ವಿಶ್ಲೇಷಣೆ, ಸಂವಾದ, ಪ್ರಶ್ನಾವಳಿ, ಸಂಶೋಧನೆ ಮುಂತಾದ ಚಟುವಟಿಕೆಗಳನ್ನು ನೀಡುವುದು ಅಪೇಕ್ಷಣೀಯ. ಈ ಹಿನ್ನಲೆಯಲ್ಲಿ ಈ ವಿಭಾಗದ ಉದ್ದಿಮೆದಾರರು 'ಅಧ್ಯಾಯಕ್ಕೆ ಕಲಿಕೆಯ ಅನುಕೂಲಕ್ಕಾಗಿ ಮಗು ತನ್ನ ಸುತ್ತಲ ಉದ್ದಿಮೆದಾರನನ್ನು ಭೇಟಿ ಮಾಡಿ ನಿರ್ದಿಷ್ಟ ಪಡಿಸಿದ ಪ್ರಶ್ನಾವಳಿಗಳೊಂದಿಗೆ, ಜ್ಞಾನ ಕಟ್ಟಿಕೊಳ್ಳುವುದು, ಅವಶ್ಯವಾಗಿದೆ.

ಹೀಗೆ ಹತ್ತನೇ ತರಗತಿ ಸಮಾಜವಿಜ್ಞಾನದ ಎಲ್ಲಾ ಆರು ವಿಭಾಗಗಳ ಒಟ್ಟು ನಲವತ್ತು ಅಧ್ಯಾಯಗಳನ್ನು ಕಲಿಕಾರ್ಥಿಯ ಜೀವನ ಅವಶ್ಯಕತೆಗಳೊಂದಿಗೆ ಆತನ ಕಲಿಕಾ ಅನುಭವ ಹಾಗೂ ಜೀವನಾವಶ್ಯಕತೆಗಳನ್ನು ಪೂರೈಸುವಂತೆ ಪಠ್ಯವನ್ನು ಮೀರಿ ಅರ್ಥೈಸಿಕೊಂಡು ವಿವಿಧ ಕಲಿಕಾ ವಿಧಾನಗಳ ಮೂಲಕ ಚಟುವಟಿಕೆಗಳನ್ನು ಬಳಸಿ ಕಲಿಕೆಯನ್ನು ಅನುಕೂಲಿಸಬೇಕು ಆ ಮೂಲಕ ಹೊಸ ಜನಾಂಗದ ಉದಯಕ್ಕೆ ನಾವೆಲ್ಲಾ ನಾಂದಿ ಹಾಡೋಣವೆಂದು ರಚನಾ ಸಮಿತಿ ಆಶಿಸುತ್ತದೆ.

## ಹತ್ತನೇ ತರಗತಿ ಪಠ್ಯಪುಸ್ತಕದ ಹೊರತಾಗಿ ಇಲ್ಲಿನ ಪಠ್ಯಕ್ರಮವನ್ನು ಶ್ರೀಮಂತಗೊಳಿಸಿಕೊಳ್ಳುವಿಕೆಯನ್ನು ಕುರಿತು

(ಎನ್.ಸಿ.ಎಫ್. ಆಶಯಗಳೊಂದಿಗೆ ಪಠ್ಯವನ್ನು ನೋಡುವ ಕ್ರಮ ಒಳಗೊಂಡಂತೆ)

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005ರ ತತ್ವಗಳನ್ನು ಆಧರಿಸಿ ಕಳೆದ ಎರಡೂ ವರ್ಷಗಳಿಂದ ಎಲ್ಲಾ ವಿಷಯಗಳಲ್ಲೂ ನೂತನ ಪಠ್ಯಪುಸ್ತಕಗಳನ್ನು ಅನುಷ್ಠಾನಗೊಳಿಸಲಾಗಿದೆ. ಪಠ್ಯಪುಸ್ತಕದಲ್ಲಿರುವ ವಿಷಯದ ಜ್ಞಾನವನ್ನು ವಿದ್ಯಾರ್ಥಿಗಳು ತಮ್ಮ ಜ್ಞಾನವನ್ನಾಗಿಸಿಕೊಳ್ಳಲು ಅನುಕೂಲಕಾರನು ಹೇಗೆ ತರಗತಿ ಪ್ರಕ್ರಿಯೆಗಳನ್ನು ನಡೆಸಬೇಕು? ಈ ತರಹದ ತರಗತಿ ಪ್ರಕ್ರಿಯೆಗಳನ್ನು ವಿದ್ಯಾರ್ಥಿಗಳು ಹೊರೆ ಎಂದು ಭಾವಿಸದೆ ಸಂತಸದಾಯಕ ಕಲಿಕೆಯೊಂದಿಗೆ ಗುಣಾತ್ಮಕ ಜ್ಞಾನವನ್ನು ಉಂಟು ಮಾಡುವ ಅನಿವಾರ್ಯತೆ ಈಗ ಅನುಕೂಲಕಾರರ ಮುಂದಿರುವ ದೊಡ್ಡ ಸವಾಲು.

ಈ ನಿಟ್ಟಿನಲ್ಲಿ ಅನುಕೂಲಕಾರರು ತಮ್ಮ 'ಬೋಧನೆ' ಎಂಬ ಪದವನ್ನು ಪಕ್ಕಕ್ಕೆ ಸರಿಸಿ 'ಅನುಕೂಲಿಸುವಿಕೆ' ಎಂಬ ಹೊಸ ಪರಿಕಲ್ಪನೆಯನ್ನು ವೃತ್ತಿಪರ ಚಟುವಟಿಕೆಯಾಗಿಸಿಕೊಂಡು 'ಜ್ಞಾನ' ಮತ್ತು 'ಮಾಹಿತಿ'ಯನ್ನು ಕಲಿಕೆಯಲ್ಲಿ ಪ್ರತ್ಯೇಕಿಸಿ ಅನುಭವಾತ್ಮಕ ಚಟುವಟಿಕೆಗಳಿಗೆ ಆದ್ಯತೆಯನ್ನು ಕಲ್ಪಿಸುವುದು ಬಹು ಮುಖ್ಯವಾಗಿದೆ.

ಇದಕ್ಕಾಗಿ ಏನನ್ನು ಕಲಿಯುವುದು? ಹೇಗೆ ಕಲಿಯುವುದು? ಎಂಬುದನ್ನು ವಿದ್ಯಾರ್ಥಿಗಳೇ ನಿರ್ಧರಿಸಿಕೊಂಡು, ಜವಾಬ್ದಾರಿಯ ಅರಿವಿನೊಂದಿಗೆ ಕಲಿಕೆಗೆ ವಿದ್ಯಾರ್ಥಿಗಳು ಸಿದ್ಧಗೊಳ್ಳುವುದು ಉತ್ತೇಜನಗೊಳ್ಳುವುದು, ಆ ಮೂಲಕ ವಿದ್ಯಾರ್ಥಿಗಳೇ ಕಲಿಕೆಯಲ್ಲಿ ಸ್ವತಃ ಭಾಗವಹಿಸಿ ಜ್ಞಾನವನ್ನು ಕಟ್ಟಿಕೊಂಡು ಅದನ್ನು ಹೊರಗಿನ ಜ್ಞಾನದೊಂದಿಗೆ ಸಂಯೋಜಿಸುವ ಕಲಿಕಾ ಕ್ರಿಯೆಗೆ ಹೆಚ್ಚು ಒತ್ತು ನೀಡುವುದು ಅನುಕೂಲಕಾರನು ಶಿಕ್ಷಣದಲ್ಲಿ ಕಂಡುಕೊಳ್ಳಬೇಕಾದ ಜಾಗೃತಿಯಾಗಿದೆ.

ಈ ಎಲ್ಲಾ ದಿಕ್ಕಿನಲ್ಲಿಯೂ ಪ್ರಸ್ತುತ ಹತ್ತನೇ ತರಗತಿಯ ಸಮಾಜ ವಿಜ್ಞಾನವನ್ನು ನೋಡುವ ಕ್ರಮವನ್ನು ಹೇಗೆ ಅನುಕೂಲಕಾರನು ಬೆಳಸಿಕೊಳ್ಳಬೇಕು ಮತ್ತು ಪಠ್ಯದ ಅರ್ಥೈಸಿಕೊಳ್ಳುವಿಕೆಯ ನಿಜವಾದ ಶ್ರೀಮಂತಿಕೆ ಯಾವುದು ಎಂಬುದನ್ನು ಕಂಡು ಕೊಳ್ಳುವುದಕ್ಕಾಗಿಯೇ ಈ ತರಹದ ರಚನಾ ಸಾಹಿತ್ಯ ಮತ್ತು ತರಬೇತಿಯನ್ನು ನಿರಂತರವಾಗಿ ನೀಡುತ್ತಾ ಬದಲಾಗುತ್ತಿದೆ. ಏಕೆಂದರೆ, ಕೇವಲ ಪಠ್ಯ ಬದಲಾವಣೆ ಸಾಲದು, ಅನುಕೂಲಕಾರನೂ ಬದಲಾಗಬೇಕು. ಇದು ನಮ್ಮ ಶಿಕ್ಷಣ ಇಲಾಖೆಯ ಮಹತ್ತರವಾದ ಆಶಯವೂ ಆಗಿದೆ. ಆದ್ದರಿಂದ ಇಂದಿನ ರಚನಾವಾದಿ ತತ್ವಗಳ ನೆಲೆಗಟ್ಟಿನೊಂದಿಗೆ ಕಲಿಕೆಯಲ್ಲಿ ಮೌಲ್ಯಯುತ ಜೀವನದ ಅರಿವನ್ನು ಕಟ್ಟಿಕೊಳ್ಳುವುದು ಸಮಾಜ ವಿಜ್ಞಾನ ಪಠ್ಯದ ಅನುಕೂಲಕಾರನ ಅನುಕೂಲಿಸುವ ಪರಿಕಲ್ಪನೆಯ ಹುಡುಕಾಟ ಹಾಗೂ ವಿಮರ್ಶೆಯ ಸಾಮರ್ಥ್ಯವನ್ನು ಅವಲಂಬಿಸುತ್ತದೆ. ಹಾಗೆಯೇ ಮಕ್ಕಳ ಬದುಕನ್ನು ರೂಪಿಸುವಲ್ಲಿ ಸಮಾಜ ವಿಜ್ಞಾನ ಪಠ್ಯದ ಅನುಕೂಲಿಸುವಿಕೆ ಹೇಗಿರಬೇಕು ಎಂಬುದರ ಎಚ್ಚರ ಜೊತೆಯಲ್ಲಿದ್ದರೆ, ಆತ ತರಗತಿಯನ್ನು ಪಠ್ಯವನ್ನು ನೋಡುವ ಕ್ರಮ, ಅರ್ಥೈಸಿಕೊಳ್ಳುವ ರೀತಿ, ಪಠ್ಯಪುಸ್ತಕದ ಶ್ರೀಮಂತಿಕೆಯನ್ನು ನಿರೂಪಿಸುತ್ತದೆ.

ಉದಾಃ 'ಭಾರತಕ್ಕೆ ಯುರೋಪಿಯನ್ನರ ಆಗಮನ' ಎಂಬ ಇತಿಹಾಸ ವಿಭಾಗದ ಘಟಕವನ್ನು ತರಗತಿಯಲ್ಲಿ ಅನುಕೂಲಿಸುವಾಗ ಭಾರತವನ್ನು ಅನಾದಿ ಕಾಲದಿಂದಲೂ (ಆರ್ಯರೂ ಸೇರಿದಂತೆ) 21ನೇ ಶತಮಾನದ ಇಂದಿನವರೆಗೂ ವಿದೇಶಿಯರು ಒಂದಲ್ಲ ಒಂದು ಕಾರಣದಿಂದ ಆಕ್ರಮಣ, ಪ್ರವೇಶವನ್ನು ಮಾಡುತ್ತಲೇ ಬಂದಿದ್ದಾರೆ. ಅದರಲ್ಲೂ 15ನೇ ಶತಮಾನದಲ್ಲಿ ವ್ಯಾಪಾರಕ್ಕೆಂದು ಭಾರತಕ್ಕೆ ಬಂದ ಯೂರೋಪಿಯನ್ನರು ಸುಮಾರು 300 ವರ್ಷಗಳಿಗೂ ಹೆಚ್ಚು ಕಾಲ ತಮ್ಮ ತಂತ್ರಗಳಿಂದ ಭಾರತೀಯರನ್ನು ಒಡೆದು ಆಳಿದರು. ಜೊತೆಗೆ ಇಲ್ಲಿನ ಜನರು, ಸಂಸ್ಕೃತಿ, ನಿಸರ್ಗ ಸಮಾಜ, ರಾಜಕಾರಣ, ಆರ್ಥಿಕ ಸ್ಥಿತಿ, ಧರ್ಮದ ಮೇಲೆ ಗಾಢವಾದ ಪರಿಣಾಮ ಬೀರಿದರು. ಈ ಸಂದರ್ಭದಲ್ಲಿ ಒಬ್ಬ ಹುಡುಕಾಟದ ಪ್ರವೃತ್ತಿಯ ಇತಿಹಾಸದ ಅಧ್ಯಾಪಕನೊಬ್ಬ ತನ್ನ ತರಗತಿ ಕೋಣೆಯನ್ನು

ಯೂರೋಪಿಯನ್ನರ ವಿರುದ್ಧ, ಕೋಪಗೊಳ್ಳುವ ಮನಸ್ಥಿತಿಯನ್ನು ಬೆಳೆಸದೆ, ಆ ಸಂದರ್ಭದಲ್ಲಿನ ಭಾರತೀಯರ ಅಸಮರ್ಥತೆಗೆ ಹಾಗೂ ಆ ಎಲ್ಲಾ ಹಿಂಸೆಯನ್ನು ಸಹಿಸಿಕೊಳ್ಳುವ ಹೀನ ಸ್ಥಿತಿಗೆ ಕಾರಣಗಳೇನಾದರು ಏನು? ಎಂಬ ವಿನೂತನ ಚಿಂತನೆಗಳನ್ನು ಮಕ್ಕಳು ಕಟ್ಟಿಕೊಳ್ಳುವಂತೆ ಮಾಡಿ, ಆ ಸಂದರ್ಭದ ಭಾರತೀಯ ಪ್ರಜೆ ನಾನಾಗಿದ್ದರೆ, ಆಗಿನ ನನ್ನ ಜವಾಬ್ದಾರಿ ತೀರ್ಮಾನಗಳು ಏನು ಎಂಬುದನ್ನು ಆಲೋಚಿಸಿ ಪ್ರಸ್ತುತ ಸಂದರ್ಭದ ಸದೃಢ ಭಾರತ ನಿರ್ಮಾಣಕ್ಕೆ ತನ್ನ ಗುರಿ ಏನಾಗಬೇಕೆಂಬುದನ್ನು ಬೆಳೆಸುವಂತಹ ಕಲಿಕೆಗೆ ಆದ್ಯತೆ ದೊರೆತರೆ, ನಿಜಕ್ಕೂ ಆ ಸಂದರ್ಭದಲ್ಲಿ ಪಠ್ಯ ಶ್ರೀಮಂತವಾಗುತ್ತದೆ.

ಹಾಗೆಯೇ ವಿಶ್ವದಲ್ಲಿ ಇಂದು ಘಟಿಸುತ್ತಿರುವ ಮನುಷ್ಯ ವಿರೋಧಿ ಚಟುವಟಿಕೆಗಳಾದ ಯುದ್ಧ, ಹಿಂಸೆ, ಭ್ರಷ್ಟಾಚಾರ, ಜಾತೀಯತೆ, ವರ್ಗ ತಾರತಮ್ಯ, ಲಿಂಗತಾರತಮ್ಯಗಳಿಗೆ ಪರಿಹಾರವಾಗಿ ಗಾಂಧಿವಾದವನ್ನು ಅನಿವಾರ್ಯ ಎಂಬುದನ್ನು ಗಾಂಧಿ ಕುರಿತ ಸ್ವಾತಂತ್ರ್ಯ ಹೋರಾಟದಲ್ಲಿ ಮಕ್ಕಳಿಗೆ ಅದರ ಪಾವಿತ್ರ್ಯತೆ ಕುರಿತಂತೆ ಪ್ರಸ್ತುತ ಪಡಿಸುವುದು ಪಠ್ಯಕ್ರಮವು ಶ್ರೀಮಂತವಾಗಿ ಬೆಳೆದು ನಿಲ್ಲಲು ಕಾರಣವಾಗುತ್ತದೆ. ಜೊತೆಗೆ ಹತ್ತನೇ ತರಗತಿಯ ಸಮಾಜವಿಜ್ಞಾನ ಪಠ್ಯಪುಸ್ತಕದ ಚಲನೆಯ ಸಂಕೇತವಾಗಿದ್ದು, ಅವರ ಚಿಂತನೆ ಮತ್ತು ಆದರ್ಶಗಳು ಕಾಲದಿಂದ ಕಾಲಕ್ಕೆ ಶ್ರೇಷ್ಠತೆಯನ್ನು ಪಡೆದುಕೊಳ್ಳುತ್ತಿದೆ ಅದು ಅನಿವಾರ್ಯ ಕೂಡ ಎಂಬ ಸಂಕೇತವನ್ನು ಪ್ರತಿಬಿಂಬಿಸುವಂತಿದೆ.

ಎಲ್ಲದಕ್ಕಿಂತಲೂ ಹೆಚ್ಚಿನದಾಗಿ ಇತಿಹಾಸ ವಿಭಾಗದಲ್ಲಿ ಹೊಸದಾಗಿ ಪಠ್ಯದ ಸ್ಥಾನವನ್ನು ಪಡೆದುಕೊಂಡಿರುವ ಜನಪದ ಚರಿತ್ರೆ ಎಂಬುದು ಇತಿಹಾಸದ ರಚನೆಯಲ್ಲಿ ಆಧಾರಗಳ ಮಹತ್ವವನ್ನು ಮಕ್ಕಳಿಗೆ ಮನದಟ್ಟು ಮಾಡಲು, ಇಡಲಾಗಿರುವ ಪಠ್ಯವಾಗಿದೆ. ಅಂದರೆ ಜನಪದ ಚರಿತ್ರೆ ಎಂದರೆ ನಮ್ಮ ನೆಲದ ಅನಕ್ಷರಸ್ಥ ಜನರಿಂದ ಅನುಭವಾತ್ಮಕವಾಗಿ ಮೂಡಿಬಂದ ಕಲೆ, ಸಂಸ್ಕೃತಿ, ಸಾಹಿತ್ಯ ಪ್ರಧಾನ ಮೌಖಿಕ ನುಡಿ ಮುತ್ತುಗಳು. 'ಇಂದಿನ

ಇತಿಹಾಸ ರಚನೆ ಹಾಗೂ ಅರ್ಥೈಸಿಕೊಳ್ಳುವಿಕೆಯಲ್ಲಿ ಈ ಮೌಖಿಕ ಚರಿತ್ರೆ ಹೇಗೆ ಸಹಾಯಕವಾಗಿ ನಿಲ್ಲುತ್ತದೆ ಎಂಬುದನ್ನು ಅನುಕೂಲಕಾರ ಗಮನಿಸಬೇಕಾಗುತ್ತದೆ.

ಉದಾಹರಣೆಯಾಗಿ ಕನ್ನಡ ನಾಡಿನ ಇತಿಹಾಸಕ್ಕೆ ಸಂಬಂಧಿಸಿದಂತೆ ಹೊಯ್ಸಳರು, ರಾಷ್ಟ್ರಕೂಟರು, ವಿಜಯನಗರ ಇತ್ಯಾದಿ ರಾಜಮನೆತನದ ಇತಿಹಾಸವನ್ನು ಸ್ತುತಿಸುವ ಜನಪದ ಗೀತೆಗಳು, ಲಾವಣಿಗಳು, ಕಥೆಗಳು, ಜನಮನದಲ್ಲಿ ಈಗಲೂ ಹರಿದಾಡುತ್ತಿರುವುದನ್ನು ಕುರಿತಂತೆ, ಈ ಘಟಕದ ಮೂಲಕ ಪ್ರಸ್ತುತ ಪಡಿಸಿದರೆ ಕಲಿಕೆಯ ಉದ್ದೇಶ ಶ್ರೀಮಂತಗೊಂಡಿದೆ ಎಂದೇ ಅರ್ಥ.

ಇನ್ನು ರಾಜ್ಯ ಶಾಸ್ತ್ರ ವಿಭಾಗದ ಪ್ರತಿಘಟಕಗಳು, ಕೂಡ ಮಗುವನ್ನು ಹೇಗೆ ವಿಶ್ವ ಕುಟುಂಬಿಯನ್ನಾಗಿ ಮಾಡಬಹುದು ಪ್ರಸ್ತುತ ಜಗತ್ತಿನ ಜ್ವಲಂತ ಸಮಸ್ಯೆಗಳಿಗೆ ಚಿಕಿತ್ಸೆ ನೀಡುವ ಪ್ರಕ್ರಿಯೆಯಾಗಿ ರಾಷ್ಟ್ರದ ವಿದೇಶಾಂಗ ನೀತಿ, ಅನ್ಯರಾಜ್ಯಗಳೊಂದಿಗೆ ಭಾರತ ಸಂಬಂಧ ಕುರಿತಂತೆ ಸಂಪ್ರದಾಯಸ್ಥ ಭಾರತದ ಆಶೋತ್ತರಗಳನ್ನು ಅನುಕೂಲಕಾರನು ಅರ್ಥೈಸಿಕೊಂಡು ಬೆಳೆಯುತ್ತಿರುವ ಪುಟ್ಟ ಹೃದಯದಲ್ಲಿ ರೂಪರೂಪಗಳನ್ನು ದಾಟುವ, ಅನಿಕೇತನದ ನೂತನ ಪರಿಕಲ್ಪನೆಯನ್ನು ಕಟ್ಟುವುದರೊಂದಿಗೆ, ವಿಶ್ವಶಾಂತಿ, ವಿಶ್ವಭ್ರಾತೃತ್ವದ ಭಾವನೆಗಳನ್ನು ತುಂಬಿಕೊಂಡು ಯುದ್ಧ ವಿರೋಧಿ ನಿರ್ಧಾರಗಳನ್ನು ಮಗು ತೆಗೆದುಕೊಳ್ಳುವಂತೆ ಇವತ್ತಿನ ಅನುಕೂಲಿಸುವಿಕೆ ಇರಬೇಕೆಂಬುದು ಈ ಘಟಕ ಬೋಧನೆಗಳ ಮಹತ್ತರವಾದ ಆಶಯವಾಗಿದೆ. ಆದ್ದರಿಂದ ಈ ತರಹದ ಭಾವನೆಗಳು ಮಗುವಿನಲ್ಲಿ ಮೊಳೆಯಬೇಕಾಗಿರುವುದರಿಂದ ಪೂರಕವಾಗಿ ವಿಶ್ವ ಕುಟುಂಬ ಪರಿಕಲ್ಪನೆ ಬರುವ ರೀತಿಯಲ್ಲಿ ಚಟುವಟಿಕೆ (ಉದಾ: ಭೇಟಿ, ಸಂಗ್ರಹ, ತಯಾರಿಕೆ, ರಚನೆ, ಸಮೀಕ್ಷೆ, ಪಾಲ್ಗೊಳ್ಳುವಿಕೆ, ಚರ್ಚೆ ಇತ್ಯಾದಿ) ಗಳನ್ನು ಹೇಗೆ ಪ್ರಸ್ತುತ ಪಡಿಸಬೇಕು ಎಂಬುದನ್ನು ಅನುಕೂಲಕಾರ ನಿರ್ಧರಿಸಿರಬೇಕು. ಈ ಸಂಬಂಧ ಒಳಪುಟಗಳಲ್ಲಿ ಚಟುವಟಿಕೆಗಳ ಪ್ರಸ್ತುತಿ ಕುರಿತಂತೆ ಚರ್ಚಿಸಲಾಗಿರುವುದನ್ನು ಅನುಕೂಲಕಾರರು ತಪ್ಪದೇ ಗಮನಿಸಿ ತರಗತಿಯಲ್ಲಿ

ಸಮಾಜ ವಿಜ್ಞಾನ ಪಠ್ಯವನ್ನು ಶ್ರೀಮಂತಗೊಳಿಸಿಕೊಳ್ಳುವಿಕೆಯ ಆಭೂತಪೂರ್ವ ಅರಿವನ್ನು ಕಂಡುಕೊಳ್ಳಬೇಕಾಗುತ್ತದೆ.

ಹಾಗೆಯೇ ಸಮಾಜಶಾಸ್ತ್ರ ವಿಭಾಗದಲ್ಲಿನ ನಾಲ್ಕು ಘಟಕಗಳು ಕಲಿಯುತ್ತಿರುವ ಮಗುವಿಗೆ ದುಡಿಮೆ, ಅದರ ಪ್ರಭಾವ, ಆರ್ಥಿಕವಾಗಿ ಸ್ವಾವಲಂಬಿಯಾಗಲು ದುಡಿಮೆಯ ಮಹತ್ವವನ್ನು ಅರ್ಥೈಸಿಕೊಂಡು ಬದುಕು ಆನಂದಮಯವಾಗಿರಲು, 'ಕಾಯಕವೇ ಕೈಲಾಸ' ಯುಕ್ತಿಯಂತೆ ಬೆಳೆಸುತ್ತಿರುವ ಮಗುವಿನಲ್ಲಿ ಕಾಯಕನಿಷ್ಠೆ ಜೊತೆಗೆ ಇಂದಿನ ಸಾಮಾಜಿಕವಾದ ಎಲ್ಲಾ ಸಮಸ್ಯೆಗಳಿಗೆ ಕಾರಣವಾದ ಅಂಶಗಳಲ್ಲಿ ದುಡಿಮೆ ರಹಿತ ಬದುಕು ಹೇಗೆ ಕಾರಣವಾಗಿ ನಿಲ್ಲುತ್ತದೆ ಎಂಬುದನ್ನು ಈ ಘಟಕಗಳನ್ನು ಅನುಕೂಲಿಸುವ ಸಂದರ್ಭದಲ್ಲಿ ಅನುಕೂಲಕಾರ ಗ್ರಹಿಸಕೊಂಡು ಈ ಸಂಬಂಧದ ಪಠ್ಯವನ್ನು ಶ್ರೀಮಂತ ಗೊಳಿಸಬೇಕು.

ಇನ್ನು ಭೂಗೋಳ ಶಾಸ್ತ್ರ ವಿಭಾಗಕ್ಕೆ ಬಂದಾಗ, ಕಳೆದ ವರ್ಷ 9ನೇ ತರಗತಿಯಲ್ಲಿ ಕರ್ನಾಟಕದ ಭೂಗೋಳವನ್ನು ಅಭ್ಯಾಸ ಮಾಡಿದ್ದು ಈ ವರ್ಷ ಹತ್ತನೇ ತರಗತಿಯಲ್ಲಿ ಭಾರತದ ಭೂಗೋಳವನ್ನು ಕಲಿಯುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಮಗು ಪ್ರಾದೇಶಿಕವಾಗಿ ತನ್ನ ರಾಜ್ಯದ ಭೌಗೋಳಿಕ ಹಿರಿಮೆ ಮತ್ತು ಎಚ್ಚರವನ್ನು 9ನೇ ತರಗತಿಯಲ್ಲಿ ಅಭ್ಯಾಸ ಮಾಡಿದ್ದಾರೆ. ಈ ವರ್ಷ ಹತ್ತನೇ ತರಗತಿಯಲ್ಲಿ ಭಾರತದ ಭೂಗೋಳದ ಮೂಲಕ ರಾಷ್ಟ್ರದ ಭೌಗೋಳಿಕ ಲಕ್ಷಣಗಳು, ವಾಯುಗುಣ, ಮಣ್ಣುಗಳು, ಅರಣ್ಯ, ಜಲಸಂಪತ್ತು, ಖನಿಜ ಶಕ್ತಿ ಸಂಪನ್ಮೂಲಗಳು, ಸಾರಿಗೆ, ಸಂಪರ್ಕ, ಕೈಗಾರಿಕೆಗಳು, ಇಲ್ಲಿನ ಜನಸಂಖ್ಯೆಯ ಬಗ್ಗೆ ಜ್ಞಾನ ಕಟ್ಟಿಕೊಂಡ ಮಗು ಭಾರತದ ಭೌಗೋಳಿಕ ಹಾಗೂ ಸಾಂಸ್ಕೃತಿಕ ಸೊಗಸು ಮತ್ತು ಹಿರಿಮೆಯ ಬಗ್ಗೆ ಹೇಗೆ ಗೌರವ ತಂದುಕೊಳ್ಳಬೇಕು ಎಂಬುದನ್ನು ಪಠ್ಯ ಅನುಕೂಲಿಸುವ ಸಂದರ್ಭದಲ್ಲೂ ಅನುಕೂಲಕಾರನು ಮಕ್ಕಳಿಗೆ ಅರ್ಥೈಸುವುದರ ಮೂಲಕ ಪಠ್ಯವನ್ನು ಮಗುವಿನ ಬದುಕಿನ ಜೀವನದ ಅವಶ್ಯಕತೆ ಅನುಭವಕ್ಕೆ ಪೂರಕವಾಗುವಂತೆ ತಿಳಿದುಕೊಳ್ಳುವುದು ಹಾಗೆ ಕಲಿಕಾ ಸಂದರ್ಭವನ್ನು ಕ್ರಿಯಾಶೀಲಗೊಳಿಸುವುದು ಬಹುಮುಖ್ಯವಾಗಿದೆ.

ಅಲ್ಲದೆ ಅರ್ಥಶಾಸ್ತ್ರ ವಿಭಾಗದಲ್ಲಿ ದೇಶದ ಅಭಿವೃದ್ಧಿಯನ್ನು ಕುರಿತಂತೆ, ಅರ್ಥವ್ಯವಸ್ಥೆಯಲ್ಲಿ ಸರ್ಕಾರದ ಪಾತ್ರ, ಹಳ್ಳಿಗಳ ಅಭಿವೃದ್ಧಿಯ ಹಿನ್ನಲೆ, ಸಾರ್ವಜನಿಕ ಹಣಕಾಸು, ಕುರಿತ ಅಧ್ಯಾಯಗಳಿದ್ದು ದೇಶದ ಪ್ರಗತಿಯಲ್ಲೂ ಅರ್ಥವ್ಯವಸ್ಥೆಯನ್ನು ಪ್ರಜ್ಞಾವಂತ ಸರ್ಕಾರ, ಕೈಗೊಳ್ಳಬೇಕಾದ ಯೋಜನೆಗಳು, ಈ ಹಿನ್ನಲೆಯಲ್ಲಿ ಅರ್ಥವ್ಯವಸ್ಥೆಯ ಮಹತ್ವ ಕುರಿತ ಅನುಭವಾತ್ಮಕ ಚಟುವಟಿಕಾಧಾರಿತ ಕಲಿಕೆಯನ್ನು ಮಕ್ಕಳಲ್ಲಿ ಬೆಳೆಸುವುದು, ಪಠ್ಯವನ್ನು ಶ್ರೀಮಂತಗೊಳಿಸುವ ಹಿನ್ನಲೆಯಲ್ಲಿ ತರಗತಿಯಲ್ಲಿ ಪ್ರಸ್ತುತಪಡಿಸಬಹುದು.

ಹಾಗೆಯೇ ವ್ಯವಹಾರ ಅಧ್ಯಯನ ವಿಭಾಗವು ಅತ್ಯುತ್ತಮವಾದ, ಜೀವನಾವಶ್ಯಕ ಅಧ್ಯಾಯಗಳ ಪರಿಚಯವನ್ನು ಹೊಂದಿದ್ದು, ವಿಮೆ, ಬ್ಯಾಂಕ್ ವ್ಯವಹಾರ, ಉದ್ದಿಮೆದಾರರು, ಜಾಗತೀಕರಣ ಕುರಿತ ವಿಚಾರಗಳನ್ನು ಪ್ರಸ್ತುತಪಡಿಸಲಾಗಿದೆ. ಉದ್ದಿಮೆಗಾರರಲ್ಲಿ ಇತ್ತೀಚಿನ ಭಾರತದ ಉದ್ದಿಮೆದಾರರನ್ನು ಕಂಡು ವಿಸ್ತೃತವಾಗಿ ಪರಿಚಯಿಸಿದ್ದು ಅವರ ಜೀವನ ಚರಿತ್ರೆಗಳು, ಪ್ರಭಾವಗಳನ್ನು ಆಧರಿಸಿದ ಚಟುವಟಿಕೆಗಳ ಮೂಲಕ ಪಠ್ಯವನ್ನು ಶ್ರೀಮಂತ ಗೊಳಿಸಬಹುದು.

ಬ್ಯಾಂಕ್ ಮತ್ತು ವಿಮೆ ಪರಿಚಯವನ್ನು ಭೇಟಿ ಮತ್ತು ಸಂದರ್ಶನ ವಿಧಾನಗಳನ್ನು ಚಟುವಟಿಕೆಯಲ್ಲಿ ಬಳಸಿ, ಕಲಿಕಾರ್ಥಿಗಳಿಗೆ ಮನನ ಮಾಡಿಕೊಡಬೇಕು, ಆಗ ಮಾತ್ರ ಪಠ್ಯ ಶ್ರೀಮಂತ ಕಲಿಕೆ ಆಗುವುದರಲ್ಲೂ ಸಂದೇಹವಿಲ್ಲ.

## ಸಮಾಜ ವಿಜ್ಞಾನ ವಿಷಯ ವಸ್ತುವಿನ ಕಲಿಕೆಗಾಗಿ ಬಳಸಬಹುದಾದ ಕಲಿವಿನ ವಿಧಾನಗಳು

(ಉದಾಹರಣೆಗಳೊಂದಿಗೆ)

ಆಧುನಿಕ ಶಿಕ್ಷಣ ಕ್ರಮದ ಚಿಂತನೆಯಂತೆ ತರಗತಿಯ ಎಲ್ಲಾ ವಿದ್ಯಾರ್ಥಿಗಳೂ ಕಲಿಕೆಯಲ್ಲಿ ಭಾಗೀದಾರರಾಗಿರುತ್ತಾರೆ. ಎಲ್ಲರಲ್ಲಿಯೂ ಜ್ಞಾನ ಕಟ್ಟಿಕೊಳ್ಳುವಿಕೆಯ ಸಾಮರ್ಥ್ಯ ಹಾಗೂ ತುಡಿತವಿರುತ್ತದೆ. ಅದು ಒಬ್ಬರಲ್ಲಿ ಹೆಚ್ಚು ಇರಬಹುದು ಮತ್ತೊಬ್ಬರಲ್ಲಿ ಕಡಿಮೆ ಇರಬಹುದು. ಆದರೆ ಪ್ರತಿ ವಿದ್ಯಾರ್ಥಿಯು ಜ್ಞಾನವನ್ನು ಕಟ್ಟಿಕೊಳ್ಳಲು ಅನುಕೂಲ ವಾಗುವಂತಹ ಕಲಿಕಾ ಸಂದರ್ಭಗಳನ್ನು ಅನುಕೂಲಕಾರ ಶಿಕ್ಷಕರು ಒದಗಿಸಿಕೊಡ ಬೇಕಾಗುತ್ತದೆ. ಇಂತಹ ಸಂದರ್ಭಕ್ಕಾಗಿ ಅನುಕೂಲಕಾರನು ಕಲಿಕಾ ವಿಧಾನಗಳ ಮೊರೆ ಹೋಗಬೇಕಾಗುತ್ತದೆ.

ಏಕೆಂದರೆ ಶಿಕ್ಷಕನು ನಾನು ಬೋಧಿಸುವುದೇ ನನ್ನ ಕರ್ತವ್ಯ ಎಂದುಕೊಂಡು ತನಗೆ ತೋಚಿದ್ದೆಲ್ಲವನ್ನು ಕೇಳುವಂತೆ ಕುಳಿತಿರುವ ಮಕ್ಕಳೆದುರಿಗೆ ಒಂದೇ ಸಮನೆ ಕೇಳಿ ತನ್ನ ಕಾಯಕವನ್ನು ಮುಗಿಸಿದರೆ ಅದನ್ನು ಶಿಕ್ಷಣ ಎನ್ನಲಾಗುವುದಿಲ್ಲ. ಆದ್ದರಿಂದ ಮಕ್ಕಳು ತಾವೇ ಸ್ವತಃ ಜ್ಞಾನ ಸಂಪಾದಿಸಿಕೊಳ್ಳುವಂತೆ ಸೂಕ್ತವಾದ ಸನ್ನಿವೇಶ ಮತ್ತು ನೆರವನ್ನು ಅನುಕೂಲಿಸುವುದು ಮುಖ್ಯವಾದ ನನ್ನ ಪಾತ್ರ ಎಂಬುದನ್ನು ಕಲಿಕಾವಿಧಾನಗಳೊಟ್ಟಿಗೆ ಅನುಕೂಲಕಾರ ಯೋಚಿಸಬೇಕಾಗುತ್ತದೆ.

ಈ ಹಿನ್ನಲೆಯಲ್ಲಿ ಯಾವ ಘಟಕಕ್ಕೆ ಯಾವ ವಿಧಾನ ಸರಿಹೊಂದುತ್ತದೆ ಎಂಬುದನ್ನು ಪರಿಭಾವಿಸಿ ತರಗತಿ ಕೋಣೆಯಲ್ಲಿ ಪ್ರಸ್ತುತ ಪಡಿಸುವುದಕ್ಕೆ ಕಲಿಕಾವಿಧಾನ ಎಂದು ಹೇಳಬಹುದು. ಈ ನಿಟ್ಟಿನಲ್ಲಿ ಕಳೆದ ವರ್ಷದ ರಚನಾ–3ರಲ್ಲಿ ವಿವಿಧ ಕಲಿಕಾವಿಧಾನಗಳ ಪಟ್ಟಿಯನ್ನು ನೀಡಲಾಗಿದೆ. ಆ ಎಲ್ಲಾ ವಿಧಾನಗಳು ತರಗತಿಯನ್ನು ರಚನಾತ್ಮಕ ಕಲಿಕೆಯೆಡೆಗೆ ಮಗುವನ್ನು ಕೊಂಡೊಯ್ಯಲು ಸಾಧನಗಳಾಗಿ ಪರಿಗಣಿಸಲ್ಪಟ್ಟಿದೆ.

'Even the best curriculum and the most perfect syllabus remains dead unless quickened in to life by the right methods of teaching and the right kind of teachers'

'Secondary Education Commission'

ಆದ್ದರಿಂದ ಮಕ್ಕಳೇ ಕಲಿಕೆಯಲ್ಲಿ ಕ್ರಿಯಾಶೀಲರಾಗಿ ತೊಡಗಿಕೊಳ್ಳಬೇಕು. ಆ ಮೂಲಕ ತಮ್ಮ ತಮ್ಮ ಅನುಭವಗಳೊಂದಿಗೆ ಜ್ಞಾನವನ್ನು ಕಟ್ಟಿಕೊಳ್ಳಬೇಕು. ಅಂದರೆ ಗುಂಪು ಚರ್ಚೆಯಲ್ಲಿ ಸಹವರ್ತಿಗಳ ಒಡನಾಟದಲ್ಲಿ ಅನುಭವಗಳ ಹಂಚಿಕೆಯಲ್ಲಿ ಗುರುಗಳ ನಿರ್ದೇಶನದಲ್ಲಿ ನಿರಂತರವಾಗಿ ತೊಡಗಿಸಿಕೊಂಡ ಮಗು ಆತ್ಮೀಯತೆ ಹಾಗೂ ಆತ್ಮ ವಿಶ್ವಾಸದಿಂದ ಆಸಕ್ತಿಯೊಂದಿಗೆ ಕಲಿಯತೊಡಗುತ್ತದೆ.

ಇಂತಹ ಕಲಿಕೆ ಸಮಾಜ ವಿಜ್ಞಾನದೊಳಗಿನ ಬೇರೆ ಬೇರೆ ಕಲಿಕಾವಿಧಾನಗಳಲ್ಲಿ ಹೇಗೆ ರೂಪುಗೊಳ್ಳುತ್ತದೆ ಎಂಬುದನ್ನು ಘಟಕವಾರು ಉದಾಹರಣೆಗಳೊಂದಿಗೆ ಈ ಮುಂದೆ ಚರ್ಚಿಸೋಣ.

**<u>ಕಲಿಕಾವಿಧಾನ 1 : ಸಮಸ್ಯಾ ಪರಿಹಾರ ವಿಧಾನ</u>**

**<u>ಸ್ವರೂಪ</u>**: ಕಲಿಕೆ ಒಂದು ಧ್ಯಾನ. ಇದಕ್ಕೆ ನಿರಂತರವಾದ ಶ್ರಮ, ಅಭ್ಯಾಸ, ಏಕಾಗ್ರತೆ, ಆಸಕ್ತಿ ಕಲಿಕಾರ್ಥಿಗೆ ಅಗತ್ಯವಾಗಿ ಬೇಕಾಗುತ್ತದೆ. ಮಗು ಕಲಿಕೆಗೆ ತೊಡಗುವ ಮೊದಲು ಕಲಿಕಾ ವಸ್ತುವಿನ ಬಗ್ಗೆ ಪೂರ್ಣಜ್ಞಾನವನ್ನು ಪಡೆದಿರುವುದಿಲ್ಲ. ಇದರಿಂದಾಗಿ ಮಗುವಿಗೆ ಆ ಕಲಿಕಾ ವಸ್ತು ಸಮಸ್ಯೆಯ ರೂಪದಲ್ಲಿ ಕಂಡುಬರುತ್ತದೆ.

ಇಂತಹ ಸಮಸ್ಯೆಯಲ್ಲಿ ಹೇಗೆ? ಎಷ್ಟು? ಯಾವಾಗ? ಎಂಬ ಪ್ರಶ್ನೆಗಳಿಗೆ ಸಂದರ್ಭೋಚಿತವಾಗಿ ಅರ್ಥೈಸಿಕೊಂಡು ಸಮಸ್ಯೆಯ ರೂಪದ ಕಲಿಕಾ ವ್ಯಾಪ್ತಿಯನ್ನು ತನ್ನ ಪರಿಕಲ್ಪನೆಗೆ ತೆಗೆದಕೊಳ್ಳುತ್ತದೆ. ಇಂತಹ ಪರಿಕಲ್ಪನೆಯನ್ನು ಮಗು ತೆಗೆದುಕೊಳ್ಳುವಂತೆ ಅನುಕೂಲಕಾರನು ನಿರ್ದೇಶನವನ್ನು ತರಗತಿಯ ಕೋಣೆಯಲ್ಲಿ ನೀಡುತ್ತಲೇ ಇರುತ್ತಾನೆ.

ಈ ಹಿನ್ನಲೆಯ ಕಲಿಕಾ ವಿದಾನವನ್ನೇ ಸಮಸ್ಯಾ ಪರಿಹಾರ ವಿಧಾನ ಎಂದು ಕರೆಯುತ್ತೇವೆ.

**ಸಮಸ್ಯಾ ಪರಿಹಾರ ವಿಧಾನದ ಲಕ್ಷಣಗಳು :**

ಸಮಸ್ಯಾ ಪರಿಹಾರ ವಿಧಾನವು ಸಮಾಜವಿಜ್ಞಾನ ವಿಷಯದ ಚೌಕಟ್ಟಿನೊಳಗೆ ತನ್ನದೇ ಆದ ಕೆಲವು ಲಕ್ಷಣಗಳನ್ನು ಹೊಂದಿದೆ.

1. ನಿರ್ದಿಷ್ಟ ಕಲಿಕಾಂಶಕ್ಕೆ ಸಂಬಂಧಿಸಿದಂತೆ ಮಗು ಸಮಸ್ಯೆಯನ್ನು ಗುರುತಿಸುತ್ತದೆ.
2. ಕಲಿಕಾ ಸಮಸ್ಯೆಗಳು ಆದ್ಯತೆಯ ಮೇಲೆ ಪರಿಗಣಿಸಲ್ಪಡುತ್ತವೆ.
3. ಪ್ರತಿ ಸಮಸ್ಯೆಯ ವ್ಯಾಪ್ತಿಯನ್ನು ಕಲಿಕಾರ್ಥಿ ಕಂಡುಕೊಳ್ಳಬೇಕು.
4. ಕಲಿಕಾರ್ಥಿಗಳು ತನ್ನೊಳಗಿನ ಕಲಿಕಾ ಸಮಸ್ಯೆಗೆ ಕಾರಣಗಳನ್ನು ಕಂಡುಕೊಳ್ಳುವನು.
5. ಕಲಿಕಾ ಸಮಸ್ಯೆಗಳಿಗೆ ಕಲಿಕಾರ್ಥಿಯಲ್ಲಿ ಉಂಟಾದ ಗೊಂದಲಗಳಿಗೆ ಅನುಕೂಲಕಾರರ ಮಾರ್ಗದರ್ಶನದ ಲಭ್ಯತೆ ಇರುತ್ತದೆ.
6. ಕಲಿಕಾ ಸಮಸ್ಯೆ ವಿಧಾನವು ಕಲಿಕಾರ್ಥಿಯಲ್ಲಿ ಅನುಮಾನ, ಕುತೂಹಲ, ಆಸಕ್ತಿಗಳನ್ನು ಪೋಷಿಸುತ್ತದೆ.
7. ಈ ವಿಧಾನದಲ್ಲಿ ನಿರಂತರವಾದ ಜ್ಞಾನವನ್ನು ಕಲಿಕಾರ್ಥಿ ಕಟ್ಟಿಕೊಳ್ಳಲು ಪ್ರತಿಹಂತದಲ್ಲಿ ಏಕೆ? ಹೇಗೆ? ಎಷ್ಟು? ಇತ್ಯಾದಿ ಪ್ರಶ್ನೆಗಳನ್ನು ಎದುರಿಸುತ್ತಲೇ ಮುಂದುವರೆಯುತ್ತಾನೆ.
8. ಕಲಿಕಾರ್ಥಿಯಲ್ಲಿ ಸಂಶೋಧನಾ ಗುಣವನ್ನು ಬೆಳೆಸಲು ಬಹುಮುಖ್ಯ ಪಾತ್ರವಹಿಸುತ್ತದೆ.
9. ಕಲಿಕಾರ್ಥಿಯಲ್ಲಿ ದೃಢತೆ, ನಂಬಿಕೆ, ತಾಳ್ಮೆ ಮುಂತಾದ ಸ್ವಭಾವಗಳು ನಿಖರವಾಗ ತೊಡಗುತ್ತವೆ.
10. ಈ ವಿಧಾನದ ಮೂಲಕ ಕಲಿಕಾರ್ಥಿ ಪಡೆದ ಅನುಭವ ಆತನು ನಿಜ ಜೀವನದ ಸಮಸ್ಯೆಗಳನ್ನು ಎದುರಿಸಲು ಪ್ರೇರಕವಾಗುತ್ತದೆ.
11. ಸಮಸ್ಯಾ ಪರಿಹಾರ ವಿಧಾನದಲ್ಲಿ ಕಲಿಕಾರ್ಥಿಗಳ ಅರ್ಥೈಸಿಕೊಳ್ಳುವಿಕೆ, ತಾರ್ಕಿಕ ಮನೋಭಾವನೆ ಕಲಿಕಾಂಶದಲ್ಲಿ ಪ್ರಮುಖ ಪಾತ್ರವಹಿಸುತ್ತದೆ.
12. ಈ ವಿಧಾನವು ತರಗತಿ ಕೋಣೆಯಲ್ಲಿ ನೀಡುವ ಚಟುವಟಿಕೆಗಳು, ಗುಂಪು ಚರ್ಚೆ, ಭೇಟಿ, ಸಂದರ್ಶನ, ಸಂವಾದ, ವೀಕ್ಷಣೆ, ಸಂಗ್ರಹ, ಮುಂತಾದವುಗಳನ್ನು ಒಳಗೊಂಡಿರುತ್ತದೆ.

## ಘಟಕದ ಆಯ್ಕೆ :

## ಜಾಗತಿಕ ಸಮಸ್ಯೆಗಳು ಹಾಗೂ ಭಾರತದ ಪಾತ್ರ (ರಾಜ್ಯಶಾಸ್ತ್ರ ವಿಭಾಗ)

### ಸಿದ್ಧತೆ :

ತರಗತಿ ಕೋಣೆಗೆ ಸಂಬಂಧಿಸಿದಂತೆ ಕಲಿಕಾಂಶದ ಚೌಕಟ್ಟಿನೊಳಗೆ ಕಲಿಕಾ ಸಂದರ್ಭದ ಅನುಕೂಲಕ್ಕಾಗಿ ಪೂರ್ವಭಾವಿ ಸಿದ್ಧತೆಯನ್ನು ಅನುಕೂಲಕಾರ ಮೊದಲು ನಿರ್ದಿಷ್ಟ ಪಡಿಸಿಕೊಳ್ಳಬೇಕಾಗುತ್ತದೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಸಮಸ್ಯೆ ಪರಿಹಾರ ವಿಧಾನಕ್ಕೆ ಅನುಕೂಲಕಾರ ಮಾಡಿಕೊಳ್ಳಬೇಕಾದ ಪೂರ್ವಸಿದ್ಧತೆಗಳು ಹೇಗಿರಬೇಕೆಂಬುದನ್ನು ಚರ್ಚಿಸೋಣ.

1. ತನ್ನ ತರಗತಿ ಕೋಣೆಯ ಮಕ್ಕಳ ಸಾಮರ್ಥ್ಯವನ್ನು ಬಲ್ಲ ಅನುಕೂಲಕಾರ ಪ್ರಸ್ತುತ ಕಲಿಕಾಂಶದ (ಘಟಕಾ)ಪ್ರಮುಖ ಕಲಿಕಾ ಸಮಸ್ಯೆಗಳನ್ನು ಪಟ್ಟಿಮಾಡಿಕೊಳ್ಳುವುದು.
2. ಕಲಿಕಾರ್ಥಿಗಳಿಗೆ ಕಲಿಕಾ ಸಂದರ್ಭದಲ್ಲಿ ಬರಬಹುದಾದ ಸಮಸ್ಯೆಗಳಿಗೆ ಸೂಕ್ತವಾದ ಮಾರ್ಗದರ್ಶನ, ಪರಿಹಾರ, ಸೂಚನೆಗಳನ್ನು ನೀಡಿದ ಚಟುವಟಿಕೆಯ ಆಧಾರದ ಮೇಲೆ ಸಿದ್ಧ ಪಡಿಸಿಕೊಳ್ಳುವುದು.
3. ಈ ವಿಧಾನದಲ್ಲೂ ಅನುಕೂಲದ ಆಯ್ಕೆ ಮಾಡಿಕೊಂಡಿರುವ ತರಗತಿಯ ಕಲಿಕಾ ಚಟುವಟಿಕೆಗೆ ಸಮಸ್ಯೆ (ವಿಷಯ)ಯ ಆಧ್ಯತೆಗಳಿಗೆ ಅನುಗುಣವಾದ ಅವಕಾಶವನ್ನು ನೀಡುವ ನಿರ್ಧಾರ ಮಾಡಿಕೊಳ್ಳಬೇಕು. ಹಾಗೂ ಈ ಸಿದ್ಧತೆಯನ್ನು ತನ್ನ ಪಾಠ ಯೋಜನೆಯಲ್ಲಿ ಸ್ಪಷ್ಟಪಡಿಸಿಕೊಂಡಿರಬೇಕು.
4. ಎನ್.ಸಿ.ಎಫ್ ಮತ್ತು ಸಿ.ಸಿ.ಇ.ನ ಆಶಯಗಳನ್ನು ಪ್ರಸ್ತುತ ಘಟಕದಲ್ಲಿ ಹೇಗೆ ನಿರೂಪಿಸ ಬಹುದು ಎಂಬ ಅರಿವನ್ನು ದಾಖಲಿಸಿಕೊಳ್ಳಬೇಕು. ಅಂದರೆ ವಿಶ್ವಕುಟುಂಬದ (ವಸುದೈವ ಕುಟುಂಬಕಂ) ಪರಿಕಲ್ಪನೆಯನ್ನು ಸಿ.ಸಿ.ಇ. ಮೂಲಕ ಖಾತ್ರಿಪಡಿಸಿ ಕೊಳ್ಳುವುದು. 'ಶ್ರೀ ಯುದ್ಧವೆಂದರೆ ಸರ್ವನಾಶ' ಎಂಬ ಜಾಗೃತಿ ಬೆಳೆಸುವುದು.
5. ಪರಿಪೂರ್ಣವಾದ ಮಾಹಿತಿಯನ್ನು ನೀಡುವಂತಹ ಕಲಿಕಾ ಸಾಮಗ್ರಿಗಳನ್ನು ಕ್ರೋಢೀಕರಿಸಿಕೊಳ್ಳುವುದು. ಉದಾ:
    1. ಮಾನವ ಹಕ್ಕುಗಳ ಚಾರ್ಟ್
    2. ವರ್ಣಭೇದ ನೀತಿಯಿಂದುಂಟಾದ ಯುದ್ಧಗಳ ಪರಿಣಾಮಗಳನ್ನು ಬಿಂಬಿಸುವ ಲೇಖನಗಳು, ಚಿತ್ರಗಳ ಸಂಗ್ರಹ.

3. ವರ್ಣಭೇದ ನೀತಿಯನ್ನು ತಡೆಗಟ್ಟಲು ಹೋರಾಡಿದ ವಿಶ್ವನಾಯಕರ ಭಾವ ಚಿತ್ರಗಳು.

6. ಅನುಕೂಲಿಸುವ ಸಂದರ್ಭದ ಹಂತಗಳನ್ನು ಕಲಿಕಾರ್ಥಿಗಳಿಗೆ ನಿಖರವಾಗಿ ತಿಳಿಸುವುದು.

7. ಕಲಿಕಾರ್ಥಿಯ ಪಾಲ್ಗೊಳ್ಳುವಿಕೆ, ಕೌಶಲ್ಯಗಳನ್ನು ಅನುಕೂಲಕಾರ ಹೇಗೆ ಮೌಲ್ಯಮಾಪನಕ್ಕೆ ಒಳಪಡಿಸಬೇಕು ಎಂಬುದನ್ನು ತಯಾರಿಸಿಟ್ಟುಕೊಳ್ಳಬೇಕು.

8. ಕಲಿಕಾಂಶಕ್ಕೆ ಸಂಬಂಧಿಸಿದಂತೆ ಪಠ್ಯಕ್ಕೆ ಹೊರತಾಗಿ ನೀಡುವ ಚಟುವಟಿಕೆಗಳು ಯಾವುವು ಎಂಬುದನ್ನು ಪಟ್ಟಿ ಮಾಡಿಕೊಳ್ಳುವುದು.

   ಉದಾ: ವರ್ಣಭೇದ ನೀತಿ ವಿರುದ್ಧ ಹೋರಾಡಿದ ವಿಶ್ವನಾಯಕರ ಜೀವನ ಚರಿತ್ರೆ ಓದಲು ತಿಳಿಸುವುದು.

   ಹೀಗೆಲ್ಲಾ ಅನುಕೂಲಕಾರ ಪ್ರಸ್ತುತ ಕಲಿಕಾ ವಿಧಾನಕ್ಕೆ ಪೂರ್ವ ಸಿದ್ಧತೆಯನ್ನು ಮಾಡಿ ಕೊಳ್ಳಬೇಕು.

**<u>ಕಲಿಕಾರ್ಥಿಗಳ ಸಿದ್ಧತೆ :</u>**

ಅನುಕೂಲಕಾರನು ಪ್ರಸ್ತುತ ಕಲಿಕಾ ವಿಧಾನದಲ್ಲೂ ಕಲಿಕಾಂಶಕ್ಕೆ ಸಂಬಂಧಿಸಿದಂತೆ ಕಲಿಕಾರ್ಥಿಗಳನ್ನು ಈ ಕೆಳಗಿನಂತೆ ಸಿದ್ಧಗೊಳಿಸಬೇಕು.

1. ಜ್ಞಾನ ರಚನೆಗೆ ಸಂಬಂಧಿಸಿದ ಕಲಿಕಾಂಶವನ್ನು ಅನುಕೂಲಕಾರರ ನಿರ್ದೇಶನದಂತೆ ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದು.
2. ಅನುಕೂಲಕಾರರ ಎಲ್ಲ ಸೂಚನೆಗಳನ್ನು ತಪ್ಪದೇ ನಿರ್ವಹಿಸುವುದು
3. ಕಲಿಕಾ ವಿಧಾನಕ್ಕೆ ಪೂರಕವಾದ ಚಟುವಟಿಕೆಗಳನ್ನು ತರಗತಿಯ ಕೋಣೆಯಲ್ಲಿ ಅನುಕೂಲಕಾರರು ಅನುಕೂಲಿಸಲು ಅವಕಾಶ ಕಲ್ಪಿಸಿದಾಗ ಸಂಬಂಧಿಸಿದ ಚಟುವಟಿಕೆಯ (ಸಂವಾದ, ಗುಂಪು ಚರ್ಚೆ, ಭೇಟಿ ಸಮೀಕ್ಷೆ, ತಯಾರಿಕೆ, ಸಂಗ್ರಹ, ಸಂದರ್ಶನ) ಸೂಚಿಗಳನ್ನು (ಉದಾಹರಣೆ : ಪ್ರಶ್ನಾವಳಿ) ಬರೆದಿಟ್ಟುಕೊಳ್ಳಬೇಕು.
4. ಕಲಿಕಾಂಶವನ್ನು ಕಲಿಕಾರ್ಥಿಗಳು ಅರ್ಥೈಸಿಕೊಳ್ಳುವಾಗ ಎದುರಾಗುವ ಸಮಸ್ಯೆಗಳನ್ನು ಪಟ್ಟಿ ಮಾಡಿಕೊಳ್ಳಬೇಕು.
5. ಅನುಕೂಲಕಾರರ ನಿರ್ದೇಶನದಂತೆ ಕಲಿಕಾ ಸಾಮಗ್ರಿಗಳನ್ನು ಒದಗಿಸಿಕೊಳ್ಳಬೇಕು.

ಉದಾ : ಅ) ಭಯೋತ್ಪಾದಕತೆಗೆ ಒಳಗಾದ, ಒಳಗಾಗುತ್ತಿರುವ ರಾಷ್ಟ್ರಗಳ ರಕ್ಷಣಾ ಕಾನೂನುಗಳಿಗೆ ಸಂಬಂಧಿಸಿ ವರದಿಗಳನ್ನು ತರಗತಿಯಲ್ಲಿ ವಾಚಿಸುವುದು.

ಆ) ಅಬ್ರಾಹಂ ಲಿಂಕನ್ ಅಧ್ಯಕ್ಷರಾದಾಗ ಅಮೇರಿಕನ್ನರನ್ನು ಕುರಿತು ಮಾಡಿದ ಭಾಷಣದ ಸಂಗ್ರಹ.

6. ಪ್ರತಿಯೊಬ್ಬ ಕಲಿಕಾರ್ಥಿಯು ನಿರಂತರವಾಗಿ ಘಟಕದ ಉದ್ದಕ್ಕೂ ಕಲಿಕೆಯಲ್ಲಿ ತೊಡಗಿಸಿಕೊಳ್ಳಬೇಕು.

7. ಜ್ಞಾನ ಕಟ್ಟಿಕೊಳ್ಳಲು ಬೇಕಾಗುವ ಕಲಿಕಾಂಶದ ಸಮಸ್ಯೆಗಳನ್ನು ಸೂಚನೆಗಳ ಹೊರತಾಗಿಯೂ ಮಗು ಅಥವ ಕಲಿಕಾರ್ಥಿಯು ನೀಡಿದ ಚಟುವಟಿಕೆಗಳ ಚೌಕಟ್ಟಿನಲ್ಲಿ ಸಹಪಾಠಿಗಳೊಂದಿಗೆ ಹಾಗೂ ಅನುಕೂಲಕಾರರ ಸಹಕಾರದೊಂದಿಗೆ, ಗ್ರಂಥಾಲಯ ವನ್ನು ಬಳಸಿಕೊಳ್ಳುವುದರ ಮೂಲಕ ಹೆಚ್ಚಿನ ಜ್ಞಾನವನ್ನು ಸಂಗ್ರಹಿಸಿಕೊಳ್ಳಬೇಕು.

**ಉದಾ:**

ಅ. ರಾಷ್ಟ್ರಗಳ ನಡುವಿನ ಶಸ್ತ್ರಾಸ್ತ್ರಗಳ ಪೈಪೋಟಿಗಳ ಪರಿಣಾಮ

ಆ. ಭಾರತ–ಪಾಕಿಸ್ತಾನ, ಭಾರತ ಚೀನಾ ದೇಶಗಳ ಯುದ್ಧದ ಪರಿಣಾಮಗಳು. ಅಮೇರಿಕಾ–ಇರಾಕ್ ರಾಷ್ಟ್ರಗಳ ಯುದ್ಧಗಳು.

**<u>ಅನುಕೂಲಿಸುವ ಸಂದರ್ಭ</u>**

ನಿರ್ದಿಷ್ಟ ಪಡಿಸಿಕೊಂಡ ಘಟಕಕ್ಕೆ ಪ್ರಸ್ತುತ ಕಲಿಕಾ ವಿಧಾನದಲ್ಲಿ ಪೂರ್ವಸಿದ್ಧತೆಗಾಗಿ ನಿಯೋಜಿಸಲ್ಪಟ್ಟ ಅವಧಿಗಳನ್ನು ಸಮರ್ಪಕವಾಗಿ ಬಳಸಿಕೊಂಡ ನಂತರ ಮುಂದಿನ ಅವಧಿ ಗಳನ್ನು, ಸಮಸ್ಯೆಗಳನ್ನು (ಕಲಿಕಾಂಶ) ಅನುಕೂಲಿಸಲು ಅನುಕೂಲಕಾರರು ಅವಕಾಶ ಕಲ್ಪಿಸಬೇಕು.

ಈ ಸಂದರ್ಭದಲ್ಲಿ ನೀಡಲ್ಪಡುವ ಚಟುವಟಿಕೆಯ ಸ್ವರೂಪದ ಅರಿವು ಅನುಕೂಲ ಕಾರರಿಗಿರಬೇಕಾಗುತ್ತದೆ. ಇಂತಹ ಅರಿವಿನಿಂದಲೇ ಎನ್.ಸಿ.ಎಫ್ ಮತ್ತು ಸಿ.ಸಿ.ಇನ ಆಶಯದಂತೆ ಮೌಲ್ಯಮಾಪನವನ್ನು ಮಾಡಲು ಕೂಡ ಸಾಧ್ಯವಾಗುತ್ತದೆ. ಉದಾ: ತರಗತಿ ಯಲ್ಲಿ ನೀಡಿದ ಚಟುವಟಿಕೆ ಗುಂಪು ಚರ್ಚೆಯಾಗಿದ್ದರೆ ಈ ಸಂಬಂಧದ ಮೌಲ್ಯಮಾಪನವು ಮಗುವಿನ ಪಾಲ್ಗೊಳ್ಳುವಿಕೆ (ಆಸಕ್ತಿ) ಮಾತುಗಾರಿಕೆ (ಕೌಶಲ್ಯ) ಹೊಂದಾಣಿಕೆ (ಮೌಲ್ಯಗಳು), ಕಾಳಜಿ (ಮನೋಧೋರಣೆ) ತೆಗೆದುಕೊಂಡ ತೀರ್ಮಾನ (ಅನ್ವಯ) ಈ ನಿರ್ದಿಷ್ಟಗಳನ್ನು ಘಟಕಕ್ಕೆ ತೊಡಗಿಸಿಕೊಳ್ಳುವಂತೆ ಅವಕಾಶ ಕಲ್ಪಿಸಬೇಕು.

ಈ ಹಿನ್ನಲೆಯಲ್ಲಿ ಘಟಕದ ಕಲಿಕಾಂಶವಾದ ಶಸ್ತ್ರಾಸ್ತ್ರಗಳ ಪೈಪೋಟಿ ಎಂಬ ಅಂಶವು ಮೇಲಿನ ನಿರ್ದಿಷ್ಟಗಳೊಂದಿಗೆ ಮಗುವನ್ನು ಕಲಿತುಕೊಳ್ಳಲು ಬಿಡಬೇಕು.

ಹಾಗೆಯೇ ಮಗುವೂ ಕೂಡ ಸೂಚನೆಗಳ ಅನ್ವಯ ಪಠ್ಯವಸ್ತುವಿನ ಜೊತೆಗೆ ಪಠ್ಯದಾಚೆಯ ಜ್ಞಾನರಚನೆಯನ್ನು ಮಗು ಕಟ್ಟಿಕೊಳ್ಳುವುದೇ ಈ ಅನುಕೂಲಿಸುವ ಸಂದರ್ಭದಲ್ಲಿ ಈ ಹಂತದಲ್ಲಿ ಅನುಕೂಲಕಾರನ ಸಾಮರ್ಥ್ಯಕ್ಕೆ ಅನುಗುಣವಾದ ಕಲಿಕಾ ಸಂದರ್ಭವಿರುತ್ತದೆ ಎಂಬುದನ್ನು ನಾವು ಮರೆಯಬಾರದು.

ಪ್ರತಿ ಸಮಸ್ಯೆಯ ಕಲಿಕಾಂಶಕ್ಕೆ ಪೂರಕವಾದ ಪರಿಹಾರ ಸಿಗುವುದೇ ಈ ಹಂತದಲ್ಲಿ. ಇದನ್ನು ಅನುಕೂಲಕಾರರು ತಮ್ಮೊಳಗಿನ ಪ್ರಜ್ಞೆಯಿಂದ ಈ ಸಂದರ್ಭವನ್ನು ಅನ್ವಯಿಸ ಬೇಕೆಂಬುದು ನೂತನ ಶಿಕ್ಷಣ ಕ್ರಮದ ಮಹತ್ತರ ಆಶಯವಾಗಿದೆ. ಇಲ್ಲಿ ಎನ್.ಸಿ.ಎಫ್ ಆಶಯ ಈಡೇರಲೇಬೇಕು. ಉದಾಹರಣೆಗೆ ಮಾನವ ಹಕ್ಕುಗಳ ನಿರಾಕರಣೆಯನ್ನು ಕುರಿತ ಕಲಿಕಾಂಶವನ್ನು ತರಗತಿಯಲ್ಲಿ ತಂದಾಗ ಆಧುನಿಕೋತ್ತರ ಇಂದಿನ ಈ ಜಗತ್ತಿನಲ್ಲಿಯೂ ಗುಲಾಮಗಿರಿ, ಮಾನವರ ಮಾರಾಟ, ಬಾಲಕಾರ್ಮಿಕ ಪದ್ಧತಿ, ಅತ್ಯಾಚಾರ, ವಂಚನೆಗೆ ಒಳಗಾಗಿ ನರಳುತ್ತಿರುವ ಮಾನವರನ್ನು ರಕ್ಷಿಸುವ ಹೊಣೆಗಾರಿಕೆ ನನ್ನದು ಎಂಬ ತೀರ್ಮಾನಕ್ಕೆ ಮಗು ಬರಲೇಬೇಕು. ಹಾಗೂ ಮಗುವಿನಲ್ಲಿಯೂ ಇವುಗಳ ವಿರುದ್ಧದ ಭಾವನೆಗಳು ಹೃದಯದಲ್ಲಿ ಅರಳಬೇಕು.

ಈ ಸಂದರ್ಭದಲ್ಲಿ ರಚನಾ ತಂಡವು ತಮಗೆ ನಿರ್ದಿಷ್ಟವಾಗಿ ಹೇಳುವುದೆಂದರೆ ಮೇಲಿನ ಎನ್.ಸಿ.ಎಫ್.ನ ಆಶಯಕ್ಕೆ ಸಂಬಂಧಿಸಿದಂತೆ ಈ ಮುಂದಿನ ಚಟುವಟಿಕೆಯನ್ನು ಕೊಡಬಹುದು.

**ಚಟುವಟಿಕೆ :**

1. ಬಾಲಾಪರಾಧಕ್ಕೆ ಕಾರಣಗಳು ಅದರಿಂದ ಉಂಟಾಗುವ ದುಷ್ಪರಿಣಾಮಗಳನ್ನು ಕುರಿತಂತೆ ಬರುವ ಲೇಖನಗಳನ್ನು ಓದುವುದು, ಸಂಗ್ರಹಿಸುವುದು.
2. ನೆಲ್ಸನ್ ಮಂಡೇಲಾರವರ ಸೆರೆವಾಸದ ಬದುಕನ್ನು ಕುರಿತ ಮಾಹಿತಿ ಸಂಗ್ರಹಿಸುವುದು.

ಹೀಗೆ ಅನುಕೂಲಕಾರರು ಬೌದ್ಧಿಕವಾಗಿ ಪ್ರಬುದ್ಧರಾಗಿದ್ದರೆ, ಇಂತಹ ಘಟಕಗಳನ್ನು ಸಮಸ್ಯಾ ಪರಿಹಾರ ವಿಧಾನದ ಮೂಲಕ ಮಗುವಿನ ತಾರ್ಕಿಕ ಭಾವನೆಗಳನ್ನು ಅರ್ಥೈಸಿಕೊಳ್ಳುವ ಸಾಮರ್ಥ್ಯವನ್ನು ಪಡೆಯುವ ಪ್ರಜ್ಞೆಯನ್ನು ತರಗತಿಯ ಪ್ರತಿಯೊಂದು ಮಗುವಿನಲ್ಲೂ ಪಠ್ಯಪುಸ್ತಕದ ಹೊರತಾದ ಜ್ಞಾನವನ್ನು ಕಟ್ಟಿಕೊಳ್ಳುವಂತೆ ಪ್ರೇರೇಪಿಸಬಹುದು. ಕಲಿಕಾರ್ಥಿಯೂ ಕೂಡ ಯಾವುದೇ ಪೂರ್ವಗ್ರಹಕ್ಕೆ ಒಳಗಾಗದೆ ಸಮಸ್ಯೆಯ ಆದಿಯನ್ನು ಕಂಡುಕೊಂಡು ಕಲಿಕೆಯಲ್ಲಿ ತೊಡಗಿಸಿಕೊಂಡಾಗ, ಅನುಕೂಲಿಸಲು ಒದಗಿಸಲ್ಪಟ್ಟ ಅವಧಿಗಳ ಸಾರ್ಥಕ್ಯಕ್ಷಣ ಒದಗಿದಂತಾಗುತ್ತದೆ.

**'ಮೌಲ್ಯಮಾಪನ'**

ಯಾವುದೇ ಕಲಿಕಾ ವಿಧಾನಕ್ಕೆ ಸಂಬಂಧಿಸಿದಂತೆ ಕಲಿಕಾಂಶವನ್ನು ಕುರಿತ ಮೌಲ್ಯಮಾಪನವು ಎನ್.ಸಿ.ಎಫ್ 2005 ರ ಆಶಯದಂತೆ ಸಿ.ಸಿ.ಇ. ನ ಉದ್ದೇಶಗಳನ್ನು ಸಫಲಗೊಳಿಸುವುದಾಗಿರುತ್ತದೆ. ಈ ಹಿನ್ನಲೆಯಲ್ಲೂ ಕಲಿಕಾರ್ಥಿಗಳ ವಿಭಿನ್ನ ಆಸಕ್ತಿ ಮತ್ತು ಕಲಿಕೆಯ ಪ್ರವೃತ್ತಿಗಳನ್ನು ಕಲಿಕಾಂಶಕ್ಕೆ ಸಂಬಂಧಿಸಿದಂತೆ ಒಳಪಡಿಸುವುದು ಬಹುಮುಖ್ಯವಾಗಿರುತ್ತದೆ. ಹಾಗೆಯೇ ತಂತ್ರ ಮತ್ತು ಸಾಧನಗಳ ಮೂಲಕ ಕಲಿಕಾ ಖಾತ್ರಿಯನ್ನು ಮಾಡಿಕೊಳ್ಳಬೇಕಾಗುತ್ತದೆ.

**ಉದಾ :**

* ಗುಂಪು ಚರ್ಚೆ ನಡೆಯುತ್ತಿದ್ದರೆ ಅವಲೋಕನದೊಂದಿಗೆ (ತಂತ್ರ) ತಪಶೀಲು ಪಟ್ಟಿ.
* ರಸಪ್ರಶ್ನೆ ಚಟುವಟಿಕೆಯಿದ್ದಲ್ಲಿ ಪ್ರಶ್ನಾವಳಿ ತಂತ್ರದೊಂದಿಗೆ, ತಪಶೀಲುಪಟ್ಟಿ (ಸಾಧನ)
* ಸಂವಾದದ ಚಟುವಟಿಕೆಯಾದಲ್ಲಿ ಪ್ರಶ್ನಾವಳಿ (ತಂತ್ರ)ಸಂವಾದ ಸೂಚಿ (ಸಾಧನ)
* 'ಯೋಜನೆ' ಚಟುವಟಿಕೆಯಾದಲ್ಲಿ (ತಂತ್ರ) ಯೋಜನಾ ಸೂಚಿ ಸಾಧನವಾಗುತ್ತದೆ.

ಬೇರೆ ಬೇರೆ ಚಟುವಟಿಕೆಗಳೊಂದಿಗೆ ಮೌಲ್ಯಮಾಪನವನ್ನು ಮಾಡುವಾಗ, ಅವುಗಳ ಸ್ವರೂಪ, ಮೌಲ್ಯಮಾಪಕನಿಗೆ ಅರಿವಿರಬೇಕು. ಪ್ರಸ್ತುತ ಘಟಕಕ್ಕೆ ಸಂಬಂಧಿಸಿದಂತೆ ಸಮಸ್ಯಾ

ಪರಿಹಾರ ವಿಧಾನದ ಮೂಲಕ ಸಮಸ್ಯೆ ಪರಿಹಾರವಾಗಿ ಕಟ್ಟಿಕೊಂಡ ಜ್ಞಾನವು ಜೀವನಾವಶ್ಯಕ ಸಾಮರ್ಥ್ಯವಾಗಿ ನಿಲ್ಲಬೇಕು. ಅದು ಕಲಿಕಾರ್ಥಿಯಲ್ಲಿ ಮನನಗೊಂಡಿರಬೇಕು.

**ಉದಾ:** ಮಾನವ ಹಕ್ಕುಗಳ ರಚನಾತ್ಮಕ ಕಲಿಕೆಯಿಂದ ಸಮಾನತಾಭಾವ, ಶಸ್ತ್ರಾಸ್ತ್ರಗಳ ಅರಿವಿನೊಂದಿಗೆ ವಿಶ್ವ ಕುಟುಂಬದ ಪರಿಪಾಲನೆ ವರ್ಣಭೇದ ನೀತಿಯ ಜ್ಞಾನದಿಂದಾಗಿ ವ್ಯಕ್ತಿಗಳಿಗೆ ವ್ಯಕ್ತಿತ್ವಕ್ಕೆ ಗೌರವ ಭಾವನೆ ನೀಡುವುದು.

**ಸಮಸ್ಯಾ ಪರಿಹಾರ ವಿಧಾನ ಕುರಿತ ಅನಿಸಿಕೆ :**

ಕಲಿವಿನ ಸಂದರ್ಭದಲ್ಲಿ ಸಮಸ್ಯಾ ಪರಿಹಾರ ವಿಧಾನವು ತರಗತಿಯನ್ನು ಪರಿಪೂರ್ಣವಾಗಿ ಕ್ರಿಯಾಶೀಲವಾಗಿಟ್ಟು, ಅನುಕೂಲಕಾರ ಮತ್ತು ಕಲಿಕಾರ್ಥಿಗಳಲ್ಲಿ ಕುತೂಹಲ, ಆಸಕ್ತಿಗಳನ್ನು ಬೆಳೆಸುವಲ್ಲಿ ಹಾಗೂ ನಿಧಾನಕಲಿಕೆಗೆ ಆದ್ಯತೆಗಳನ್ನು ನೀಡುವುದರಿಂದ ಈ ವಿಧಾನವನ್ನು ಸಮಾಜ ವಿಜ್ಞಾನ ವಿಷಯ ಬೋಧನೆಯಲ್ಲಿ ಸಮಗ್ರವಾಗಿ ಬಳಸಿಕೊಳ್ಳುವುದು.

## ಕಲಿಕಾ ವಿಧಾನ –2

### 'ವೀಕ್ಷಣಾ ವಿಧಾನ'

**ಸ್ವರೂಪ:**

ಸಮಾಜ ವಿಜ್ಞಾನ ವಿಷಯವನ್ನು ತರಗತಿಯಲ್ಲಿ ಅನುಕೂಲಿಸಲು ಹಲವು ಹನ್ನೊಂದು ಕಲಿವಿನ ವಿಧಾನಗಳಿರುವುದನ್ನು ನಾವು ಈಗಾಗಲೇ ಅರ್ಥೈಸಿಕೊಂಡಿದ್ದೇವೆ. ಅವುಗಳಲ್ಲಿ ವೀಕ್ಷಣಾ ವಿಧಾನವೂ ಒಂದು. 'ಈ ಕಲಿಕಾ ವಿಧಾನವು ತನ್ನೊಳಗೆ ಯಾವುದನ್ನು? ಹೇಗೆ? ಯಾವಾಗ? ಎಲ್ಲಿ? ಎಂಬ ಪ್ರಶ್ನೆಗಳನ್ನು ಕಟ್ಟಿಕೊಂಡು ಮುನ್ನಡೆಯುತ್ತಿರುತ್ತದೆ. ಈ ಎಲ್ಲಾ ಪ್ರಶ್ನೆಗಳಿಗೂ ಕಲಿಕಾ ಸಂದರ್ಭದಲ್ಲಿ ಜ್ಞಾನವು ದೊರೆಯುವಂತೆ ಮಾಡುವುದೇ ವೀಕ್ಷಣಾ ವಿಧಾನ.

ಅಂದರೆ 'ಕಲಿಕಾಂಶಕ್ಕೆ ಸಂಬಂಧಿಸಿದಂತೆ ಪೂರಕವಾದ ಹೆಚ್ಚಿನ ಜ್ಞಾನವನ್ನು ಕಲಿಕಾರ್ಥಿ ಪಡೆದುಕೊಳ್ಳಲು ಸ್ಥಳ, ಘಟನೆ, ದೃಶ್ಯ, ವಸ್ತು, ಪ್ರಾಣಿ ಇತ್ಯಾದಿಗಳನ್ನು ನಿರ್ದೇಶನಾನ್ವಯ ಗಮನಿಸಿ ಸಂಬಂಧಿಸಿದ ಅರಿವಿನ ರಚನೆಯನ್ನು ಪಡೆದುಕೊಳ್ಳುವುದಕ್ಕೆ ವೀಕ್ಷಣ ವಿಧಾನ ಎನ್ನಲಾಗುವುದು.

**ವೀಕ್ಷಣಾ ವಿಧಾನದ ಲಕ್ಷಣಗಳು :**

1. ಕಲಿಕಾಂಶಕ್ಕೆ ಸಂಬಂಧಿಸಿದಂತೆ ವೀಕ್ಷಣೆಗೆ ಅವಕಾಶವಿರಬೇಕು.
2. ವೀಕ್ಷಣಾ ಅನಿವಾರ್ಯತೆಯ ಅರಿವಿರಬೇಕು.
3. ಯಾವಾಗ, ಹೇಗೆ ವೀಕ್ಷಣೆಯನ್ನು ಮಾಡಬೇಕೆಂಬ ವೀಕ್ಷಣಾ ಸೂಚಿಯನ್ನು ಹೊಂದಿರುತ್ತದೆ.
4. ವೀಕ್ಷಣೆಗೆ ನಿರ್ದಿಷ್ಟ ಪಡಿಸಲಾದ ಕಾಲಮಿತಿ ಇರುತ್ತದೆ.
5. ವೀಕ್ಷಣೆಯ ಸಂದರ್ಭದಲ್ಲಿ ಕಲಿಕಾರ್ಥಿಯ ಜಾಗರೂಕತೆಯಿಂದ ಇರಬೇಕು.
6. ವೀಕ್ಷಣೆಯ ಹಿನ್ನಲೆಯ ಉದ್ದೇಶವು ಕಲಿಕಾರ್ಥಿಗೆ ತಲುಪುವಂತಹ ಚೌಕಟ್ಟನ್ನು ಹೊಂದಿರುತ್ತದೆ.

7. ವೀಕ್ಷಣೆಯ ಸಂದರ್ಭದಲ್ಲಿ ಕಲಿಕಾರ್ಥಿಯಿಂದ ತಾಳ್ಮೆ, ಸೌಜನ್ಯತೆ, ಧೈರ್ಯವಂತಿಕೆ, ಸಹೃದಯತೆ, ಸಂವೇದನಾಶೀಲತೆ, ಸ್ವಭಾವವನ್ನು ಈ ವಿಧಾನ ನಿರೀಕ್ಷಿಸುತ್ತದೆ.

8. ಪಠ್ಯಪುಸ್ತಕದಾಚೆ ಜ್ಞಾನವನ್ನು ಕಟ್ಟಿಕೊಳ್ಳಲು ಬೇಕಾಗುವ ಅವಕಾಶವನ್ನು ನಿರಂತರ ವಾಗಿ ಒದಗಿಸುತ್ತದೆ.

9. ಕಲಿಕಾರ್ಥಿಯಲ್ಲಿ ಅನುಭವಾತ್ಮಕ ಕಲಿಕೆಗೆ ವೀಕ್ಷಣಾ ವಿಧಾನವು ಆದ್ಯತೆಯನ್ನು ನೀಡುತ್ತಾ, ಸ್ವಂತಿಕೆ, ನಿರ್ಧಾರದಲ್ಲಿ ದೃಢತೆ, ತನ್ನ ಶ್ರಮದ ಬಗ್ಗೆ ನಂಬಿಕೆ ಬೆಳೆದು ಸ್ವತಂತ್ರ ಮನೋಧರ್ಮ ವಿಕಾಸವಾಗುವಂತಹ ಕಲಿಕಾ ಪ್ರೇರಣೆ ದೊರೆಯುವಂತೆ ಮಾಡುತ್ತದೆ.

**ಘಟಕದ ಆಯ್ಕೆ :**

**ಘಟಕ : ದುಡಿಮೆ ಮತ್ತು ಆರ್ಥಿಕ ಜೀವನದ (ಸಮಾಜಶಾಸ್ತ್ರ ವಿಭಾಗ)**

**ಸಿದ್ಧತೆ :**

ವೀಕ್ಷಣಾ ವಿಧಾನಕ್ಕೆ ಸಂಬಂಧಿಸಿದಂತೆ ತರಗತಿಯ ಸಿದ್ಧತೆಯನ್ನು ಮಾಡುವುದು ಅನುಕೂಲಕಾರನ ಆದ್ಯತೆಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕಲಿಕಾರ್ಥಿಯು ಸಹ ನೀಡಲಾದ ನಿರ್ದೇಶನವನ್ನು ಪಾಲಿಸಿ ಜ್ಞಾನವನ್ನು ಪಡೆದುಕೊಳ್ಳಬೇಕಾಗುತ್ತದೆ. ಈ ಸಿದ್ಧತೆಯ ಹಂತದಲ್ಲಿ ಬರುವ ಗೊಂದಲ ಅನುಮಾನಗಳಿಗೆ ಪರಿಹಾರವು ದೊರೆಯುವಂತಿರಬೇಕು. ಆದ್ದರಿಂದ ಆಯ್ಕೆ ಮಾಡಿಕೊಂಡ ಘಟಕದ ಕಲಿಕಾ ಫಲಿತಾಂಶವು ಪೂರ್ವಸಿದ್ಧತೆಯನ್ನೇ ಅವಲಂಬಿಸುತ್ತದೆ. ಇದರಿಂದಾಗಿ ಅನುಕೂಲಕಾರ ವೀಕ್ಷಣಾ ವಿಧಾನಕ್ಕೆ ಸಂಬಂಧಿಸಿದ ಕಲಿಕಾಂಶಕ್ಕೆ ಸಂಬಂಧಿಸಿದಂತೆ ಮೊದಲು ಈ ಕೆಳಕಂಡ ಪೂರ್ವಸಿದ್ಧತೆಯನ್ನು ಮಾಡಿ ಕೊಳ್ಳಬೇಕಾಗುತ್ತದೆ.

1. ಅನುಕೂಲಕಾರ ವೀಕ್ಷಣಾ ವಿಧಾನಕ್ಕೆ ಸಂಬಂಧಿಸಿದಂತೆ ಕಲಿಕಾಂಶದ ಸಂದರ್ಭದ ವ್ಯಾಪ್ತಿಯನ್ನು ನಿರ್ದಿಷ್ಟಪಡಿಸಿಕೊಳ್ಳಬೇಕು. ಉದಾ:
2. ಕಲಿಕಾಂಶಕ್ಕೆ ಸಂಬಂಧಿಸಿದಂತೆ ವೀಕ್ಷಣೆ ಮಾಡುವಾಗ ಕಲಿಕಾರ್ಥಿ ಅನುಸರಿಸಬೇಕಾದ ಹಂತಗಳ ಸೂಚನೆಯನ್ನು ನೀಡಬೇಕು.
3. ವೀಕ್ಷಣೆಯ ಸಂದರ್ಭಕ್ಕೆ ಕಲಿಕಾರ್ಥಿಗಳ ಗುಂಪು ರಚನೆ ಅವಶ್ಯಕತೆ ಎನಿಸಿದ್ದಲ್ಲಿ ಗುಂಪುಗಳನ್ನು ರಚಿಸಿ ಸೂಕ್ತ ಸೂಚನೆ ನೀಡಬೇಕು.
4. ವೀಕ್ಷಣಾ ಸಂದರ್ಭದಲ್ಲಿ ಕಟ್ಟಿಕೊಳ್ಳಬೇಕಾದ ಜ್ಞಾನ ಯಾವುದೆಂಬುದನ್ನು ಖಚಿತ ಪಡಿಸಿಕೊಳ್ಳಬೇಕು.

5. ವೀಕ್ಷಣೆಯ ವರದಿಯು ವಸ್ತುನಿಷ್ಠವಾಗಿ ಇರಬೇಕೆಂಬುದರ ಬಗ್ಗೆ ಕಲಿಕಾರ್ಥಿಗಳಿಗೆ ಸಿದ್ಧಪಡಿಸಲು ಸೂಚನೆ/ ಮಾರ್ಗದರ್ಶನವನ್ನು ಸ್ಪಷ್ಟವಾಗಿ ನೀಡಬೇಕು.

6. ವೀಕ್ಷಣೆಯ ಸಂದರ್ಭದಲ್ಲಿ ಸಂಗ್ರಹಿಸಿಟ್ಟುಕೊಳ್ಳಬಹುದಾದ ಛಾಯಾಚಿತ್ರಗಳು, ಮಾಹಿತಿ ಸಂಗ್ರಹಗಳನ್ನು ಕಲಿಕಾರ್ಥಿಗಳು ಮಾಡಿಕೊಳ್ಳಲು ಸಲಹೆ ನೀಡಬೇಕು.

7. ಕಲಿಕಾ ಸಾಮಾಗ್ರಿಗಳನ್ನು ಸಂಗ್ರಹಿಸಿಕೊಳ್ಳಬೇಕು. ಉದಾ: ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ವ್ಯತ್ಯಾಸಗಳ ಪಟ್ಟಿ ತಯಾರಿಕೆ. (01ಕ್ಕೆ ಸಂಬಂಧಿಸಿದಂತೆ)

ಉದಾ:

* ಶ್ರಮವಿಭಜನೆ ಹಾಗೂ ದುಡಿಮೆಯ ಅರ್ಥ
* ನಿರುದ್ಯೋಗಗಳ ಪ್ರಕಾರಗಳು, ಕಾರಣಗಳು, ಪರಿಣಾಮಗಳು, ಪರಿಹಾರೋಪಾಯಗಳು
* ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರು ಇತ್ಯಾದಿ.

**(02ಕ್ಕೆ ಸಂಬಂಧಿಸಿದಂತೆ)**

ಉದಾ: ವೀಕ್ಷಣೆ : ಕಟ್ಟಡ ಕಟ್ಟುವ ಸ್ಥಳ (ದುಡಿಮೆಯಲ್ಲಿ ಭೇದಭಾವಕ್ಕೆ ಸಂಬಂಧಿಸಿದಂತೆ)

ಹಂತಗಳು :
* ವೀಕ್ಷಣಾ ಸ್ಥಳದ ಆಯ್ಕೆ
* ಕಟ್ಟಡದ ಸ್ಥಳಕ್ಕೆ ಭೇಟಿ
* ಕಟ್ಟಡ ಕಟ್ಟುವ ಸ್ಥಳದ ಅವಲೋಕನ
* ಸೂಚನೆಗಳ ಅನ್ವಯ ಕಾರ್ಯತತ್ಪರತೆ
* ಮಾಹಿತಿ ಸಂಗ್ರಹ
* ವರದಿ ತಯಾರಿಕೆ
* ತರಗತಿಯಲ್ಲಿ ಪ್ರಸ್ತುತಿ ಚರ್ಚೆ, ತೀರ್ಮಾನ

(04ಕ್ಕೆ ಸಂಬಂಧಿಸಿದಂತೆ)

ಉದಾ:
* ಅಸಂಘಟಿತ ಕಾರ್ಮಿಕರ ದುಡಿಮೆಯ ಸಂಭಾವನೆಯಲ್ಲಿ ಲಿಂಗತಾರತಮ್ಯ ಮಾಡುವುದು ಏಕೆ? ಎಂಬ ಜ್ಞಾನವನ್ನು ಪಡೆಯುವುದು ಹಾಗೂ ನಿರ್ಧಾರ ತೆಗೆದುಕೊಳ್ಳುವುದು.
* ಸಮಾನ ವೇತನ ಕಾಯದೆ ಅನುಷ್ಠಾನಗೊಳ್ಳದಿರಲು ಕಾರಣವೇನೆಂಬುದನ್ನು ಅರಿಯುವುದು.

**ಕಲಿಕಾರ್ಥಿಗಳ ಸಿದ್ಧತೆ :**

ವೀಕ್ಷಣಾ ವಿಧಾನಕ್ಕೆ ಸಂಬಂಧಿಸಿದಂತೆ ಅನುಕೂಲಕಾರರು ನಿರ್ದೇಶನ, ಸಲಹೆ, ಮಾರ್ಗದರ್ಶನಗಳನ್ನು ಗಮನಿಸಿದ ಕಲಿಕಾರ್ಥಿಗಳು ಈ ಕೆಳಗಿನಂತೆ ಕಲಿಕಾ ಪೂರ್ವ ಸಿದ್ಧತೆಯಲ್ಲಿ ತೊಡಗಿಸಿಕೊಳ್ಳಬೇಕು.

1. ಕಲಿಕಾಂಶಕ್ಕೆ ಸಂಬಂಧಿಸಿದಂತೆ ವೀಕ್ಷಿಸಬೇಕಾದ ಅಂಶ ಯಾವುದೆಂಬುದನ್ನು ಅನುಕೂಲಕಾರನ ನಿರ್ದೇಶನದಂತೆ ಖಚಿತಪಡಿಸಿಕೊಳ್ಳುವುದು.

   ಉದಾ: ಗ್ರಾಮೀಣ ಪ್ರದೇಶದ ವೀಕ್ಷಣೆ

   (ಕೃಷಿ ಹಿಂದುಳಿಯಲು ಕಾರಣ ಎಂಬ ಕಲಿಕಾಂಶ ಕುರಿತಂತೆ)

2. ವೀಕ್ಷಣಾ ಸೂಚಿಗಳನ್ನು ಸ್ಪಷ್ಟವಾಗಿ ಮನನ ಮಾಡಿಕೊಳ್ಳುವುದು.

   ಉದಾ: ಸಮಯಪಾಲನೆ ಮತ್ತು ಜಾಗೃತಿ ಇತ್ಯಾದಿ

3. ಪೂರ್ವಸಿದ್ಧತೆಯ ಹಂತದಲ್ಲಿನ ಸೂಚನೆಗಳು ಹಾಗೂ ವೀಕ್ಷಣಾ ಸೂಚಿಗಳಲ್ಲಿನ ಅನುಮಾನಗಳನ್ನು ಬಗೆ ಹರಿಸಿಕೊಳ್ಳುವುದು.

4. ಕಲಿಕಾಂಶಕ್ಕೆ ಪೂರಕವಾದ ಪೂರ್ವಭಾವಿ ತಯಾರಿ ಹೇಗಿರಬೇಕೆಂಬುದರ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದು.

   ಉದಾ: ಸಂಘಟಿತ ಕಾರ್ಮಿಕರ ಕಾರ್ಯಕ್ಷೇತ್ರ ಕುರಿತ ಕಲಿಕಾಂಶಕ್ಕೆ ಬ್ಯಾಂಕ್ ವೀಕ್ಷಣೆ ಮಾಡಲು ಸಂಬಂಧಿಸಿದ ದಿನಾಂಕದ ಒಪ್ಪಿಗೆ ಪಡೆಯುವುದು (ಯಾರಾದರೊಬ್ಬರು)

5. ವೀಕ್ಷಣಾ ಸಂದರ್ಭಕ್ಕಾಗಿ ಬೇಕಾಗುವ ಕಲಿಕಾ ಸಾಮಾಗ್ರಿಗಳನ್ನು ಸಿದ್ಧಪಡಿಸಿಕೊಳ್ಳುವುದು.

   ಉದಾ: ನೋಟ್‌ಪ್ಯಾಡ್, ಕ್ಯಾಮರಾ, ಕ್ಯಾಲುಕ್ಯುಲೇಟರ್, ಸೂಚಿಗಳು ಇತ್ಯಾದಿ

6. ಕಲಿಕೆಯಲ್ಲಿ (ವೀಕ್ಷಣೆ) ಕಲಿಕಾರ್ಥಿಗೆ ಅಗತ್ಯವಾಗಿ ಬೇಕಿರುವ ಕುತೂಹಲ, ಅನುಮಾನ, ಆಸಕ್ತಿ, ಪ್ರಶಂಸೆಯಂತಹ ಸ್ವಭಾವಗಳನ್ನು ಬೆಳೆಸಿಕೊಳ್ಳುವ ಮನೋಭಾವನೆಯನ್ನು ಸಿದ್ಧಗೊಳಿಸಿಕೊಳ್ಳಬೇಕು.

**ಅನುಕೂಲಿಸುವ ಸಂದರ್ಭ:**

ಕಲಿಕಾರ್ಥಿಗಳು ಅನುಕೂಲಕಾರರು ನಿರ್ದಿಷ್ಟ ಪಡಿಸಿದ ದಿನಾಂಕದಂದು ವೀಕ್ಷಣಾ ಸ್ಥಳಕ್ಕೆ ತೆರಳಿ, ಸೂಚನೆಗಳ ಅನ್ವಯ ವೀಕ್ಷಣೆಗೆ ತೊಡಗಿ ಅನುಕೂಲಕಾರರ ನೆರವಿನೊಂದಿಗೆ, ಪರಸ್ಪರ ಚರ್ಚೆ, ಸಮಾಲೋಚನೆಗಳೊಂದಿಗೆ ಜ್ಞಾನವನ್ನು ಕಟ್ಟಿಕೊಂಡು ತಮ್ಮದೇ ರೀತಿಯಲ್ಲಿ

ವರದಿಯನ್ನು ತಯಾರಿಸಿಕೊಳ್ಳಲು ಮಾಹಿತಿಗಳನ್ನು (ಅವಶ್ಯಕತೆ ಇದ್ದಲ್ಲಿ) ಸಂಗ್ರಹಿಸಿಟು ಕೊಳ್ಳುವರು.

ನಂತರ ತರಗತಿ ಕೋಣೆ ಒಂದು (ಮುಂದಿನ ಅವಧಿ) ಪರಸ್ಪರ ವರದಿಗಳನ್ನು ಅನುಭವಾತ್ಮಕವಾಗಿ ಹಂಚಿಕೊಳ್ಳುವರು. ಈ ಸಂದರ್ಭದಲ್ಲಿ ಎನ್.ಸಿ.ಎಫ್ ಆಶಯಗಳಂತೆ ಕಲಿಕೆಯನ್ನು ಮನನ ಮಾಡಿಕೊಳ್ಳುವರು.

ಉದಾ: * ಕೌಶಲ್ಯವಂತ ಕಾರ್ಮಿಕರ ಮಹತ್ವ

* ಸಮಾನ ದುಡಿಮೆಗೆ ಸಮಾನ ವೇತನ
* ದುಡಿಮೆ ಬದುಕಿನ ಲಕ್ಷಣ
* ಸಂಘಟನೆಯಲ್ಲಿ ಬಲವಿದೆ.

ಈ ಸಂದರ್ಭದಲ್ಲಿ ಚರ್ಚೆ, ಮಂಡನೆ, ಅಭಿಪ್ರಾಯ, ತೀರ್ಮಾನಗಳಿಗೆ ತರಗತಿಯು ಅವಕಾಶ ಕಲ್ಪಿಸುತ್ತದೆ. ಅನುಕೂಲಕಾರ ಈ ಎಲ್ಲಾ ಚಟುವಟಿಕೆಗಳನ್ನು ತನ್ನ ಅವಲೋಕನ ತಂತ್ರದಿಂದ ಗಮನಿಸಿ ಸೂಕ್ತ ಸಾಧನಗಳೊಂದಿಗೆ ತರಗತಿ ಕಲಿಕೆಯ ಖಾತ್ರಿಯನ್ನು ಮಾಡಿಕೊಳ್ಳುವುದು. ಪ್ರತಿ ಕಲಿಕಾರ್ಥಿಯು ಈ ಸಂದರ್ಭದಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳುವಂತೆ ಪ್ರೇರಣೆ ಪ್ರೋತ್ಸಾಹಗಳನ್ನು ನೀಡುವುದು ಅನಿವಾರ್ಯವಾಗಿರುತ್ತದೆ.

**ಮೌಲ್ಯಮಾಪನ :**

ಕಲಿಕೆಯ ಫಲಿತವನ್ನು ಅಳೆಯುವ ಸಾಧನವಾಗಿರುವ ಮೌಲ್ಯಮಾಪನವು, ಪ್ರಸ್ತುತ ಹೊಸ ಶಿಕ್ಷಣ ಕ್ರಮದ ಉದ್ದೇಶಗಳನ್ನು ಎನ್.ಸಿ.ಎಫ್ ನ ಆಶಯಗಳೊಂದಿಗೆ ಕಲಿಕಾರ್ಥಿಯು ತನ್ನ ಹೃದಯದಲ್ಲಿ ಗಟ್ಟಿಗೊಳಿಸಿಕೊಳ್ಳುವಂತೆ ಸಾಧನವಾಗಿ ಕಂಡುಬರುತ್ತದೆ.

ಈ ಹಿನ್ನಲೆಯಲ್ಲಿ ಅನುಕೂಲಕಾರನ ಅನುಕೂಲಿಸುವಿಕೆ ಹಾಗೂ ಕಲಿಕಾರ್ಥಿಯ ಕಲಿಕಾ ಪರಿಣಾಮಗಳು ಪ್ರಸ್ತುತ ಘಟಕಕ್ಕೆ ಸಂಬಂಧಿಸಿದಂತೆ ಮೂಡಿಬರುವುದು ವೀಕ್ಷಣಾ ವಿಧಾನ ದಲ್ಲಿ ನೀಡಿದ ಚಟುವಟಿಕೆಗಳ ಅನ್ವಯ ಈ ಕೆಳಗಿನಂತೆ ಸಾಧಿತವಾಗುವುದು ಹೆಚ್ಚು ಸೂಕ್ತವೆನಿಸುತ್ತದೆ.

1. ಪ್ರಸ್ತುತ ವೀಕ್ಷಣಾ ಚಟುವಟಿಕೆಯ ನಿರ್ದಿಷ್ಟಗಳಾದ ವೀಕ್ಷಿಸುವಿಕೆಯಲ್ಲಿನ ಆಸಕ್ತಿ, ಮನೋಧೋರಣೆ, (ಕಾಳಜಿ ಕಳಕಳಿ, ಸಂವೇದನೆ) ಅರ್ಥೈಸಿಕೊಳ್ಳುವಿಕೆ, ಹೋಲಿಕೆ, ವ್ಯತ್ಯಾಸ, ಸಾಮ್ಯತೆ, ತಾರ್ಕಿಕವಾದ ಆಲೋಚನೆಗಳನ್ನು ಕುರಿತಂತೆ ಅನುಕೂಲಕಾರ ಮಕ್ಕಳನ್ನು ಮೌಲ್ಯ ಮಾಪನಕ್ಕೆ ಒಳಪಡಿಸಬೇಕು.

**ಉದಾ:**

* ಕಟ್ಟಡ ಕಟ್ಟುವ ಸ್ಥಳಕ್ಕೆ ಭೇಟಿ ನೀಡಿದಾಗ, ಕಲಿಕಾರ್ಥಿಗಳ ಆಸಕ್ತಿ, ಅವರ ಅಲ್ಲಿನ ಚಟುವಟಿಕೆಗಳನ್ನು ಅನುಕೂಲಕಾರ ಸೂಕ್ಷ್ಮವಾಗಿ ಗಮನಿಸುತ್ತಿರಬೇಕು.
* ಗ್ರಾಮೀಣ ಪ್ರದೇಶಕ್ಕೆ ಭೇಟಿ ನೀಡಿದಾಗ, ಕೃಷಿ ಹಿಂದುಳಿದು ರಾಷ್ಟ್ರದಲ್ಲಿ ಮುಂದೆ ಸಂಭವಿಸಬಹುದಾದ ಆಹಾರದ ಸಮಸ್ಯೆಯನ್ನು ಕುರಿತಂತೆ, ಇದಕ್ಕೆ ಮಗು ಸ್ಪಂದಿಸುವ ರೀತಿ ಕೃಷಿ ಬಗೆಗಿನ ಸಂವೇದನೆ (ಮನೋಧೋರಣೆ) ಇವುಗಳನ್ನು ಅನುಕೂಲಕಾರ ಗಮನಿಸಿ ಮೌಲ್ಯಮಾಪನ ಮಾಡುವುದು.

2. ಕಲಿಕೆಯಿಂದ ಮಗುವಿನಲ್ಲಿ ಬಂದಿರುವ ಸ್ವಾತಂತ್ರ್ಯ ಆಲೋಚನೆ, ಶ್ರಮ ಸಂಸ್ಕೃತಿಯ ಮಹತ್ವ ಅಸಂಘಟಿತ ಕಾರ್ಮಿಕರನ್ನು ಕುರಿತಂತೆ ಮಗು ಕಟ್ಟಿಕೊಂಡ ಜ್ಞಾನವನ್ನು ಸಿ.ಸಿ.ಇ. ನಿರ್ದೇಶನದಂತೆ ಮೌಲ್ಯಮಾಪನ ಮಾಡುವುದು .

ಉದಾ:

* ಸ್ವತಂತ್ರ್ಯ ಆಲೋಚನೆ
* ಸ್ವ ಉದ್ಯೋಗದಲ್ಲಿ ನಂಬಿಕೆ (ನಿರುದ್ಯೋಗ ಸಮಸ್ಯೆ)
* ಶ್ರಮ ಸಂಸ್ಕೃತಿ : ದುಡಿಮೆಯೇ ದುಡ್ಡಿನ ತಾಯಿ (ದುಡಿಮೆ ಮತ್ತು ಆರ್ಥಿಕ ಜೀವನ)
* ಅಸಂಘಟಿತ ಕಾರ್ಮಿಕರು ಸಂಘಟನೆಯಲ್ಲಿ ಶಕ್ತಿ ಇದೆ (ದುಡಿಮೆ ಮತ್ತು ಆರ್ಥಿಕ ಜೀವನ)

3. ಮಗುವಿನ ಅನುಭವಾತ್ಮಕ ಕಲಿಕೆಗೆ ಪೂರಕವಾದ ವಾತಾವರಣ ಸೃಷ್ಟಿಯಾಗಿರುವುದನ್ನು ಈ ಹಿನ್ನೆಲೆಯಲ್ಲಿ ಮಗು ಕಲಿತ ಜ್ಞಾನವನ್ನು ಮೌಲ್ಯಮಾಪನಕ್ಕೆ ಒಳಪಡಿಸುವುದು ಅಗತ್ಯವಾಗಿದೆ.

ಉದಾ:

* ಮನೆಕಟ್ಟುವ ಕಾರ್ಮಿಕರು

* ಕೃಷಿ ಕಾರ್ಮಿಕರು
* ತರಕಾರಿ ಮಾರುವವರು
* ವಾಹನ ರಿಪೇರಿ ಮಾಡುವವರು
* ತಲೆಯ ಮೇಲೆ ಹೊತ್ತು ವಸ್ತುಗಳನ್ನು ಮಾರುವವರು

ಈ ಎಲ್ಲಾ ಚಟುವಟಿಕೆಗಳು ತನ್ನ ಸುತ್ತಲೂ ನಡೆಯುತ್ತಿರುವುದನ್ನು ಮಗು ವೀಕ್ಷಿಸುತ್ತದೆ. ಈ ಅನುಭವಗಳ ಮೂಲಕ ತನ್ನ ಮುಂದಿನ ಜೀವನದ ಅವಶ್ಯಕತೆಗಳನ್ನು ತಾನು ಹೇಗೆ ಪೂರೈಸಿಕೊಳ್ಳಬಲ್ಲೆ ಎಂಬ ತೀರ್ಮಾನಕ್ಕೆ ಕನಸುಗಳನ್ನು ರೂಪಿಸಿಕೊಳ್ಳುವುದು.

4. ವೀಕ್ಷಣಾ ವಿಧಾನದಲ್ಲಿನ ಮೌಲ್ಯ ಮಾಪನವು ಮಗು ತಾನು ಕಲಿತ ಜ್ಞಾನವು ಹೇಗೆ ಪಠ್ಯಪುಸ್ತಕದ ಹೊರತಾಗಿ ಕಟ್ಟಿಕೊಂಡಿದೆ ಎಂಬುದನ್ನು ಖಾತ್ರಿಪಡಿಸುವುದು.

ಉದಾ: ಬ್ಯಾಂಕ್ ಒಂದನ್ನು ವೀಕ್ಷಿಸಲು ಭೇಟಿ ನೀಡಿದ ಮಗು ಅಲ್ಲಿನ ವಿವಿಧ ಬಗೆಯ ವ್ಯವಹಾರಗಳನ್ನು ಅವಲೋಕಿಸಿ ವಿವಿಧ ರೀತಿಯ ಬ್ಯಾಂಕ್ ಗ್ರಾಹಕರ ವ್ಯವಹಾರ, ಉಳಿತಾಯ ಭಾವನೆ, ಲಾಭ, ನಷ್ಟಗಳ ಪರಿಕಲ್ಪನೆ, ಹಣಕಟ್ಟುವ ಮತ್ತು ಪಡೆಯುವ ವಿಧಾನ, ಬ್ಯಾಂಕ್ ವ್ಯವಹಾರದ ವೇಳೆ, ವಿವಿಧ ಚೆಕ್, ಡಿಡಿ, ಕ್ರೆಡಿಟ್ ಕಾರ್ಡ್, ಎ.ಟಿ.ಎಂ. ಕಾರ್ಡ್‌ಗಳ ಪರಿಚಯ ಬಳಕೆಯ ವಿಧಾನಗಳನ್ನು ಪಠ್ಯಪುಸ್ತಕದ ಹೊರತಾಗಿ ಮಗು ಕಲಿಯುವುದನ್ನು ಅನುಕೂಲಕಾರ, ಮೌಲ್ಯಮಾಪನ ಮಾಡಬೇಕಾಗುತ್ತದೆ.

5. ವೀಕ್ಷಣಾ ವಿಧಾನದಲ್ಲಿ ವೀಕ್ಷಣೆ ಚಟುವಟಿಕೆಯಾಗಿರುವುದರಿಂದ ಅನುಕೂಲಕಾರ ಈ ಕೆಳಗಿನ ತಂತ್ರ, ಸಾಧನಗಳನ್ನು ಬಳಸಬೇಕಾಗುತ್ತದೆ.

| | **ತಂತ್ರ** | **ಸಾಧನ** | **ಉದಾ:** |
|---|---|---|---|
| 1. | ಅವಲೋಕನ | ತಪಶೀಲುಪಟ್ಟಿ | ಗ್ರಾಮೀಣ ಪ್ರದೇಶಗಳ ವೀಕ್ಷಣೆ |
| | | ದವಾಮಾಪನ ಪಟ್ಟಿ | ಸಂದರ್ಭ |
| 2. | ವೀಕ್ಷಣೆ | ವೀಕ್ಷಣಾ ಸೂಚಿ | ಕಟ್ಟಡ ಕಟ್ಟುವ ಸ್ಥಳ |
| 3. | ಚರ್ಚೆ | ಪ್ರಶ್ನಾವಳಿ | ಸಂಘಟಿತ, ಅಸಂಘಟಿತ |
| 4. | ಪ್ರಬಂಧ | ಪ್ರಬಂಧಸೂಚಿ | ನಿರುದ್ಯೋಗ ಸಮಸ್ಯೆ |
| 5. | ವರದಿ ತಯಾರಿಕೆ | ವರದಿಸೂಚಿ | ತಮ್ಮ ಊರಿನ ಆರ್ಥಿಕ ಸಮಸ್ಯೆಗಳು |

# ಕಲಿಕಾ ವಿಧಾನ –3

## ಸಂದರ್ಶನ ವಿಧಾನ

**ಸ್ವರೂಪ :**

ಪ್ರೌಢಶಾಲಾ ಹಂತದ ತರಗತಿ ಕೋಣೆಯಲ್ಲಿ ಸಮಾಜ ವಿಜ್ಞಾನ ವಿಷಯವನ್ನು ಪರಿಣಾಮಕಾರಿಯಾಗಿ ಅನುಕೂಲಿಸಲು ಸಂದರ್ಶನದ ವಿಧಾನವು ಬಹುಮುಖ್ಯವಾದುದು, ಅಂದರೆ ಕಲಿಕಾಂಶಕ್ಕೆ ಸಂಬಂಧಿಸಿದಂತೆ ಜ್ಞಾನವನ್ನು ಪಡೆಯಲು, ಸಂಬಂಧಿಸಿದ ಕಲಿಕಾಂಶದಲ್ಲಿ ಹೆಚ್ಚಿನ ಪಾಂಡಿತ್ಯ ಹೊಂದಿದ ಪರಿಣಿತರನ್ನು ತರಗತಿಗೆ ಆಹ್ವಾನಿಸುವ ಮೂಲಕ, ಅಥವಾ ಅವರನ್ನು ಖುದ್ದು ಭೇಟಿ ನಿರ್ದಿಷ್ಟ ಪಡಿಸಿಕೊಂಡ ಪ್ರಶ್ನಾವಳಿ ಸೂಚಿಯೊಂದಿಗೆ ಮಾಹಿತಿ ಸಂಗ್ರಹಿಸುವ ವಿಧಾನವನ್ನು ಸಂದರ್ಶನ ವಿಧಾನ ಎನ್ನುತ್ತೇವೆ.

ಅಂದರೆ ಈ ವಿಧಾನದಿಂದ ಕಲಿಕಾರ್ಥಿ ಪೂರಕ ಜ್ಞಾನವನ್ನು ಪಡೆಯುವುದರ ಮೂಲಕ ಕಲಿಕಾಂಶ ಸ್ಪಷ್ಟನೆಯನ್ನು ಕಂಡುಕೊಳ್ಳುತ್ತದೆ. ಹಾಗೆಯೇ ಕಲಿಕೆಯಲ್ಲಿ ಈ ವಿಧಾನವು ಒಂದು ವಿನೂತನ ಪ್ರಕ್ರಿಯೆಯಂತೆಯೂ ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ಸಂದರ್ಶನ ವಿಧಾನದ ಕೆಲವು ಲಕ್ಷಣಗಳನ್ನು ಗಮನಿಸೋಣ.

**ಲಕ್ಷಣಗಳು :**

1. ಸಂದರ್ಶನ ವಿಧಾನವು ನಿರ್ದಿಷ್ಟ ಪಡಿಸಿಕೊಂಡ ಕಲಿಕಾಂಶಕ್ಕೆ ಪೂರಕವಾಗಿ ಪ್ರಶ್ನಾವಳಿ ಸೂಚಿಯನ್ನು ಹೊಂದಿರಬೇಕು.
2. ಕಲಿಕಾಂಶಕ್ಕೆ ಸಂಬಂಧಿಸಿದಂತೆ ಪರಿಣಿತ ವ್ಯಕ್ತಿಯನ್ನು ಕುರಿತಂತೆ ಎಲ್ಲಿ? ಹೇಗೆ? ಸಂದರ್ಶನ ಮಾಡಬೇಕೆಂಬ ಪೂರ್ವ ತಯಾರಿಯನ್ನು ನಿರ್ದಿಷ್ಟಪಡಿಸುತ್ತದೆ.
3. ಸಂದರ್ಶನ ವಿಧಾನವು ಸಂವಾದದ ರೂಪದಲ್ಲಿಯೂ ಪ್ರಸ್ತುತಗೊಳ್ಳುತ್ತದೆ.
4. ಕಲಿಕಾಂಶದ ಚೌಕಟ್ಟಿನ ಎಲ್ಲೆಯನ್ನು ಪರಿಭಾವಿಸುತ್ತಾ ಪಠ್ಯದ ಹೊರತಾಗಿಯೂ ಸಂದರ್ಶನ ವಿಧಾನವನ್ನು ಅನುಕೂಲಿಸಬಹುದು.
5. ಸಂದರ್ಶನ ವಿಧಾನವು ಸಂದರ್ಶಿಸುವವರಲ್ಲಿ ಅನುಮಾನದ ಜೊತೆಗೆ ಕುತೂಹಲ, ಆಶ್ಚರ್ಯ, ಕಲಿಕಾ ಸಂತಸದಂತ ನಿರ್ದಿಷ್ಟಗಳನ್ನು ಒಳಗೊಂಡಿರುತ್ತದೆ.
6. ಸಂದರ್ಶನ ವಿಧಾನದಿಂದ ಕಲಿಕಾರ್ಥಿ ಮತ್ತು ವಿಷಯ ಪರಿಣಿತರ ನಡುವೆ ಅವಿನಾಭಾವ ಸಂಬಂಧ ಬೆಳೆಯುವಂತೆ ಸಂದರ್ಭದ ಸೃಷ್ಟಿಯಾಗುತ್ತದೆ.

7. ಸಂದರ್ಶನ ವ್ಯಕ್ತಿ ಹಾಗೂ ಸಂದರ್ಶಕರ ವ್ಯಕ್ತಿತ್ವದ ಪರಿಚಯವೂ ಆಗುತ್ತಿರುತ್ತದೆ.

8. ಪ್ರಶ್ನೆಗಳು ಪುನರಾವರ್ತನೆಯಾಗದಂತೆ ನೋಡಿಕೊಳ್ಳಬೇಕು.

9. ಸ್ವಕಲಿಕೆಗೆ ಹೆಚ್ಚಿನ ಆದ್ಯತೆಯನ್ನು ನೀಡುತ್ತದೆ.

## ಘಟಕದ ಆಯ್ಕೆ :

## 'ವಿಮೆ' (ವ್ಯವಹಾರ ಅಧ್ಯಯನ ) ಅಧ್ಯಾಯ –2

**ಸಿದ್ಧತೆ :**

ಪ್ರಸ್ತುತ ಘಟಕಕ್ಕೆ ಸಂಬಂಧಿಸಿದಂತೆ ಸಂದರ್ಶನ ವಿಧಾನದಲ್ಲೂ ಅನುಕೂಲಕಾರನ ಪೂರ್ವಸಿದ್ಧತೆಯು ಮೊದಲಿಗೆ ಘಟಕದ ಪರಿಣಾಮಕಾರಿ ಕಲಿವಿಗೆ ಆದ್ಯತೆಯನ್ನು ನೀಡುತ್ತದೆ. ಇದರಿಂದಾಗಿ ಅನುಕೂಲಕಾರನ ಪೂರ್ವಸಿದ್ಧತೆ ಈ ಕೆಳಗಿನ ಸೂಚನೆಗಳಂತೆ ಇರಲೇ ಬೇಕಾಗುತ್ತದೆ.

1. ಕಲಿಕಾಂಶದ ವ್ಯಾಪ್ತಿಯನ್ನು ಮೊದಲು ಗುರುತಿಸಿಕೊಳ್ಳುವುದು.
2. ಸಂದರ್ಶನಕ್ಕಾಗಿ ಸಂಬಂಧಿಸಿದ ವಿಷಯ ಪರಿಣಿತರ ಆಯ್ಕೆ
3. ತರಗತಿಯ ಕಲಿಕಾರ್ಥಿಗಳು ಸಂದರ್ಶನ ಸಂದರ್ಭದಲ್ಲಿ ನಿರ್ದಿಷ್ಟವಾಗಿ ಕೇಳಲೇಬೇಕಾದ ಪ್ರಶ್ನಾವಳಿಗಳ ಸ್ವರೂಪವನ್ನು ತಿಳಿಸಿ, ಕಲಿಕಾರ್ಥಿಗಳಿಂದ ತಯಾರಿಸುವುದು.
4. ಸಂದರ್ಶನ ದಿನಾಂಕ, ಸಮಯವನ್ನು ನಿಗದಿಗೊಳಿಸುವುದು
5. ಸಂದರ್ಶಿಸುವ ಸಮಯದಲ್ಲಿ ಕಲಿಕಾರ್ಥಿಗಳ ಸ್ವಭಾವ ವ್ಯಕ್ತಿತ್ವ ಹೇಗಿರಬೇಕೆಂದು ಸೂಚಿಸುವುದು.
6. ಸಂದರ್ಶನವನ್ನು ಹೇಗೆ ಮಾಡಬೇಕೆಂಬ ಕ್ರಮವನ್ನು ತರಗತಿಯಲ್ಲಿ ಅಣುಕು ರೀತಿಯಲ್ಲಿ ಪ್ರದರ್ಶಿಸಿ ಮಕ್ಕಳಿಗೆ ಸಂದರ್ಶನದ ಸ್ವರೂಪವನ್ನು ತಿಳಿಸುವುದು.
7. ಸಾಧ್ಯವಾದರೆ ಸಂದರ್ಶನ ವ್ಯಕ್ತಿಯನ್ನು ಶಾಲೆಗೂ ಕರೆಸಲು ಅವಕಾಶ ಕಲ್ಪಿಸುವುದು.
8. ಸಂದರ್ಶನದ ಪ್ರಶ್ನಾವಳಿಗಳು ಸರಳವಾಗಿದ್ದು ಕಲಿಕಾಂಶಕ್ಕೆ ಪೂರಕವಾದ ಜ್ಞಾನವನ್ನು ಸುಲಭವಾಗಿ ಪಡೆದು ಅರ್ಥೈಸಿಕೊಳ್ಳುವಂತೆ ಪ್ರಶ್ನೆಗಳನ್ನು ರಚಿಸುವಂತೆ ಮಕ್ಕಳಿಗೆ ತಿಳಿಸುವುದು.
9. ಸಂದರ್ಶನ ಸಂದರ್ಭದಲ್ಲಿನ ಹಾಗೂ ಪ್ರಶ್ನಾವಳಿ ರಚನೆಯ ಸಂದರ್ಭದಲ್ಲಿ ಮಕ್ಕಳಿಗೆ ಬರಬಹುದಾದ ಅನುಮಾನ, ಗೊಂದಲಗಳ ಬಗ್ಗೆ ಪಟ್ಟಿ ಮಾಡಲು ಸಲಹೆ ನೀಡುವುದು.
10. ಸಂದರ್ಶನ ವ್ಯಕ್ತಿಯು ಹೇಳುವ ಪೂರಕ ಕಲಿಕಾಂಶಗಳನ್ನು ಸ್ಪಷ್ಟವಾಗಿ ದಾಖಲಿಸಿಕೊಳ್ಳುವಂತೆ ಕಲಿಕಾರ್ಥಿಗಳಿಗೆ ತಿಳಿಸುವುದು

11. ಸಂದರ್ಶನದ ನಂತರ ಕಲಿತ ವಿಷಯವನ್ನು ಹೇಗೆ ಕ್ರೋಢೀಕರಿಸಬೇಕೆಂದು ಸಲಹೆ ನೀಡುವುದು.

**ಕಲಿಕಾರ್ಥಿಗಳ ಸಿದ್ಧತೆ :**

1. ಅನುಕೂಲಕಾರನ ಸೂಚನೆಗಳನ್ನು ತಪ್ಪದೇ ಪಾಲಿಸುವುದು.
2. ಕಲಿಕಾರ್ಥಿಗಳೂ ಕಲಿಕಾಂಶದ ವಿಷಯವನ್ನು ಪೂರ್ವಸಿದ್ಧತೆ ಹಂತದಲ್ಲಿ ಸ್ಪಷ್ಟವಾಗಿ ಓದಿಕೊಂಡಿರಬೇಕು.
3. ಕಲಿಕಾಂಶಕ್ಕೆ ಪೂರಕವಾಗಿ ಹೆಚ್ಚಿನ ಮಾಹಿತಿ ಸಂಗ್ರಹಿಸುವಂತಹ ಪ್ರಶ್ನೆಗಳನ್ನು ರಚಿಸಿಕೊಳ್ಳುವುದು.
4. ಪ್ರಶ್ನಾವಳಿ ರಚನೆಯ ಸಂದರ್ಭದಲ್ಲಿನ ಕಲಿಕಾ ಅನುಮಾನಗಳಿಗೆ ಅನುಕೂಲಕಾರರಿಂದ ಮಾರ್ಗದರ್ಶನ ಪಡೆಯುವುದು.
5. ನಿಖರವಾದ ಪ್ರಶ್ನೆಗಳಿಗೆ ಆದ್ಯತೆ ಕೊಡುವುದು
6. ಅನುಕೂಲಕಾರರ ಸಲಹೆಯಂತೆ ಸಂದರ್ಶನದ ನಂತರ ಸಂಗ್ರಹಿಸಿದ ಮಾಹಿತಿಯನ್ನು ತರಗತಿಯಲ್ಲಿ ಪರಸ್ಪರ ಹಂಚಿಕೊಳ್ಳುವುದರೊಂದಿಗೆ ಕಲಿಕೆಯನ್ನು ದೃಢಪಡಿಸಿಕೊಳ್ಳುವುದು.
7. ಸಂದರ್ಶಿಸುವ ಸಂದರ್ಭದಲ್ಲಿ ಶಿಸ್ತು ವಿನಯವಂತಿಕೆಯನ್ನು ಪ್ರದರ್ಶಿಸಬೇಕು
8. ಸಂದರ್ಶನದಲ್ಲಿ ಕಲಿಕಾರ್ಥಿಗಳು ಪರಸ್ಪರ ಚರ್ಚೆ ರೂಪದಲ್ಲಿ ಭಾಗವಹಿಸಬೇಕು
9. ವಿಷಯದ ಚೌಕಟ್ಟಿನಲ್ಲಿಯೇ ಸಂದರ್ಶನವನ್ನು ಮುಂದುವರೆಸಬೇಕು.
10. ಸಂದರ್ಶನ ವ್ಯಕ್ತಿಯ ಅನುಭವಾತ್ಮಕವಾದ ಅಂಶಗಳು ಪ್ರಸ್ತುತಗೊಳ್ಳುವಂತೆ ಕಲಿಕಾರ್ಥಿಗಳೂ ಸಂದರ್ಭವನ್ನು ಸೃಷ್ಟಿಮಾಡಿಕೊಳ್ಳವುದು.

**ಅನುಕೂಲಿಸುವ ಸಂದರ್ಭಗಳು:**

ಅನುಕೂಲಕಾರರ ಸೂಚನೆಯಂತೆ ನಿರ್ದಿಷ್ಟ ಪಡಿಸಿದ ದಿನಾಂಕದಂದು ಕಲಿಕಾರ್ಥಿಗಳೂ ಸಂದರ್ಶನ ವ್ಯಾಪ್ತಿಯನ್ನು ಸಂದರ್ಶಿಸಲು ಪೂರ್ವಸಿದ್ಧತೆಯೊಂದಿಗೆ ತೆರಳಿ ಈ ಕೆಳಕಂಡ ಮಾದರಿ ಅನ್ವಯ ಸಂದರ್ಶಿಸುವುದು.

**ಕಲಿಕಾಂಶ** : 'ವಿಮೆ ಕುರಿತಂತೆ ಸಂದರ್ಶನ'

**ಸಂದರ್ಶನ ವ್ಯಕ್ತಿ** : ಜೀವ ವಿಮಾನಿಗಮಕ್ಕೆ ಸಂಬಂಧಿಸಿದ ನಿಮಗೆ ಲಭ್ಯವಾಗುವ ವ್ಯವಸ್ಥಾಪಕರು, ಫೀಲ್ಡ್ ಆಫೀಸರ್, ಏಜೆಂಟ್, ಇತ್ಯಾದಿಯವರು.

**ಸಂದರ್ಶಿಸುವವರು** : ಕಲಿಕಾರ್ಥಿಗಳು ಸಂದರ್ಶನಕ್ಕಾಗಿ ಪ್ರಶ್ನಾವಳಿ ನೋಟ್ ಪ್ಯಾಡ್, ಲೇಖನಿ, ಪೂರಕ ಕಲಿಕಾ ಸಾಮಾಗ್ರಿಗಳು (ಉದಾ: ಪಠ್ಯಪುಸ್ತಕ, ಎಲ್ಐಸಿ ಪ್ರಕಟಣೆಗಳು ಇತ್ಯಾದಿ)ನ್ನು ಸಂದರ್ಶನಕ್ಕಾಗಿ ತೆಗೆದು ಕೊಂಡು ಹೋಗುವುದು. ಒಟ್ಟಿಗೆ ಸಂದರ್ಶನ ವ್ಯಕ್ತಿ ಮುಂದೆ ಆಸೀನ ರಾಗುವರು ಗುರುಗಳು ಒಡನಿರುವರು.

**ಸಂದರ್ಶನ ಕ್ರಮ** : ಕಲಿಕಾರ್ಥಿಗಳು ಈ ಎಲ್ಲಾ ಪೂರ್ವ ತಯಾರಿಕೆಯೊಂದಿಗೆ ಸಂದರ್ಶನ ವ್ಯಕ್ತಿಯನ್ನು ಗೌರವಪೂರ್ವಕವಾಗಿ ಈ ಮುಂದಿನಂತೆ ಕಲಿಕಾಂಶದ ವಿಚಾರವಾಗಿ ಪ್ರಶ್ನಿಸಿ ಜ್ಞಾನವನ್ನು ಚರ್ಚಾತ್ಮಕವಾಗಿ ಕಟ್ಟಿಕೊಳ್ಳುವರು.

**ಕಲಿಕಾರ್ಥಿ** : ಸರ್, ನನ್ನ ಹೆಸರು, ಚಿ.ಚಿರಂತನ್, ಸರ್ಕಾರಿ ಪ್ರೌಢ ಶಾಲೆ, ಚಿಕ್ಕನಾಯಕನಹಳ್ಳಿಯಲ್ಲಿ ಅಭ್ಯಾಸ ಮಾಡುತ್ತಿದ್ದೇನೆ, ನಮ್ಮ ಗುರುಗಳ ಸಲಹೆಯಂತೆ ವ್ಯವಹಾರ ಅಧ್ಯಯನ ವಿಚಾರದಲ್ಲಿ 'ವಿಮೆ' ಎಂಬ ಅಧ್ಯಾಯವನ್ನು ಪರಿಚಯಿಸಲಾಗಿದೆ. ಈ ಘಟಕಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಜ್ಞಾನವನ್ನು ಪಡೆದುಕೊಳ್ಳಲು ನಾನು ಮತ್ತು ನನ್ನ ತರಗತಿ ಮಿತ್ರರು ತಮ್ಮಂತಹ ಪರಿಣಿತರನ್ನು ಭೇಟಿ ಮಾಡಿ ಪ್ರಸ್ತುತ ವಿಷಯದ ಬಗ್ಗೆ ಹೆಚ್ಚಿನ ಅರಿವನ್ನು ಪಡೆಯಲು ನಾವಿಲ್ಲಿಗೆ ಬಂದಿರುತ್ತೇವೆ. ತಮಗೆ ನಮ್ಮ ತಂಡದ ಪರವಾಗಿ ಹೃತ್ಪೂರ್ವಕ ನಮಸ್ಕಾರಗಳು. ಈ ಸಂದರ್ಭದಲ್ಲಿ ನಾವು ಕೇಳುವ ನಮ್ಮ ಅನುಮಾನಗಳಿಗೆ ತಮ್ಮ ಅನುಭವದ ಮೂಲಕ ಉತ್ತರವನ್ನು ನೀಡುತ್ತೀರೆಂದು ಕೋರುತ್ತೇವೆ.

**ಸಂದರ್ಶಕ :** ನಮಸ್ಕಾರ ವಿದ್ಯಾರ್ಥಿಗಳೇ ನಿಮಗೂ ನಿಮ್ಮ ಗುರುಗಳಿಗೂ ನನ್ನ ಅಭಿನಂದನೆಗಳು. ನಿಮ್ಮ ಕಲಿಕಾ ಅನುಮಾನಗಳಿಗೆ ಪರಿಹಾರ ಕಂಡುಕೊಳ್ಳಲು, ನನ್ನನ್ನು ಆಯ್ಕೆ ಮಾಡಿಕೊಂಡು ಇಲ್ಲಿಗೆ ಬಂದದ್ದಕ್ಕಾಗಿ ವೈಯುಕ್ತಿಕವಾಗಿ ನಾನು ಆಬಾರಿಯಾಗಿದ್ದೇನೆ. ವಿದ್ಯಾರ್ಥಿಗಳೇ ನಿಮ್ಮ ಅನುಮಾನಗಳಿಗೆ ನನ್ನ ಸಾಮರ್ಥ್ಯದಷ್ಟು ಅನುಭಾವಾತ್ಮಕ ಉತ್ತರ ಕೊಡಲು ಪ್ರಯತ್ನಿಸುತ್ತೇನೆ.

**ಕಲಿಕಾರ್ಥಿ** : ಸರ್, ಎಲ್ಐಸಿ ಇಲಾಖೆಯಲ್ಲಿ ತಾವು ಎಷ್ಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದೀರಿ. ಇಲ್ಲಿನ ನಿಮ್ಮ ಅನುಭವವೇನು?

**ಸಂದರ್ಶಕ** : ವಿದ್ಯಾರ್ಥಿಗಳೇ, ನಾನು ಸುಮಾರು 30 ವರ್ಷಗಳಿಂದ ಎಲ್ಐಸಿ ಸಂಸ್ಥೆಯಲ್ಲಿನ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ಈಗ ವ್ಯವಸ್ಥಾಪಕನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಇಲ್ಲಿನ ಇಷ್ಟು

ವರ್ಷಗಳ ನನ್ನ ಅನುಭವವೆಂದರೆ, ಎಲ್‌ಐಸಿ ನನ್ನಂತಹ ಅನೇಕರಿಗೆ ಉದ್ಯೋಗ ನೀಡಿದೆ. ಅನೇಕ ಗ್ರಾಹಕರು ಇದರ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಎಲ್‌ಐಸಿ ವಿಶ್ವಮಟ್ಟದ ವಿಸ್ತೃತವಾದ ವಿಮಾ ಸಂಸ್ಥೆಯಾಗಿ ಹೊರಹೊಮ್ಮಿದೆ.

**ಕಲಿಕಾರ್ಥಿ** : ಸರ್. ಹಾಗಾದರೆ, 'ವಿಮೆ' ಎಂದರೇನು?

**ಸಂದರ್ಶಕ** : ತನ್ನ ಬದುಕಿನಲ್ಲಿ ಬರುವ ಅಪಾಯ ಅಥವಾ ಹಾನಿಗಳಿಂದ ರಕ್ಷಿಸಿಕೊಳ್ಳಲು ನಿರ್ದಿಷ್ಟ ಪಡಿಸಿದ ಕಂತುಗಳೊಂದಿಗೆ ಆರ್ಥಿಕ ಸಂಸ್ಥೆಗಳಿಗೆ ಹಣ ಪಾವತಿಸಿ, ರಕ್ಷಣೆ ಪಡೆಯುವ ಸಂಸ್ಥೆಗಳ ವ್ಯವಹಾರಕ್ಕೆ ವಿಮೆ ಎನ್ನುವರು.

**ಕಲಿಕಾರ್ಥಿ** : ಜೀವ ವಿಮೆಯ ಪ್ರಾಮುಖ್ಯತೆ ಏನು?

**ಸಂದರ್ಶಕ** :

* ಉಳಿತಾಯಕ್ಕೆ ಪ್ರೋತ್ಸಾಹ
* ಠೇವಣಿ ಸಂಗ್ರಹ
* ನಷ್ಟ ನಿವಾರಣೆ
* ಅಪಾಯ ಹಾನಿಗಳಿಂದ ರಕ್ಷಣೆ, ಇತ್ಯಾದಿ ಅನುಕೂಲಗಳನ್ನು ಪಾಲಿಸಿದಾರರಿಗೆ ಮಾಡಿಕೊಡುವುದೇ ವಿಮೆ ಪ್ರಾಮುಖ್ಯತೆಯಾಗಿದೆ.

**ಕಲಿಕಾರ್ಥಿ** : ಜೀವ ವಿಮೆ ಏಕೆ ಬೇಕು?

**ಸಂದರ್ಶಕ** ; ವ್ಯಕ್ತಿ ಅಥವ ಕುಟುಂಬಕ್ಕೆ ಆರ್ಥಿಕ ಸಹಾಯ ಮಾಡಲು

* ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಹಣಕಾಸಿನ ನೆರವು ನೀಡುತ್ತದೆ
* ಗಂಭೀರ ಕಾಯಿಲೆ / ಅಪಘಾತಕ್ಕೆ ಆರ್ಥಿಕ ಸಹಾಯ ನೀಡಲು ಇತ್ಯಾದಿ

**ಕಲಿಕಾರ್ಥಿ** : ಸರ್, ವಿಮೆಯಲ್ಲಿ ಬಳಸುವ ವಿಮಾಪಾಲಿಸಿ ಎಂದರೇನು?

**ಸಂದರ್ಶಕ** : ವಿಮಾಕರ್ತ ಮತ್ತು ವಿಮಾದಾರನ ನಡುವೆ ಏರ್ಪಡುವ ಒಂದು ಲಿಖಿತ ದಾಖಲೆ.

ಈ ರೂಪದಲ್ಲಿ ಕಲಿಕಾಂಶಕ್ಕೆ ಸಂಬಂಧಿಸಿದಂತೆ ಕಲಿಕಾರ್ಥಿಗಳು ಪ್ರಶ್ನಾವಳಿಯನ್ನು ಸಂದರ್ಶಕನಲ್ಲಿ ಕೇಳಿ ಚರ್ಚಿಸಿ ಜ್ಞಾನವನ್ನು ಪಡೆದುಕೊಳ್ಳುವರು. ಈ ಮಾದರಿ ಸಂದರ್ಶನ ವಿಧಾನದಲ್ಲಿ ಪ್ರಮುಖವಾದುದಾಗಿದೆ.

ಹೀಗೆ ಸಂದರ್ಶನದ ವ್ಯಕ್ತಿಯಿಂದ ಪ್ರತಿ ಕಲಿಕಾರ್ಥಿಯು ತಮ್ಮ ತಮ್ಮ ಅನುಮಾನ ಗಳನ್ನು ಒಳಗೊಂಡ ಪ್ರಶ್ನೆಗಳನ್ನು ಕೇಳುತ್ತಾ ಕಲಿಕೆಯನ್ನು ಸ್ಪಷ್ಟಪಡಿಸಿಕೊಳ್ಳುವರು. ನಂತರ

ತರಗತಿಗೆ ಮರಳಿ ಮತ್ತೊಂದು ಅವಧಿಯಲ್ಲಿ ತರಗತಿಯ ಎಲ್ಲಾ ಮಕ್ಕಳು ಅನುಕೂಲಕಾರನ ಸಲಹೆಯಂತೆ ಸಂದರ್ಶನದ ಅನುಭವಗಳನ್ನು ಹಂಚಿಕೊಳ್ಳುತ್ತಾ ವಿಮೆಗೆ ಸಂಬಂಧಿಸಿದಂತೆ ಹೆಚ್ಚಿನ ಜ್ಞಾನ . ಗೊಳ್ಳುವುದರೊಂದಿಗೆ ಹಾಗು ವಿಶೇಷ ಕಲಿಕಾ ಸಾಮಾಗ್ರಿ (ಅಗತ್ಯವಿದ್ದಲ್ಲಿ) ಗಳನ್ನು ಬಳಸಿಕೊಂಡು 'ವಿಮೆ'ಯ ವಿಚಾರವಾಗಿ ಪರಿಪೂರ್ಣತೆ ಪಡೆಯುವರು. ಈ ಮೂಲಕ ಮಕ್ಕಳ ಅನುಭವಾತ್ಮಕ ಕಲಿಕೆ ಹೆಚ್ಚು ಪ್ರಾಧಾನ್ಯತೆ ಪಡೆಯುವುದು.

**ಬಳಸಿಕೊಂಡ ಚಟುವಟಿಕೆ :**

ಪ್ರಸ್ತುತ ಸಂದರ್ಶನಾ ವಿಧಾನದಲ್ಲೂ ಪ್ರಶ್ನಾವಳಿಯನ್ನು ಒಳಗೊಂಡ ಸಂದರ್ಶನವನ್ನು ಚಟುವಟಿಕೆಯಾಗಿ ರೂಪಿಸಿಕೊಳ್ಳಲಾಗಿದೆ. ಈ ಚಟುವಟಿಕೆಯು ಕಲಿಕಾರ್ಥಿಯ ಜ್ಞಾನ ವಲಯ ಹಾಗೂ ಭಾವನಾತ್ಮಕ ವಲಯಕ್ಕೆ ಪ್ರೇರಕವಾದ ಸಾಮರ್ಥ್ಯವನ್ನು ಹೇಗೆ ಅನುವು ಮಾಡಿಕೊಡುತ್ತದೆ ಎಂಬುದನ್ನು ಅನುಕೂಲಕಾರ ತರಗತಿ ಸಂದರ್ಭದಲ್ಲಿ ಗಮನಿಸುತ್ತಿರ ಬೇಕು. ಬಹು ಮುಖ್ಯವಾಗಿ ಸಂದರ್ಶನ ಚಟುವಟಿಕೆಯಿಂದ ಮಕ್ಕಳ ಪ್ರಶ್ನಿಸುವ ಕೌಶಲ್ಯ ಪ್ರಸ್ತುತಿ ಗೊಳ್ಳುತ್ತಿರುವ ರೀತಿ, ಸಂದರ್ಶನದಲ್ಲಿ ಮಕ್ಕಳ ಆಸಕ್ತಿಯುತ ಪಾಲ್ಗೊಳ್ಳುವಿಕೆ ತಮ್ಮ ಬದುಕಿನಲ್ಲಿ ಮುಂದೆ ನಾವೂ ವಿಮಾಧಾರರಾಗಬೇಕೆಂಬ ತೀರ್ಮಾನ (ಅನ್ವಯ) ವಿಮೆಯ ಬಗ್ಗೆ ಮೆಚ್ಚುಗೆ ಕುರಿತಂತೆ, ಅನುಕೂಲಕಾರ ಕಲಿಕಾರ್ಥಿಗಳನ್ನು ಸಂದರ್ಶನ ಚಟುವಟಿಕೆಯಲ್ಲಿ ಗಮನಿಸುತ್ತಿರಬೇಕು.

**ಮೌಲ್ಯಮಾಪನ :**

ಪ್ರಸ್ತುತ ಸಂದರ್ಶನದ ವಿಧಾನಕ್ಕೆ ಸಂಬಂಧಿಸಿದಂತೆ ಚಟುವಟಿಕೆಯನ್ನು ಒಳಗೊಂಡ ಈ ಕಲಿಕಾ ಸಂದರ್ಭದ ನಿರಂತರವಾದ ಮೌಲ್ಯಮಾಪನಕ್ಕಾಗಿ ನಿರ್ದಿಷ್ಟ ಪಡಿಸಿಕೊಂಡ ತಂತ್ರ ಮತ್ತು ಸಾಧನಗಳ ಮೂಲಕ ಮಕ್ಕಳ ಕಲಿಕಾ ಪಾಲಿತವನ್ನು ಅನುಕೂಲಕಾರ ಅಳೆಯ ಬೇಕಾಗುತ್ತದೆ.

ಈ ಹಿನ್ನಲೆಯಲ್ಲಿ ಬಳಸಿಕೊಂಡ ತಂತ್ರ ಮತ್ತು ಸಾಧನಗಳು.

| | ತಂತ್ರ | ಸಾಧನ |
|---|---|---|
| 1. | ಚರ್ಚೆ | * ಚರ್ಚಾಸೂಚಿ (ಪ್ರಶ್ನಾವಳಿ) |
| | | * ಪ್ರಸ್ತುತ ಚರ್ಚೆ ತಂತ್ರದಲ್ಲಿ ಸಾಧನವಾಗಿ ಚರ್ಚಾಸೂಚಿಯನ್ನು ಬಳಸಲಾಗುವುದು. |

ಈ ಚರ್ಚಾಸೂಚಿಯು ಪ್ರಶ್ನಾವಳಿಯ ರೂಪದಲ್ಲಿದ್ದು ನಿರ್ದಿಷ್ಟ ಪಡಿಸಿಕೊಂಡ ಕಲಿಕಾಂಶ ಘಟಕದ ಪರಿಪೂರ್ಣ ವಿಷಯದ ಮೌಲ್ಯಮಾಪನಕ್ಕೆ ಒಳಪಡುವಂತೆ ಸೂಚಿ ಯನ್ನು ಸಿದ್ಧಪಡಿಸಿಕೊಳ್ಳಬೇಕಾಗುತ್ತದೆ, ಈ ಸೂಚಿಯು ಸ್ಪಷ್ಟ ಹಾಗೂ ನಿಖರತೆಯನ್ನು ಹೊಂದಿರಬೇಕು.

ಉದಾ: 1. ಜೀವವಿಮೆ ಮತ್ತು ಸಾಮಾನ್ಯ ವಿಮೆ ವ್ಯತ್ಯಾಸ ಕುರಿತಂತೆ ಪ್ರಶ್ನೆ ಚರ್ಚೆ

2. ವಿಮೆ ಅವಶ್ಯಕತೆ ಕುರಿತಂತೆ ಚರ್ಚೆ

ಹೀಗೆ ತರಗತಿಯಲ್ಲಿ ಚರ್ಚಾಂಶಗಳನ್ನು ನೀಡಿ ಕಲಿಕೆಯ ಪರಿಣಾಮವನ್ನು ಅನುಕೂಲಕರ ರೀತಿಯಲ್ಲಿ ಖಾತ್ರಿ ಮಾಡಿಕೊಳ್ಳಬಹುದು.

ಈ ಸಂದರ್ಭದಲ್ಲಿ ಭಾವನಾತ್ಮಕ ವಲಯದ ಫಲಿತವನ್ನು ತಪ್ಪದೇ ಮೌಲ್ಯಮಾಪನಕ್ಕೆ ಒಳಪಡಿಸುವುದು ಅನಿವಾರ್ಯವಾಗಿರುತ್ತದೆ. ಜೊತೆಗೆ ಗೃಹಪಾಠ ಘಟಕ ಪರೀಕ್ಷೆಗಳನ್ನು ತಂತ್ರಗಳನ್ನಾಗಿ ಬಳಸಿಕೊಳ್ಳಬಹುದು.

**<u>ಸಂದರ್ಶನ ವಿಧಾನದ ಬಗ್ಗೆ ಅನಿಸಿಕೆ :</u>**

ಸಂದರ್ಶನ ವಿಧಾನವು ಕಲಿಕಾ ವಿಧಾನಗಳನ್ನು ಕ್ರಿಯಾಶೀಲವಾದ ಕಲಿಕಾರ್ಥಿಗಳನ್ನು ಆಸಕ್ತಿ ಮೂಡುವಂತಹ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಕಲಿಕಾರ್ಥಿಯು ಸ್ವತಃ ತಾನೇ ಸಂದರ್ಶನದಲ್ಲಿ ತೊಡಗುವುದರಿಂದ ಸ್ವಕಲಿಕೆ, ಸ್ವ ಅನುಭವಗಳ ಒಡಂಬಡಿಕೆಯಿಂದಾಗಿ ಕಲಿಕಾರ್ಥಿಗಳಲ್ಲಿ ಮಾತಿನ ಕೌಶಲ್ಯ, ಪಾಲ್ಗೊಳ್ಳುವಿಕೆಯಲ್ಲಿ ಆಸಕ್ತಿ, ವಿಷಯವನ್ನು ಕುರಿತಂತೆ ಆಳವಾದ ಪರಿಜ್ಞಾನ, ವ್ಯಕ್ತಿ ಪರಿಚಯ, ನಿಯಮ, ಶಿಸ್ತು, ವಿನಯಗುಣಗಳು, ಕಲಿಕಾರ್ಥಿಯಲ್ಲಿ ಮೂಡುತ್ತವೆ. ಸಂದರ್ಶನ ವಿಧಾನವನ್ನು ಸಮಾಜ ವಿಜ್ಞಾನ ವಿಷಯದ ಅನೇಕ ಘಟಕಗಳಿಗೆ ಬಳಸಿಕೊಂಡು ಕಲಿಕೆಯನ್ನು ಪರಿಣಾಮಕಾರಿಯಾಗಿಸಬಹುದು.

# ಸಂಶೋಧನಾ ವಿಧಾನ

**ಅರ್ಥ ಸ್ವರೂಪ:**

ಕಲಿಕಾ ವಿಷಯಕ್ಕೆ ಸಂಬಂಧಪಟ್ಟ ಹಿನ್ನೆಲೆ, ಕಾರಣ, ಪರಿಣಾಮಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಲೌಕಿಕವಾಗಿ ಚಿಂತಿಸಿ ಹೆಚ್ಚಿನ ಮಾಹಿತಿಗಳನ್ನು ಪಡೆಯುತ್ತಾ ಜ್ಞಾನಕಟ್ಟಿಕೊಳ್ಳುವ ಕ್ರಮವೇ ಸಂಶೋಧನಾ ವಿಧಾನ. ಈ ವಿಧಾನದಿಂದ ಸ್ವಕಲಿಕೆ, ಸ್ವಅನುಭವ ಪಡೆಯಲು ಸಾಧ್ಯ.

**ವಿಧಾನಕ್ಕೆ ಪೂರಕವಾದ ಘಟಕದ ಆಯ್ಕೆ**

ಇತಿಹಾಸ : ಸ್ವಾತಂತ್ರ್ಯ ಹೋರಾಟ

ವಿಧಾನಕ್ಕೆ ಪೂರಕವಾದ ಪೂರ್ವಸಿದ್ಧತೆ : ಅನುಕೂಲಕಾರ ಚಟುವಟಿಕೆ

**ಅನುಕೂಲಕಾರ ಚಟುವಟಿಕೆ**

* ವಿದ್ಯಾರ್ಥಿಗಳಲ್ಲಿ ಗುಂಪುಗಳನ್ನು ಮಾಡುವುದು
* ವಿಷಯ ಪ್ರಸ್ತಾವನೆ ಮಾಡುವುದು
* ವಿಷಯದ ವ್ಯಾಪ್ತಿಯನ್ನು ತಿಳಿಸುವುದು.

  ಉದಾ: ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆ, ಉದ್ಯೋಗ, ಮಂದಗಾಮಿಗಳ ಹೋರಾಟ, ತೀವ್ರವಾದಿಗಳ ಹೋರಾಟ, ಗಾಂಧೀಜಿ ಹೋರಾಟ, ರೈತರು ಮತ್ತು ಕಾರ್ಮಿಕ ಸಂಘಟನೆ, ಸುಭಾಷ್ ಚಂದ್ರ ಬೋಸ್ ಹೋರಾಟ, ಡಾ॥ ಬಿ.ಆರ್.ಅಂಬೇಡ್ಕರ್ ಹಾಗೂ ನೆಹರೂರವರ ಪಾತ್ರ, ಮಹಮ್ಮದ್ ಅಲಿ ಜಿನ್ನಾ ಮತ್ತು ಭಾರತದ ವಿಭಜನೆ.
* ವಿಷಯದ ಸಂಗ್ರಹಣೆಯ ಮೂಲವನ್ನು ತಿಳಿಸುವುದು ಉದಾ: ಪಠ್ಯಪುಸ್ತಕ, ಗ್ರಂಥಾಲಯದಲ್ಲಿ ಪರಾಮರ್ಶನ ಗ್ರಂಥಗಳು, ಅಂತರ್ಜಾಲ ಇತ್ಯಾದಿ.
* ವಿಷಯ ಹಂಚಿಕೆ ಮಾಡುವುದು.
* ಸಮಯಾವಕಾಶ ನೀಡುವುದು.

**ಕಲಿಕಾರ್ಥಿಗಳ ಚಟುವಟಿಕೆ**

* ಜವಾಬ್ದಾರಿಗಳನ್ನು ಗುಂಪಿನಲ್ಲಿ ಹಂಚಿಕೊಳ್ಳುವುದು.
* ವಿಷಯ ಸಂಗ್ರಹಣೆಯ ಮೂಲಗಳ ಬಗ್ಗೆ ಸಂಶಯ ಬಂದಾಗ ಅನುಕೂಲಕಾರರಿಂದ ಕೇಳಿ ತಿಳಿದುಕೊಳ್ಳಬೇಕು.
* ನಿಗದಿಪಡಿಸಿದ ಸಮಯವನ್ನು ಅನುಮತಿ ಮಾಡಲು ನಿರ್ಧರಿಸುವುದು

* ಸಂಶೋಧನಾ ವರದಿಯನ್ನು ತಮ್ಮ ತಮ್ಮ ಗುಂಪಿನಲ್ಲಿ ಚರ್ಚಿಸಿ ಸಿದ್ಧಪಡಿಸಲು ತೀರ್ಮಾನಿಸುವುದು.

**ಅನುಕೂಲಿಸುವ ವಿಧಾನ :**

ಸಂಶೋಧಿಸಿದ ವಿಷಯಗಳನ್ನು ತರಗತಿಯಲ್ಲಿ ಮಂಡಿಸುವುದು. ಚಾರ್ಟ್ ತಯಾರಿಸುವುದು. ಪ್ರಬಂಧ ರಚನೆ ಮಾಡುವುದು, ನಾಟಕಾಭಿನಯ ಮಾಡುವುದು, ಸ್ವಾತಂತ್ರ್ಯ ಹೋರಾಟದ ಹಂತಗಳನ್ನು ಗ್ರಹಿಸುವುದು, ಚರ್ಚೆಮಾಡುವುದು, ಅವಲೋಕನ ಮಾಡುವುದು, ಅಭಿಪ್ರಾಯ, ವಿಶ್ಲೇಷಣೆ, ಲೌಕಿಕ ಚಿಂತನೆಗಳ ಮೂಲಕ ಘಟಕವನ್ನು ಮನನ ಮಾಡಿಕೊಳ್ಳುವುದು. ಕಲಿಕಾಂಶವನ್ನು ಶ್ರೀಮಂತಗೊಳಿಸುವುದು. ಗೊಂದಲ ಸಂಶಯಗಳನ್ನು ಅನುಕೂಲಕಾರರು ಪರಿಹರಿಸಿ ವಿಷಯವನ್ನು ಸ್ಪಷ್ಟಪಡಿಸುವುದು.

**ಮೌಲ್ಯಮಾಪನ :**

* ಕಲಿಕಾಂಶವನ್ನು ನಿಖರವಾಗಿ ಅರ್ಥೈಸಿಕೊಳ್ಳುವುದು. ಉದಾ: ಭಾರತೀಯರ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾದ ಬಗ್ಗೆ ಉದ್ದೇಶ, ವಿವಿಧ ಹಂತಗಳಲ್ಲಿ, ಹೋರಾಟ, ಮಂದಗಾಮಿಗಳ ಹೋರಾಟ, ತೀವ್ರವಾದಿಗಳ ಹೋರಾಟದ ಬಗ್ಗೆ ಸುಭಾಷ್‌ಚಂದ್ರ ಬೋಸ್‌ರ ಹೋರಾಟ. ಡಾ॥ಬಿ.ಆರ್.ಅಂಬೇಡ್ಕರ್ ಮತ್ತು ನೆಹರೂರವರ ಪಾತ್ರ, ಮಹಾತ್ಮಗಾಂಧೀಜಿಯವರ ಖಿಲಾಫತ್ ಚಳುವಳಿ, ಅಸಹಕಾರ ಚಳುವಳಿ, ಸವಿನಯ ಕಾನೂನು ಭಂಗ ಚಳುವಳಿ, ಕ್ವಿಟ್ ಇಂಡಿಯಾ ಚಳುವಳಿ, ರೈತರು ಮತ್ತು ಕಾರ್ಮಿಕರ ಸಂಘಟನೆ, ಬುಡಕಟ್ಟು ಬಂಡಾಯ, ಮಹಮ್ಮದ್ ಅಲಿ ಜಿನ್ನಾ ಮತ್ತು ಭಾರತದ ವಿಭಜನೆ.
* ಗುಣಾತ್ಮಕ ಕಲಿಕೆಯ ಪರಿಣಾಮಕಾರಿ ಬೋಧನೆ ಸಾಧ್ಯವಾಗುವುದು.
* ಅಭಿವ್ಯಕ್ತಿಗೆ ಅವಕಾಶ ದೊರೆಯುವುದು.
* ವಿಷಯದ ಬಗೆಗೆ ಹೆಚ್ಚಿನ ಜ್ಞಾನ ದೊರೆಯುವುದು
* ಸ್ವಕಲಿಕೆಗೆ ಪೂರಕವಾಗುವುದು
* ದೇಶಪ್ರೇಮ ಬೆಳೆಯುವುದು
* ಅಹಿಂಸಾತ್ಮಕ ಹೋರಾಟ ಪರಿಕಲ್ಪನೆ, ಒಗ್ಗಟ್ಟಿನಲ್ಲಿ ಬಲವಿದೆ, ತ್ಯಾಗ ಸಮರ್ಪಣಾ ಮನೋಭಾವನೆ ಇತ್ಯಾದಿ ಮೌಲ್ಯಗಳನ್ನು ಬೆಳೆಸಿಕೊಳ್ಳುವುದು.
* ನಾಯಕತ್ವ ಕ್ರಿಯಾಶೀಲತೆ, ಕಾರ್ಯತತ್ಪರತೆ ಗುಣಗಳನ್ನು ಅಳವಡಿಸಿಕೊಳ್ಳುವುದು.

## ವಿಶ್ಲೇಷಣಾ ವಿಧಾನ

**ಅರ್ಥಸ್ವರೂಪ :**

ಘಟಕಕ್ಕೆ ಸಂಬಂಧಿಸಿದ ಕಲಿಕಾಂಶಗಳ ಕುರಿತಾದ ಮಾಹಿತಿಗಳನ್ನು ಕಾರ್ಯಕಾರಣ ಹಿನ್ನಲೆಯಲ್ಲಿ ತಾರ್ಕಿಕವಾಗಿ ಚಿಂತಿಸಿ, ಸಾಮ್ಯತೆ, ವ್ಯತ್ಯಾಸಗಳನ್ನು ಹೋಲಿಸಿ, ಚರ್ಚಿಸಿ ವಿಷಯದ ಜ್ಞಾನವನ್ನು ಪುನರಚನೆ ಮಾಡಿಕೊಳ್ಳುವ ಗುಣಾತ್ಮ ಕಲಿಕೆಯನ್ನು ಖಾತ್ರಿ ಪಡಿಸಿಕೊಳ್ಳುವ ಪ್ರಕ್ರಿಯೆಯೇ ವಿಶ್ಲೇಷಣಾ ವಿಧಾನ.

**ವಿಧಾನಕ್ಕೆ ಪೂರಕವಾದ ವಿಷಯದ ಆಯ್ಕೆ**

ಇತಿಹಾಸ : 20ನೇ ಶತಮಾನದ ರಾಜಕೀಯ ಆಯಾಮಗಳು

**ವಿಧಾನಕ್ಕೆ ಪೂರಕವಾದ ಪೂರ್ವಸಿದ್ಧತೆ :**

**ಅನುಕೂಲಕಾರರ ಚಟುವಟಿಕೆ :**

* ಕಲಿಕಾಂಶಗಳ ಪಟ್ಟಿ ಮಾಡುವುದು. ಹೊಸ ವಿಷಯವಾಗಿರುವುದರಿಂದ ಅವಶ್ಯಕತೆ ಇರುವ ಕಡೆ ವಿಷಯದ ವಿಶ್ಲೇಷಣೆ ಮಾಡಿ ಅನುಕೂಲಕಾರ ಪ್ರಸ್ತುತಪಡಿಸುವುದು.

ಉದಾ: ಪ್ರಥಮ ಮಹಾಯುದ್ಧದ ಕಾರಣ, ಹಿನ್ನಲೆ, ಪರಿಣಾಮಗಳು, ರಷ್ಯಾ ಕ್ರಾಂತಿ, ಸರ್ವಾಧಿಕಾರಿ ಉದಯಕ್ಕೆ ಕಾರಣ, ಪರಿಣಾಮ, ಎರಡನೆ ಮಹಾಯುದ್ಧ ಹಿನ್ನಲೆ, ಕಾರಣ, ಚೀನಾದ ಕ್ರಾಂತಿ, ಶೀತಲ ಸಮರ, ಅಮೇರಿಕಾದ ಉದಯ.

* ವಿದ್ಯಾರ್ಥಿಗಳನ್ನು ವಿವಿಧ ಗುಂಪುಗಳನ್ನಾಗಿ ವಿಂಗಡಿಸುವುದು
* ಪ್ರತಿಗುಂಪಿಗೂ ವಿಷಯಗಳ ಹಂಚಿಕೆ ಮಾಡುವುದು.
* ಕಲಿಕಾಂಶಗಳನ್ನು ಕ್ರಮಬದ್ಧವಾಗಿ ಸಂಗ್ರಹಿಸಲು ಸಲಹೆ ನೀಡುವುದು.

**ವಿದ್ಯಾರ್ಥಿಗಳ ಚಟುವಟಿಕೆಗಳು**

* ಕಲಿಕಾರ್ಥಿಗಳು ಅನುಕೂಲಕಾರರ ವಿಷಯದ ವಿಶ್ಲೇಷಣೆಯನ್ನು ಆಸಕ್ತಿಯಿಂದ ಆಲಿಸಿ ಗ್ರಹಿಸುವುದು.
* ವಿವಿಧ ಗುಂಪಿನವರು ತಮಗೆ ವಹಿಸಿದ ವಿಷಯದ ಕುರಿತು ಮಾಹಿತಿ ಸಂಗ್ರಹಿಸಲು ನಿರ್ಧರಿಸುವುದು.
* ವಿಷಯದ ವ್ಯಾಪ್ತಿಯನ್ನು ಅರಿತುಕೊಳ್ಳುವುದು.

**ಅನುಕೂಲಿಸುವ ವಿಧಾನಗಳು :**

ಕಲಿಕಾಂಶಗಳ ಮಾಹಿತಿಯನ್ನು ಸಂಗ್ರಹಿಸಿದ ವಿದ್ಯಾರ್ಥಿಗಳೂ ತರಗತಿಯಲ್ಲಿ ಒಂದೊಂದು ಗುಂಪಿನವರು ಮಂಡಿಸಲು ಅವಕಾಶ ಕಲ್ಪಿಸುವರು. ವಿದ್ಯಾರ್ಥಿಗಳು ವರದಿ ತಯಾರಿಸಿ ಮಂಡಿಸುವರು. ಚಾರ್ಟ್‌ಗಳನ್ನು ತಯಾರಿಸುವರು. ಪ್ರಬಂಧ ರಚನೆ ಮಾಡುವರು, ಘಟನೆಗಳನ್ನು ತರ್ಕಬದ್ಧವಾಗಿ ಚಿಂತಿಸಿ ಚರ್ಚೆ ಮಾಡುವರು, ಸಂದರ್ಭೋಚಿತವಾಗಿ ವಿಶ್ಲೇಷಿಸುವುದು. ಅನುಕೂಲಕಾರರ ಸೂಚನೆಗನುಗುಣವಾಗಿ ವಿದ್ಯಾರ್ಥಿಗಳ ಕಲಿಕೆಯಲ್ಲಿ ಪಾಲ್ಗೊಂಡು ವಿಶ್ಲೇಷಣೆಯ ಮೂಲಕ ಅರ್ಥೈಸಿಕೊಳ್ಳುವರು.

**ಮೌಲ್ಯಮಾಪನ :**

* ವಿಷಯಗಳನ್ನು ವಿಶ್ಲೇಷಣೆಯ ಮೂಲಕ ಅರಿಯುವುದು

ಉದಾ : ಪ್ರಥಮ ಮಹಾಯುದ್ಧ ಮತ್ತು ಎರಡನೇ ಮಹಾಯುದ್ಧ ಸರ್ವಾಧಿಕಾರಿಗಳು, ರಷ್ಯಾ ಕ್ರಾಂತಿ, ಚೀನಾದ ಕ್ರಾಂತಿ, ಶೀತಲ ಸಮರ, ಅಮೇರಿಕಾದ ಉದಯ ಈ ವಿಷಯಗಳ ಕಾರಣ, ಹಿನ್ನಲೆ, ಘಟನೆಗಳು ಪರಿಣಾಮಗಳನ್ನು ಅರ್ಥೈಸಿ ಕೊಳ್ಳುವುದು.

* ವಿಷಯವನ್ನು ತರ್ಕಬದ್ಧವಾಗಿ ಚರ್ಚಿಸಿ ಅರ್ಥೈಸಿಕೊಳ್ಳುವುದು.
* ಪ್ರಚಲಿತ ವಿದ್ಯಮಾನಗಳ ದೃಷ್ಟಿಯಿಂದ ಘಟನೆಗಳನ್ನು ವಿಶ್ಲೇಷಿಸುವುದು.
* ವಿಶ್ಲೇಷಣೆಯ ಮೂಲಕ ಜ್ಞಾನಪುನರಚನೆಗೆ ಅವಕಾಶವಾಗುವುದು.
* ಪಕ್ಷೇತರ ವಿಷಯಗಳನ್ನು ಅರಿತುಕೊಳ್ಳುವರು.
* ಹೆಚ್ಚಿನ ಜ್ಞಾನ ಸಂಪಾದನೆಗೆ ದಾರಿಮಾಡಿಕೊಡುವುದು.
* ವಿಷಯ ಮಂಡನೆ, ನಿರೂಪಣೆ, ಚರ್ಚಿಸುವ ಸಾಮರ್ಥ್ಯ ಬೆಳೆಯವುದು.
* ವಿಶ್ವಶಾಂತಿ, ಸಹಕಾರದ ಕುರಿತು ಚಿಂತಿಸುವುದು.

## ಕಲಿವಿನ ವಿಧಾನ

### ಘಟಕ –1

### ಭಾರತ ನಮ್ಮ ಮಾತೃಭೂಮಿ

**1. ಈ ಪಾಠದಿಂದ ನಿರೀಕ್ಷಿಸುವ ಅಂಶಗಳು (ಸ್ವರೂಪ /ಸಾಮರ್ಥ್ಯ)**

* ವಿಶ್ವದಲ್ಲಿ ಭಾರತ ದೇಶದ ಸ್ಥಾನದ ಪರಿಕಲ್ಪನೆಯನ್ನು ಮೂಡಿಸಿಕೊಳ್ಳುವುದು.
* ನಮ್ಮ ಮಾತೃಭೂಮಿಯ ಭೌಗೋಳಿಕ, ಧಾರ್ಮಿಕ, ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಅಂಶಗಳ ವೈಶಿಷ್ಟ್ಯಗಳನ್ನು ಇಲ್ಲಿನ ಭೌಗೋಳಿಕ ಅಂಶಗಳ ಹಿನ್ನಲೆಯಲ್ಲಿ ಗುರ್ತಿಸುವುದು.
* ಭಾರತ ದೇಶದ ಹಿರಿಮೆ –ಗರಿಮೆ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆಗಳ ಬಗ್ಗೆ ಅರಿಯುವುದು.
* ಭಾರತ ದೇಶವು ಭೌಗೋಳಿಕವಾಗಿ 'ಪರ್ಯಾಯ ದ್ವೀಪ ರಾಷ್ಟ್ರ' ಎಂಬ ಮೂಲಕ ಪರಿಕಲ್ಪನೆಯನ್ನು ಮೂಡಿಸುವುದು.
* 'ಭಾರತ ದೇಶ' ಎಂಬ ಹೆಸರಿನ ಹಿನ್ನಲೆ, ಇದಕ್ಕಿರುವ ಹಲವು ಧಾರ್ಮಿಕ, ಐತಿಹಾಸಿಕ, ಪೌರಾಣಿಕ ಹೆಸರುಗಳಾದ 'ಇಂಡಿಯಾ' 'ಹಿಂದೂಸ್ಥಾನ', 'ಆರ್ಯಾವರ್ತ', 'ಭರತವರ್ಷ', 'ಜಂಬೂದ್ವೀಪ' ಎಂಬುದರ ಹಿನ್ನೆಲೆಯನ್ನು ಅರ್ಥೈಸಿಕೊಳ್ಳುವುದು.
* ಭೌಗೋಳಿಕವಾಗಿ ನಮ್ಮ ಮಾತೃಭೂಮಿ – ಭಾರತದ ಭೌಗೋಳಿಕ ಸ್ಥಾನ, ವಿಸ್ತೀರ್ಣ, ಅಕ್ಷಾಂಶಿಕ ಮತ್ತು ರೇಖಾಂಶಿಕ ವಿಸ್ತಾರ, ಗಾತ್ರ, ಭೂಮೇರೆ ಹಾಗೂ ನೆರೆಹೊರೆಯ ರಾಷ್ಟ್ರಗಳನ್ನು ಪರಿಚಯಿಸುವುದು.

**2. ಮೂಲಾಧಾರ ವಿಧಾನ – ಇದಕ್ಕೆ ಪೂರಕವಾದ ಘಟಕ ಆಯ್ಕೆ**

* ಭಾರತಕ್ಕಿರುವ ವಿವಿಧ ಹೆಸರುಗಳು ಉಗಮವಾದ ಬಗೆ ಮತ್ತು ಅವುಗಳ ಮೂಲಗಳನ್ನು ತಿಳಿಯುವುದು.
* ಪ್ರಪಂಚದ ಭೂಗೋಳದಲ್ಲಿ ಭಾರತ.
* ಭಾರತದ ಧರ್ಮ, ಸಂಸ್ಕೃತಿ, ವೈವಿಧ್ಯತೆ ಮತ್ತು ಏಕತೆಗಳು.
* ವೈವಿಧ್ಯತೆಯಲ್ಲಿ ಏಕತೆಯಾಗಿ ಭಾರತ.

**3. ಪೂರ್ವಸಿದ್ಧತೆ / ಸಂಪನ್ಮೂಲ ಕ್ರೋಢೀಕರಣ :**

* ವಿದ್ಯಾರ್ಥಿಗಳಿಗೆ ಈ ಘಟಕವು ಪೂರ್ಣವಾಗಿ ಮನನವಾಗಬೇಕಾದರೆ ಶಿಕ್ಷಕರು ಮೇಲಿನ ಅಂಶಗಳಿಗೆ ಪೂರಕವಾದ ಆಕರ ಮಾಹಿತಿಗಳುಳ್ಳ ಗ್ರಂಥಗಳು ಮತ್ತು ಕಲಿಕಾ ಸಾಮಾಗ್ರಿಗಳನ್ನು ಸಂಗ್ರಹಿಸಬೇಕು.

1. ಭಾರತದ ಪ್ರಾಕೃತಿಕ / ರಾಜಕೀಯ ನಕ್ಷೆ
2. ನದಿಗಳನ್ನು ನಿರೂಪಿಸುವ ನಕ್ಷೆ
3. ಭಾರತದ ಉತ್ತರ ಮತ್ತು ದಕ್ಷಿಣದ ತುದಿಗಳನ್ನು ನಿರೂಪಿಸುವ ಭಾರತದ ಉದ್ದ, ಅಗಲ, ನಿರ್ದಿಷ್ಟ ಕಾಲಮಾನ ರೇಖೆ, ಅಕ್ಷಾಂಶಿಕ ಮತ್ತು ರೇಖಾಂಶಿಕ ಗಡಿಗಳನ್ನು ನಿರೂಪಿಸುವ ಪಿ.ಪಿ.ಟಿ
4. ಘಟಕದ ಪ್ರಸ್ತುತಿ / ಅನುಕೂಲಿಸುವುದು

* ಘಟಕವನ್ನು ಪೂರ್ಣವಾಗಿ ಅನುಕೂಲಿಸಲು ಹಾಗೂ ವಿದ್ಯಾರ್ಥಿಗಳು ಕೈಗೊಳ್ಳಲು ಹಲವು ವಿಧಾನಗಳನ್ನು ಅನುಸರಿಸಬಹುದು.
* ಗ್ರಹಿಕೆ : ಎಲ್ಲಾ ವಿಷಯವನ್ನು ತಿಳಿಯುವುದು. ಬೋಧನಾ ಅವಧಿಯಲ್ಲಿ ಕಲಿಕಾ ಸಾಮಾಗ್ರಿಗಳನ್ನು ಬಳಸಿ ವಿದ್ಯಾರ್ಥಿಗಳ ಗಮನವನ್ನು ಪಠ್ಯದೆಡೆಗೆ ಕೇಂದ್ರೀಕರಿಸುವುದರಿಂದ ಗ್ರಹಿಕೆ ಸಾಧ್ಯವಾಗುತ್ತದೆ. ಇದಕ್ಕಾಗಿ ಹಲವಾರು ಕ್ರಮಗಳನ್ನು ಅನುಸರಿಸಬೇಕಾಗುತ್ತದೆ.

1. **ಪ್ರಶ್ನೋತ್ತರ ವಿಧಾನ :** ತರಗತಿಯಲ್ಲಿ ಭಾರತದ ಭೂಪಟವನ್ನು ಪ್ರದರ್ಶಿಸಿ ಭಾರತಕ್ಕೆ ಸೀಮಿತವಾದಂತೆ ಪರಿಕಲ್ಪನೆಯನ್ನು ಮಂಡಿಸಲು ಸರಳವಾದ

* ಮೌಖಿಕ ಪ್ರಶ್ನೆಗಳನ್ನು ಕೇಳುವುದು ಲಿಖಿತವಾಗಿ
* ಅಭ್ಯಾಸದಲ್ಲಿರುವ ಪ್ರಶ್ನೆಗಳನ್ನು ಬರೆಸುವುದು.
* ಜ್ಞಾನಾಧಾರಿತ (ರಸ) ಪ್ರಶ್ನೆಗಳು

2. **ಚರ್ಚೆಗೆ ಅವಕಾಶ ಕಲ್ಪಿಸುವುದು :**

ತರಗತಿಯಲ್ಲಿ ಅನುಕೂಲಕಾರರು ಗುಂಪುಗಳನ್ನು ಮಾಡಿ ಒಂದೊಂದು ಗುಂಪಿಗೆ ಒಂದೊಂದು ಜ್ಞಾನ ರಚನಾ ಅಂಶವನ್ನು ನಿಗದಿಪಡಿಸಿ ಗುಂಪಿನಲ್ಲಿ ಚರ್ಚೆ ಮಾಡುವುದರ ಮೂಲಕ ಜ್ಞಾನ ಕಟ್ಟಿಕೊಂಡು ಪ್ರತಿ ಗುಂಪಿನಿಂದ ಕಲಿತ ವಿಷಯದ ಅನುಭವವನ್ನು ತರಗತಿಗೆ ಪ್ರಸ್ತುತ ಪಡಿಸುವುದರ ಮೂಲಕ ಕಲಿಕೆಯಲ್ಲಿ ಪರಿಪೂರ್ಣತೆಯನ್ನು ಸಾಧಿಸುವುದು.

3. **ವೀಕ್ಷಣೆ :** ಇಂದಿನ ದಿನಗಳಲ್ಲಿ ಪ್ರತಿ ವಿಷಯಕ್ಕೂ ಸಂಬಂಧಿಸಿದಂತೆ ವಿಸ್ತೃತ ಹಾಗೂ ಜ್ಞಾನಾಧಾರಿತ ಸಿಡಿಗಳು ಮಾರುಕಟ್ಟೆಯಲ್ಲಿ ಲಭ್ಯವಿರುವುದರಿಂದ ಪರಿಣಾಮಕಾರಿ

ಬೋಧನೆಗಾಗಿ ಶಿಕ್ಷಕನು ಅವುಗಳನ್ನು ಖರೀದಿಸಿ ಮಕ್ಕಳ ಮುಂದೆ ಪಿಪಿಟಿ ಮೂಲಕ ನಿರೂಪಿಸಬಹುದು. ಇದು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಸಿನಿಮಾ ನೋಡಿದಂತೆ ಸದಾ ಜ್ಞಾಪಕದಲ್ಲಿರುತ್ತದೆ. ಹಾಗೂ ಪರಿಣಾಮಕಾರಿಯೂ ಹೌದು.

**ಪ್ರವಾಸ** : ಅವಕಾಶವಾದಲ್ಲಿ ದೇಶದ ಗಡಿ ಪ್ರದೇಶಗಳು, ಐತಿಹಾಸಿಕ, ನೈಸರ್ಗಿಕ ಹಾಗೂ ಸಾಂಸ್ಕೃತಿಕ ಪ್ರಾಮುಖ್ಯತೆಯನ್ನು ಹೊಂದಿರುವ ಕೆಲವು ಸ್ಥಳಗಳಿಗೆ ಭೇಟಿ ನೀಡುವುದು.

4. **ವಿಶ್ಲೇಷಣೆ :** ಭಾರತಕ್ಕೆ ಸಂಬಂಧಿಸಿದಂತೆ ಪೂರಕವಾದ ಮಾಹಿತಿಗಳ ಮೂಲಕ ಭಾರತದ ಭೌಗೋಳಿಕ ಸ್ಥಾನ, ಇದು ವಿಶ್ವದಲ್ಲೇ ಬಹುತೇಕ ಕೇಂದ್ರ ಭಾಗದಲ್ಲಿರುವ ವಿಚಾರ, ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ದೇಶಗಳ ಮಧ್ಯೆ ಇದ್ದು ಹೇಗೆ ಜಲಸಾರಿಗೆಯಲ್ಲಿ ಪ್ರಾಮುಖ್ಯತೆ ಮತ್ತು ಸಂಪರ್ಕ ಪಡೆದಿದೆ ಎಂಬ ವಿಷಯದ ಬಗ್ಗೆ ವಿಶ್ಲೇಷಿಸುವುದು.

5. **ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ :**

* ಭಾರತದ ನಕ್ಷೆಯನ್ನು ಬರೆದು ಅಕ್ಷಾಂಶ ಮತ್ತು ರೇಖಾಂಶಗಳನ್ನು ಗುರ್ತಿಸುವುದು.
* ಭಾರತದ ಮೇರೆಗಳು ಹಾಗೂ ನೆರೆಹೊರೆಯ ರಾಷ್ಟ್ರಗಳನ್ನು ನಕ್ಷೆಯಲ್ಲಿ ನಿರೂಪಿಸುವುದು.
* ಭಾರತ ಮತ್ತು ನೆರೆಯ ರಾಷ್ಟ್ರಗಳ ನಡುವಿನ ಗಡಿರೇಖೆಗಳನ್ನು ಗುರ್ತಿಸುವುದು.
* $23.5^0$ ಡಿಗ್ರಿ ಉತ್ತರದ ಕರ್ಕಾಟಕ ಸಂಕ್ರಾಂತಿ ವೃತ್ತವನ್ನು ರಚಿಸಿ, ಇದು ಭೌಗೋಳಿಕವಾಗಿ ಭಾರತವನ್ನು ಎರಡು ವಾಯುಗುಣ ವಲಯಗಳನ್ನಾಗಿ ವಿಭಾಗಿಸಿರುವುದನ್ನು ತಿಳಿಸುವುದು.
* ಭಾರತದ 29 ರಾಜ್ಯಗಳು ಹಾಗೂ 6 ಕೇಂದ್ರಾಡಳಿತ ಪ್ರದೇಶಗಳು ಮತ್ತು 1 ರಾಷ್ಟ್ರೀಯ ರಾಜಧಾನಿ ಪ್ರದೇಶವನ್ನು ವಿವಿಧ ಬಣ್ಣ ಬಳಸಿ ಗುರ್ತಿಸುವಂತೆ ತಿಳಿಸುವುದು.
* $82.5^0$ ಪೂರ್ವ ರೇಖಾಂಶ ರೇಖೆಯ ಆಧಾರದ ಮೇಲೆ ಭಾರತ ನಿರ್ದಿಷ್ಟ ಕಾಲಮಾನ ಹೇಗೆ ನಿರ್ಧರಿಸಲ್ಪಟ್ಟಿದೆ ಎಂಬುದನ್ನು ತಿಳಿದುಕೊಳ್ಳುವುದು.
* ಭಾರತವು ವೈವಿಧ್ಯತೆಯಲ್ಲಿ ಏಕತೆಯನ್ನು ಹೊಂದಿರುವ ರಾಷ್ಟ್ರ ಎಂಬುದನ್ನು ಪ್ರಬಂಧ ತಯಾರಿಸುವಂತೆ ತಿಳಿಸುವುದು.

**ಅನಿಸಿಕೆ:** ಸಮಾಜ ವಿಜ್ಞಾನ ಪಠ್ಯ ವಿಷಯಕ್ಕೆ ಸಂಬಂಧಿಸಿದಂತೆ ಪ್ರಸ್ತುತ 'ಭಾರತ ನಮ್ಮ ಮಾತೃಭೂಮಿ' ಘಟಕವನ್ನು ತರಗತಿಯಲ್ಲಿ ಅನುಕೂಲಿಸಲು ಮೂಲಾಧಾರ ವಿಧಾನ ಉತ್ತಮ ಕಲಿಕಾ ಪ್ರಕ್ರಿಯೆಯಾಗಿ ಮೂಡಿ ಬರುತ್ತದೆ ಹಾಗೂ ಇದರ ಅಳವಡಿಕೆ ಅನುಕೂಲಕಾರನ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ.

# ಕಲಿವಿನ ವಿಧಾನ : ಪ್ರಯೋಗ ವಿಧಾನ

## ಘಟಕ –4

## ಭಾರತದ ಮಣ್ಣುಗಳು

### 1. ಘಟಕದ ಸ್ವರೂಪ / ಸಾಮರ್ಥ್ಯಗಳು :

ಯಾವುದೇ ಕಲಿಕಾಂಶವನ್ನು ಪ್ರಯೋಗಿಕವಾಗಿ ಕಲಿಯುವುದು ಇದನ್ನೇ ಸ್ವಕಲಿಕೆ, ಸ್ವಅನುಭವ ಎನ್ನುತ್ತೇವೆ. ನಿರಂತರ ಮತ್ತು ಶಾಶ್ವತ ಜ್ಞಾನಕ್ಕೆ ಪೂರಕವಾಗಿದೆ.

* ಮಣ್ಣಿನ ರಚನೆ (ಪದರ) ಯ ಬಗ್ಗೆ ಜ್ಞಾನ ಮೂಡಿಸುವುದು.
* ಕಣಗಳ ಗಾತ್ರವನ್ನು ಆಧರಿಸಿದಂತೆ ವಿಧಗಳನ್ನು ಪರಿಚಯಿಸುವುದು.
* ಬಣ್ಣವನ್ನು ಆಧರಿಸಿದಂತೆ ಮಣ್ಣಿನ ಪ್ರಕಾರಗಳನ್ನು ತಿಳಿಯುವುದು.
* ಮಣ್ಣಿನ ಉತ್ಪತ್ತಿಯ ಮತ್ತು ಅದರ ಫಲವತ್ತತೆಯ ಮೇಲೆ ಮೂಲಕತೆ ಮತ್ತು ವಾಯುಗುಣ ಪ್ರಭಾವದ ಬಗ್ಗೆ ಪರಿಕಲ್ಪನೆಯನ್ನು ಮೂಡಿಸುವುದು.
* ಜೀವರಾಶಿಗಳು ಮತ್ತು ಮಣ್ಣಿನ ಫಲವತ್ತತೆಯ ಮಧ್ಯೆ ಸಂಬಂಧವನ್ನು ಗುರ್ತಿಸುವುದು.
* ಭಾರತದಲ್ಲಿ ಕಂಡುಬರುವ ಮೇಲ್ಮೈ ಲಕ್ಷಣಗಳು, ಎತ್ತರ, ವಾಯುಗುಣ ಮತ್ತು ಭೂನಗ್ನೀಕರಣ ಕರ್ತೃಗಳು ಮಣ್ಣಿನ ವಿಧದ ನಿರ್ಧಾರದಲ್ಲಿನ ಪಾತ್ರವನ್ನು ಅರ್ಥೈಸಿಕೊಳ್ಳುವುದು.
* ಭಾರತದ ವಿವಿಧ ಭಾಗಗಳಲ್ಲಿ ಹಂಚಿಕೆಯಾಗಿರುವ ಮಣ್ಣಿನ ಪ್ರಕಾರಗಳು ಮತ್ತು ಹಂಚಿಕೆಯನ್ನು ಅರಿಯುವುದು.
* ಮಣ್ಣಿನಲ್ಲಿರುವ ಖನಿಜಾಂಶಗಳು ಮತ್ತು ಜೈವಿಕ ಲಕ್ಷಣಗಳ ಬಗ್ಗೆ ತಿಳಿಯುವುದು.
* ಮಣ್ಣಿನ ಪ್ರಕಾರ ಮತ್ತು ಕೃಷಿ ಬೆಳೆಗಳ ನಡುವಿನ ಸಂಬಂಧದ ಬಗ್ಗೆ ಪರಿಕಲ್ಪನೆಯನ್ನೂ ಮಂಡಿಸುವುದು.
* ಮಣ್ಣಿನ ಸವೆತ ಮತ್ತು ಸವೆತಕ್ಕೆ ಕಾರಣವಾಗುವ ಅಂಶಗಳ ಜ್ಞಾನ ಮಂಡಿಸುವುದು.
* ಮಣ್ಣಿನ ಸವೆತದಿಂದ ಉಂಟಾಗುವ ಆಘಾತಕಾರಿ ಪರಿಣಾಮಗಳ ಬಗ್ಗೆ ಜ್ಞಾನ ಮೂಡಿಸುವುದು.
* ದೇಶದ ಸರ್ವಾಂಗೀಣ ಅಭಿವೃದ್ಧಿಗೆ ಮಣ್ಣಿನ ಸಂರಕ್ಷಣೆ ಮತ್ತು ನಿರ್ವಹಣೆಯ ಅಗತ್ಯ ಎಂಬುದನ್ನು ಪರಿಚಯ ಮಾಡಿಕೊಳ್ಳುವುದು.

### 2. ಘಟಕದ ಆಯ್ಕೆ :

(ಪ್ರಯೋಗ ವಿಧಾನಕ್ಕೆ ಪೂರಕವಾಗಿ)

* ಮಣ್ಣಿನ ಉಗಮ ಪ್ರಕೃತಿದತ್ತವಾದದ್ದು ಎಂಬುದನ್ನು ಪರಿಚಯಿಸುವುದು.
* ಪ್ರಾಕೃತಿಕ ಅಂಶಗಳು ಮತ್ತು ಮಣ್ಣಿನ ಉಗಮ ಮತ್ತು ವಿಧಗಳ ನಡುವೆ ನೇರ ಸಂಬಂಧವಿರುವುದನ್ನು ತಿಳಿಯುವುದು.

ಉದಾ: ಪರ್ವತ ಪ್ರದೇಶದಲ್ಲಿ ಪರ್ವತ ಮಣ್ಣು, ರಾಜಸ್ತಾನದಲ್ಲಿ ಮರುಭೂಮಿ ಮಣ್ಣು, ಆಧಿಕ ಮಳೆ ಬೀಳುವ ಪಶ್ಚಿಮ ಘಟ್ಟದ ಇಳಿಜಾರಿನಲ್ಲಿ ಜಂಬಿಟ್ಟಿಗೆ ಮಣ್ಣು, ನದಿಗಳು ಹರಿಯುವ ಮುಖಜ ಭೂಮಿ ಪ್ರದೇಶದಲ್ಲಿ ಮೆಕ್ಕಲು ಮಣ್ಣು, ಲಾವ ಶಿಲಾ ಪ್ರದೇಶದಲ್ಲಿ ಕಪ್ಪು ಮಣ್ಣು, ಅಧಿಕ ಕಬ್ಬಿಣಾಂಶವಿರುವಲ್ಲಿ ಕೆಂಪು ಮಣ್ಣು ಕಂಡುಬರುವುದು.

* ಮಣ್ಣಿನ ವಿಧಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಪ್ರಾಯೋಗಿಕ ಜ್ಞಾನವನ್ನು ಮೂಡಿಸುವುದು.
* ಭಾರತದ ವಿವಿಧ ಪ್ರದೇಶಗಳಲ್ಲಿ ವಿಭಿನ್ನ ರೀತಿಯ ಮಣ್ಣುಗಳು ಏಕೆ ಕಂಡುಬರುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳುವುದು.

## 3. ಪೂರ್ವ ಸಿದ್ಧತೆ ಮತ್ತು ಸಂಪನ್ಮೂಲ ಕ್ರೋಢೀಕರಣ:

* ಅನುಕೂಲಕಾರರು ವಿವಿಧ ಬಗೆಯ ಮಣ್ಣುಗಳನ್ನು ಸಂಗ್ರಹಿಸಲು ವಿದ್ಯಾರ್ಥಿಗಳಿಗೆ ಸೂಚಿಸುವುದು.
* ಭಾರತದ ನಕ್ಷೆಯನ್ನು ಬರೆದು ಅದರಲ್ಲಿ ಮಣ್ಣಿನ ಬಣ್ಣವನ್ನು ಆಧರಿಸಿದಂತೆ ಬಣ್ಣ ಹಚ್ಚಿ ಪ್ರದರ್ಶಿಸಿ ಕಲಿಯುವುದು.
* ಭಾರತದ ನಕ್ಷೆ ರಚಿಸಿ, ನಿಜವಾದ ಮಣ್ಣನ್ನು ಅದರಲ್ಲಿ ಅಂಟಿಸುವ ಮೂಲಕ ತಿಳಿಯುವುದು.
* ಉತ್ತರ ಭಾರತ ಮತ್ತು ದಕ್ಷಿಣ ಭಾರತವನ್ನು ಅನುಸರಿಸಿ ಮಣ್ಣುಗಳ ವಿಧಗಳನ್ನು ಪಟ್ಟಿ ಮಾಡುವುದು.
* ಮಣ್ಣಿನ ವಿಧಗಳನ್ನು ವಿದ್ಯಾರ್ಥಿಗಳಿಂದ ಸಂಗ್ರಹಿಸಿ ಅಯಸ್ಕಾಂತ ಬಳಸಿ ನಿರ್ದಿಷ್ಟ ಪ್ರಮಾಣದ ಮಣ್ಣಿನಲ್ಲಿರುವ ಕಬ್ಬಿಣಾಂಶದ ಬಗ್ಗೆ ಪ್ರಾಯೋಗಿಕವಾಗಿ ಅರಿಯುವುದು.
* ಥರ್ಮಾಕೋಲ್ ಬಳಸಿ ಭಾರತದ ನಕ್ಷೆಯನ್ನು ರಚಿಸಿ, ಮಣ್ಣಿನ ವಿಧಗಳನ್ನು ಗುರ್ತಿಸುವುದು.

## 4. ಘಟಕದ ಪ್ರಸ್ತುತಿ :

* ಘಟಕವನ್ನು ಪೂರ್ಣವಾಗಿ ಅನುಕೂಲಿಸಲು ಹಾಗೂ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸಲು ಹಲವು ವಿಧಾನಗಳನ್ನು ಅನುಸರಿಸಬಹುದು.

* ಗ್ರಹಿಕೆ : ಬೋಧನಾ ಅವಧಿಯಲ್ಲಿ ನೀಡಿದ ಮಾಹಿತಿಯನ್ನು ವಿದ್ಯಾರ್ಥಿಗಳು ಗ್ರಹಿಸುವಂತೆ ತಿಳಿಸುವುದು ಇದಕ್ಕಾಗಿ ಹಲವು ವಿಧಾನಗಳನ್ನು ಅನುಸರಿಸಬಹುದು.
* ಪ್ರಾಯೋಗಿಕವಾಗಿ ನಕ್ಷೆ, ಚಾರ್ಟ್ ಪಟ್ಟಿಗಳ ಮೂಲಕ ಮಾಹಿತಿ ನೀಡುವುದು.
* ವಾಸ್ತವಿಕ ಮಣ್ಣಿನ ವಿಧಗಳನ್ನು ಪ್ರಾಯೋಗಿಕವಾಗಿ ನೋಡುವುದು ಮತ್ತು ತಿಳಿಯುವ ವಿಧಾನ.
* ಪ್ರಾಕೃತಿಕ ಪ್ರದೇಶ ಮತ್ತು ಮಣ್ಣುಗಳ ನಡುವಿನ ಸಂಬಂಧದ ಬಗ್ಗೆ ತಿಳಿಯಲು ಪ್ರವಾಸ ಕೈಗೊಳ್ಳುವುದು.
* ಚರ್ಚೆಗೆ ಅವಕಾಶ ಮಾಡಿಕೊಡುವುದರಿಂದ ಕಲಿಕೆಯಲ್ಲಿ ಪರಿಪೂರ್ಣತೆ ಲಭಿಸುತ್ತದೆ.
* ಅಭ್ಯಾಸದಲ್ಲಿರುವ ಪ್ರಶ್ನೆಗಳನ್ನು ಬರೆಸುವುದು.
* ಜ್ಞಾನಕ್ಕೆ ಪೂರಕವಾದ ಪ್ರಶ್ನೆಗಳನ್ನು ಮೌಖಿಕವಾಗಿ ಕೇಳುವುದು.
* ಮಣ್ಣಿನ ಪ್ರಾಮುಖ್ಯತೆಯನ್ನು ತಿಳಿಸಲು ಫಲವತ್ತಾದ ಮಣ್ಣನ್ನು ಹೊಂದಿರದ ಕೊಲ್ಲಿ ರಾಷ್ಟ್ರಗಳು ಹಾಗೂ ಫಲವತ್ತಾದ ಮಣ್ಣನ್ನು ಹೊಂದಿರುವ ರಾಷ್ಟ್ರಗಳ ಅಭಿವೃದ್ಧಿ ನಡುವೆ ವಿಶ್ಲೇಷಣೆ ಮಾಡುವುದರ ಮೂಲಕ ಅರ್ಥ ಮಾಡಿಸುವುದು.

**5. ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ :**

* ನಕ್ಷೆ ತಯಾರಿಸಿ ವಿದ್ಯಾರ್ಥಿಗಳಲ್ಲಿ ಪ್ರತೀ ಮಣ್ಣಿನ ವಿಧಗಳು, ಉಪಯೋಗ ಹಂಚಿಕೆ ಹಾಗೂ ಅದು ಕಂಡುಬರುವ ಬಗ್ಗೆ ದೃಢತೆ ಕಲ್ಪಿಸುವುದು.
* ಮಣ್ಣು ಮತ್ತು ಬೆಳೆಗಳ ಪಟ್ಟಿ ಮಆಡಿ ಸದಾ ಮನನ ಮಾಡಿಕೊಳ್ಳುವಂತೆ ನೋಡಿಕೊಳ್ಳುವುದು.
* ಸಾಧ್ಯವಾದಾಗ ಮಣ್ಣಿನ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸುವುದು.
* ಮಣ್ಣಿನ ವಿಧ ಹಾಗೂ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸುವುದು.
* ಮಣ್ಣಿನ ವಿಧ ಹಾಗೂ ಭೂಸ್ವರೂಪ, ವಾಯುಗುಣ – ಎತ್ತರ, ಉಷ್ಣಾಂಶ, ಸಸ್ಯವರ್ಗಗಳ ನಡುವಿನ ಸಂಬಂಧದ ಬಗ್ಗೆ ವಿದ್ಯಾರ್ಥಿಗಳಿಂದಲೇ ಮನನ ಮಾಡಿಸುವುದು.
* ಮಣ್ಣಿನ ಉಗಮ, ಹಂಚಿಕೆ, ಸವೆತ, ಸವೆತಕ್ಕೆ ಕಾರಣಗಳು ಪರಿಣಾಮಗಳು ಹಾಗೂ ಮಣ್ಣಿನ ಸಂರಕ್ಷಣೆ ಮತ್ತು ನಿರ್ವಹಣೆಯ ಬಗ್ಗೆ ಪ್ರಬಂಧ ಬರೆಸುವುದು.
* ಮೇಲಿನ ವಿಚಾರಗಳನ್ನು ವಿದ್ಯಾರ್ಥಿ ಗುಂಪುಗಳನ್ನು ಮಾಡಿ ಹಂಚಿಕೆ ಮಾಡಿ ಸೆಮಿನಾರ್‌ಗಳ ಮೂಲಕ ತರಗತಿಯಲ್ಲಿ ಚರ್ಚಿಸುವಂತೆ ಪ್ರೇರೇಪಿಸುವುದು.

ಅನಿಸಿಕೆ : **ಗುಣಾತ್ಮಕ ಕಲಿಕೆ ಪರಿಣಾಮಕಾರಿ ಬೋಧನೆಗೆ ಸಾಧ್ಯವಾಗುತ್ತದೆ.**

## ಯೋಜನಾ ವಿಧಾನ

**ಸ್ವರೂಪ :** ನಿರ್ದಿಷ್ಟ ಪಡಿಸಿಕೊಂಡ ಕಲಿಕಾಂಶದ ಬಗ್ಗೆ ಮಗು, ಜ್ಞಾನವನ್ನು ಕಟ್ಟಿಕೊಳ್ಳಲು ಅನುಕೂಲಕಾರನ ಮಾರ್ಗದರ್ಶನದಂತೆ ರೂಪಿಸಿಕೊಂಡ ಪೂರ್ವಯೋಜಿತ ಕಲಿಕಾ ಸಂದರ್ಭವನ್ನು 'ಯೋಜನಾ ವಿಧಾನ' ಎನ್ನಬಹುದು.

ತಜ್ಞರ ಪ್ರಕಾರ 'ಯೋಜನಾ ವಿಧಾನವು ಒಂದು ಸಮಸ್ಯಾತ್ಮಕ ಕಾರ್ಯವಾಗಿದ್ದು, ಅದು ಸ್ವಾಭಾವಿಕ ಮತ್ತು ತ್ವರಿತಗತಿಯ ನಿಲುವುಗಳನ್ನು ತೆಗೆದುಕೊಂಡು ಪೂರ್ಣಗೊಳಿಸುವ ವಿಧಾನವಾಗಿದೆ'.

**<u>ಸಮಸ್ಯೆಯ ಆಯ್ಕೆ : ಅಧ್ಯಾಯ-1 ಅಭಿವೃದ್ಧಿ (ಅರ್ಥಶಾಸ್ತ್ರ)</u>**

* ಅಭಿವೃದ್ಧಿ ಮತ್ತು ಅನಾಭಿವೃದ್ಧಿಯ ಅರ್ಥ ಮತ್ತು ಸ್ವರೂಪ
* ಆದಾಯದ ಅಭಿವೃದ್ಧಿ ಸೂಚಕಗಳು
* ಮಾನವ ಅಭಿವೃದ್ಧಿ ಸೂಚಕಗಳು
* ಲಿಂಗ ಸಂಬಂಧಿ ಅಭಿವೃದ್ಧಿ

**<u>ಸಮಸ್ಯೆಗಳಿಗೆ ಕಾರಣಗಳು :</u>**

1. ಕಲಿಕಾಂಶಗಳು ಹೊಸ ವಿಷಯಗಳಾಗಿರುವುದು
2. ನಿರ್ದಿಷ್ಟವಾದ ಜ್ಞಾನ ಇಲ್ಲದಿರುವುದು.
3. ಹಿಂದಿನ ತರಗತಿಗಳಲ್ಲಿ ಕಲಿಕಾಂಶಗಳ ಬಗ್ಗೆ ಹೆಚ್ಚಿನ ಮಾಹಿತಿ ತಿಳಿಯದಿರುವುದು.
4. ವಿಷಯದ ಕಠಿಣತೆ
5. ಅಂಕಿ-ಅಂಶಗಳ ಬಗ್ಗೆ ಮಾಹಿತಿ ಇಲ್ಲದಿರುವುದು.

## ಅರ್ಥೈಸುವಿಕೆ :

**ಕಲಿಕಾಂಶ–1 :**

**ಅಭಿವೃದ್ಧಿ ಮತ್ತು ಅನಾಭಿವೃದ್ಧಿಯ ಅರ್ಥ ಮತ್ತು ಸ್ವರೂಪ :**

ಅನುಕೂಲಕಾರರು ಅಭಿವೃದ್ಧಿಗೆ ಸಂಬಂಧಿಸಿದ ಅಂಶಗಳನ್ನು ವಿದ್ಯಾರ್ಥಿಗಳಿಂದ ತಿಳಿಯುವ ದಿಸೆಯಲ್ಲಿ ಪ್ರಶ್ನೆಗಳನ್ನು ಕೇಳುವರು.

ಉದಾ: ನಿಮ್ಮ ಊರಿನಲ್ಲಿನ / ನಗರದಲ್ಲಿನ ಅಭಿವೃದ್ಧಿಗೆ ಕಾರ್ಯಗಳನ್ನು ಕುರಿತು ಹೇಳಿರಿ.

ವಿದ್ಯಾರ್ಥಿಗಳು ತಮ್ಮ ಸುತ್ತಮುತ್ತಲು ಪ್ರತಿದಿನ ಕಾಣುವ ರಸ್ತೆ ಡಾಂಬರೀಕರಣ, ಸಾರ್ವಜನಿಕ ಕಟ್ಟಡಗಳ ನಿರ್ಮಾಣ, ಗ್ರಂಥಾಲಯ ಸ್ಥಾಪನೆ, ಉದ್ಯಾನವನಗಳ ನಿರ್ಮಾಣ, ಚರಂಡಿ ನಿರ್ಮಾಣ, ಬಹುಮಹಡಿ ಕಟ್ಟಡಗಳು ಮುಂತಾದವುಗಳನ್ನು ಉತ್ತರ ರೂಪದಲ್ಲಿ ಹೇಳುವರು.

ಅನುಕೂಲಕಾರರು ಈ ಅಂಶಗಳನ್ನು ಆಧರಿಸಿ ವಿವಿಧ ಕ್ಷೇತ್ರಗಳೊಡನೆ ಅವುಗಳನ್ನು ಸಂಬಂಧೀಕರಿಸಿ, ವಿದ್ಯಾರ್ಥಿಗಳ ಕಲಿಕೆಯನ್ನು ಕಟ್ಟಿಕೊಳ್ಳಲು ಅನುಕೂಲಿಸುವರು.

ವಿದ್ಯಾರ್ಥಿಗಳು ಅನುಕೂಲಕಾರರ ಮಾರ್ಗದರ್ಶನದಂತೆ ಅಭಿವೃದ್ಧಿಯನ್ನು ಗ್ರಾಮೀಣ, ಸಾಮಾಜಿಕ, ಶೈಕ್ಷಣಿಕ, ಮಹಿಳಾ ಮತ್ತು ಮಕ್ಕಳ ಕ್ಷೇತ್ರಗಳಿಗೆ ಅನ್ವಯಿಸಿಕೊಂಡು ಅದರ ಅರ್ಥ ಮತ್ತು ಸ್ವರೂಪವನ್ನು ಗುಂಪಿನಲ್ಲಿ ಚರ್ಚಿಸಿ, ಅವಶ್ಯಬಿದ್ದಾಗ ಅನುಕೂಲಕಾರರ ಸಹಾಯ ಪಡೆದು ಕಲಿಕೆಯನ್ನು ದೃಢಪಡಿಸಿಕೊಳ್ಳುವರು.

ಅನಭಿವೃದ್ಧಿಯ ಅಂಶಗಳ ಕುರಿತು ಕಲಿಕೆಯನ್ನು ಕಟ್ಟಿಕೊಳ್ಳುವ ಸಲುವಾಗಿ ಅನುಕೂಲಕಾರರು ಗುಡಿಸಲುಗಳು, ಹರಿದ ಬಟ್ಟೆ ಹಾಕಿಕೊಂಡ ಜನರು, ಕಚ್ಚಾ ರಸ್ತೆಯ ಬೀದಿಗಳು, ನಿಂತ ಚರಂಡಿ ನೀರು ಮುಂತಾದ ಸನ್ನಿವೇಶಗಳನ್ನು ಒಳಗೊಂಡ ಒಂದು ಚಿತ್ರವನ್ನು ತರಗತಿಯಲ್ಲಿ ಪ್ರದರ್ಶಿಸಿ, ವಿದ್ಯಾರ್ಥಿಗಳಿಗೆ ವೀಕ್ಷಿಸಲು ಸೂಚಿಸುವರು. ವೀಕ್ಷಿಸಿದ ನಂತರ ಚಿತ್ರದಲ್ಲಿನ ಅಂಶಗಳ ಕುರಿತು ಪಟ್ಟಿ ಮಾಡಲು ಹೇಳುವರು.

ವಿದ್ಯಾರ್ಥಿಗಳು ಚಿತ್ರವನ್ನು ಆಸಕ್ತಿಯುತವಾಗಿ ವೀಕ್ಷಿಸಿ, ಅದರಲ್ಲಿನ ಅಂಶಗಳ ಕುರಿತು ಪಟ್ಟಿಮಾಡುವುದು.

ಸುಗಮಕಾರರು ಪಟ್ಟಿ ಮಾಡಿದ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಅದಕ್ಕೆ ಪೂರಕವಾಗಿ ಇತರ ಅಂಶಗಳಾದ ನಿರುದ್ಯೋಗ, ಅನಕ್ಷರತೆ, ಮೂಢನಂಬಿಕೆ ಮುಂತಾದವು ಗಳನ್ನು ಸೇರಿಸಿ, ಕಲಿಕೆಗೆ ಪೂರಕ ವಾತಾವರಣ ಬರುವಂತೆ ಸುಗಮಿಸುವರು.

ವಿದ್ಯಾರ್ಥಿಗಳು ಅನಾಭಿವೃದ್ಧಿಗೆ ಸಂಬಂಧಿಸಿದ ಪ್ರಮುಖ ಅಂಶಗಳ ಬಗ್ಗೆ ಗುಂಪಿನಲ್ಲಿ ಚರ್ಚಿಸಿ, ಪಟ್ಟಿ ಮಾಡಿ, ಅದರ ಅರ್ಥ ಮತ್ತು ಸ್ವರೂಪವನ್ನು ಅರ್ಥೈಸಿಕೊಳ್ಳುವರು.

**ಕಲಿಕಾಂಶ–2 ಆದಾಯದ ಅಭಿವೃದ್ಧಿ ಸೂಚಕಗಳು.**

ಅನುಕೂಲಕಾರರು ಒಂದು ಸನ್ನಿವೇಶವನ್ನು ಸೃಷ್ಟಿಸಿ, ವಿವಿಧ ಕುಟುಂಬಗಳ ಕೆಲವೇ ಜನರು ದುಡಿಯುವ ಹಾಗು ಕುಟುಂಬದ ಇತರ ಸದಸ್ಯರು ಅವರ ಆದಾಯದಿಂದಲೇ ಜೀವನ ಸಾಗಿಸುವ ಅಂಶವನ್ನಾಧರಿಸಿ ಒಂದು ಘಟನೆಯನ್ನು ಪ್ರಸ್ತುತಿ ಪಡಿಸಿ ಕಲಿಕೆಗೆ ಸೂಕ್ತ ಸಂದರ್ಭವನ್ನು ಒದಗಿಸುವರು.

ವಿದ್ಯಾರ್ಥಿಗಳು ಘಟನೆಯ ಸನ್ನಿವೇಶವನ್ನು ಅರ್ಥಮಾಡಿಕೊಂಡು ಅದರ ಆಧಾರದೊಂದಿಗೆ ರಾಷ್ಟ್ರೀಯ ಆದಾಯ ಮತ್ತು ತಲಾದಾಯದೊಂದಿಗೆ ಅಭಿವೃದ್ಧಿಯನ್ನು ಹೋಲಿಕೆ ಮಾಡಿಕೊಂಡು ಗುಂಪಿನಲ್ಲಿ ಚರ್ಚಿಸಿ ಅವುಗಳು ಅಭಿವೃದ್ಧಿ ಅಳೆಯುವ ಬಗೆಯನ್ನು ಅರ್ಥಮಾಡಿಕೊಳ್ಳುವರು ಹಾಗೂ ರಾಷ್ಟ್ರೀಯ ಆದಾಯ ಮತ್ತು ತಲಾ ಆದಾಯಗಳು ಅಭಿವೃದ್ಧಿಯನ್ನು ಅಳೆಯಲು ಅಷ್ಟು ಸೂಕ್ತವಲ್ಲ ಎನ್ನುವುದನ್ನು ಕೂಡ ಚರ್ಚೆಯಿಂದ ಮನದಟ್ಟು ಮಾಡಿಕೊಳ್ಳುವರು.

**ಕಲಿಕಾಂಶ–3 : ಮಾನವ ಅಭಿವೃದ್ಧಿ ಸೂಚಕಗಳು :**

ಅನುಕೂಲಕಾರರು 'ವ್ಯಕ್ತಿಗಳು ಉತ್ತಮವಾಗಿ ಜೀವನವನ್ನು ಸಾಗಿಸಬೇಕಾದರೆ ಯಾವ ಅಂಶಗಳು ಬೇಕು? ಎಂಬ ಪ್ರಶ್ನೆಯನ್ನು ಹಾಕುವುದರ ಮೂಲಕ ಜ್ಞಾನರಚನೆಗೆ ಅವಕಾಶ ಕಲ್ಪಿಸುವರು.

ವಿದ್ಯಾರ್ಥಿಗಳು ಉತ್ತಮ ಆಹಾರ, ಬಟ್ಟೆ, ವಸತಿ, ಶಿಕ್ಷಣ, ಆರೋಗ್ಯ, ಕಾನೂನಿನ ನೆರವು, ಸಾಮಾಜಿಕ ಭದ್ರತೆ, ಶುದ್ಧವಾದ ನೀರು ಮತ್ತು ಗಾಳಿ, ಸ್ವಚ್ಛವಾದ ಪರಿಸರ ಹೀಗೆ ಪ್ರಶ್ನೆಗೆ ಪ್ರತಿಕ್ರಿಯೆ ನೀಡುತ್ತಾ ಕಲಿಕೆಯನ್ನು ಕಟ್ಟಿಕೊಳ್ಳಲು ಸಿದ್ಧರಾಗಿ ಸಹಪಾಠಿಗಳೊಂದಿಗೆ ಚರ್ಚಿಸುತ್ತಾ ಕಲಿಕೆಯನ್ನು ದೃಢಪಡಿಸಿಕೊಳ್ಳುತ್ತಾ ಹೋಗುವರು.

ಮಾನವ ಅಭಿವೃದ್ಧಿ ಸೂಚಕಗಳಾದ : (1) ನಿರೀಕ್ಷಿತ ಜೀವಿತಾವಧಿ (2) ಶೈಕ್ಷಣಿಕ ಸಾಧನೆ (3) ಜೀವನ ಮಟ್ಟ ಅಥವ ತಲಾದಾಯಗಳು ಯಾವ ರೀತಿಯಾಗಿ ನಿರ್ಧರಿತವಾಗುತ್ತವೆ ಎಂಬ ಅಂಶಗಳನ್ನು ಕೂಡಾ ಗುಂಪಿನಲ್ಲಿ ಚರ್ಚಿಸಿ ತಿಳಿಯುವರು.

**ಕಲಿಕಾಂಶ –4 : ಲಿಂಗ ಸಂಬಂಧಿ ಅಭಿವೃದ್ಧಿ**

ಅನುಕೂಲಕಾರರು 'ಮಹಿಳೆಯವರಿಗೆ ಸರ್ಕಾರ ನೀಡಿರುವ ಸವಲತ್ತುಗಳೇನು?' ಎಂಬ ಪುಸ್ತಕವನ್ನು ಕೇಳುವ ಮೂಲಕ ಕಲಿಕೆಗೆ ವೇದಿಕೆಯನ್ನು ಸಿದ್ಧಪಡಿಸುವರು.

ವಿದ್ಯಾರ್ಥಿಗಳು ಉದ್ವೇಗದಲ್ಲಿ ಮೀಸಲಾತಿ, ಗರ್ಭಿಣಿಯರಿಗೆ ಪೌಷ್ಠಿಕ ಆಹಾರ, ಬಾಣಂತಿಯರಿಗೆ ಮಡಿಲು ಕಿಟ್, ಇತರೆ ಕಾನೂನು ನೆರವುಗಳನ್ನು ನೀಡಿದೆ ಎಂದು ಉತ್ತರಿಸುವ ಮೂಲಕ ಕಲಿಕೆಗೆ ಪೂರಕ ಪರಿಸರವನ್ನು ನಿರ್ಮಿಸಿಕೊಳ್ಳುವರು.

ಅನುಕೂಲಕಾರರು ವಿದ್ಯಾರ್ಥಿಗಳ ಉತ್ತರಗಳೊಂದಿಗೆ ಮಹಿಳೆಯರ ಸ್ಥಾನಮಾನ ಮತ್ತು ಪುರುಷರ ಸ್ಥಾನಮಾನಗಳಿಗೆ ಇರುವ ಸಂಬಂಧವನ್ನು ವಿಶ್ಲೇಷಿಸಿ, 2011ರ ಜನಗಣತಿಗೆ ಸಂಬಂಧಿಸಿದ ಅಂಕಿ–ಅಂಶಗಳನ್ನು ಪಟ್ಟಿ ಮಾಡಲು ಸೂಚಿಸುವರು.

ವಿದ್ಯಾರ್ಥಿಗಳು ಅನುಕೂಲಕಾರರ ವಿಶ್ಲೇಷಣೆಯನ್ನು ಗ್ರಹಿಸಿಕೊಂಡು ಜನಗಣತಿಗೆ ಸಂಬಂಧಿಸಿದ ಅಂಕಿ–ಅಂಶಗಳನ್ನು ಪಟ್ಟಿ ಮಾಡುವುದರೊಂದಿಗೆ ಮಹಿಳಾ ಸಬಲೀಕರಣದ ಅರ್ಥವನ್ನು ಗುಂಪಿನಲ್ಲಿ ಚರ್ಚಿಸಿ ಅರ್ಥೈಸಿಕೊಳ್ಳುವರು.

**ಪರಿಹಾರ ಕ್ರಮಗಳು :**

ವಿದ್ಯಾರ್ಥಿಗಳು ಪೂರ್ವಜ್ಞಾನದ ಸಹಾಯದಿಂದ ಕಲಿಕಾಂಶಗಳಿಗೆ ಸಂಬಂಧಿಸಿದಂತೆ ಅನುಕೂಲಕಾರರು ಕೇಳುವ ಪ್ರಶ್ನೆಗಳಿಗೆ ಉತ್ತರಿಸುವರು ಮತ್ತು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವರು.

ಕೆಲವು ಕಲಿಕಾಂಶಗಳನ್ನು ಕಟ್ಟಿಕೊಳ್ಳಲು ವಿದ್ಯಾರ್ಥಿಗಳು ಸೂಚನೆಗನುಸಾರವಾಗಿ ಗುಂಪುಗಳಲ್ಲಿ ಚರ್ಚೆಗೆ ತೊಡಗಿಕೊಂಡು ವಿಷಯದ ಪರಾಮರ್ಶೆ ಮಾಡಿ ಖಾತ್ರಿಪಡಿಸಿ ಕೊಳ್ಳುವರು.

**ಕಲಿಕೋಪಕರಣಗಳು :**

* ಅಭಿವೃದ್ಧಿಗೆ ಸಂಬಂಧಿಸಿದ ಚಿತ್ರ
* ಅನಾಭಿವೃದ್ಧಿ ರಾಷ್ಟ್ರಗಳ ಲಕ್ಷಣಗಳ ಚಾರ್ಟ್
* ಪಠ್ಯದ ಚಿತ್ರಪಟ ಮತ್ತು ಅಂಕಿ-ಅಂಶಗಳ ಚಾರ್ಟ್
* ಮಾನವ ಅಭಿವೃದ್ಧಿ ಸೂಚಕಗಳಿಗೆ ಸಂಬಂಧಿಸಿದ ಚಾರ್ಟ್
* ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ಕೆಲಸದಲ್ಲಿ ತೊಡಗಿರುವ ಚಿತ್ರ
* ಪ್ರಪಂಚಕ ಭೂಪಟ
* ಭಾರತ ಭೂಪಟ

**ಉಪಸಂಹಾರ :**

ಕಲಿಕಾಂಶಗಳನ್ನು ವಿದ್ಯಾರ್ಥಿಗಳು ಅನುಕೂಲಕಾರರ ಸಹಾಯದಿಂದ ಯೋಚಿಸಿ ಕೊಂಡು, ಸೂಕ್ತವಾದ ಹಿಮ್ಮಾಹಿತಿ ಮತ್ತು ಸೂಚನೆಗಳನ್ನು ಅನುಪಾಲನೆ ಮಾಡಿ, ಅಭಿವೃದ್ಧಿ ಮತ್ತು ಅನಾಭಿವೃದ್ಧಿಗಳ ಅರ್ಥವನ್ನು ಮನನ ಮಾಡಿಕೊಳ್ಳುವರು. ಮಾನವ ಅಭಿವೃದ್ಧಿ ಸೂಚಕಗಳು ಮತ್ತು ಲಿಂಗಸಂಬಂಧಿ ಅಭಿವೃದ್ಧಿಗೆ ಸಂಬಂಧಿಸಿದ ಅಂಶಗಳು ದೇಶದ ಆರ್ಥಿಕಾಭಿವೃದ್ಧಿಗೆ ಎಷ್ಟು ಮಹತ್ವವಾಗಿವೆ ಎಂಬುದನ್ನು ತಾವೇ ಸ್ವತಃ ಕ್ರಿಯಾಶೀಲರಾಗಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದರ ಮೂಲಕ ಕಲಿಕೆಯನ್ನು ಕಟ್ಟಿಕೊಳ್ಳುವುದರಿಂದ

ಮುಂದಿನ ದಿನಗಳಲ್ಲಿ ದೇಶಾಭಿವೃದ್ಧಿಗೆ ಯಾವ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದರ ಕುರಿತು ನಿರ್ಧಾರ ಕೈಗೊಳ್ಳಲು ಸಮರ್ಥರಾಗುವರು.

ಕಲಿಕೆಯನ್ನು ಪರಿಣಾಮಕಾರಿಯಾಗಿ ಅನುಕೂಲಿಸಲು ಮಕ್ಕಳೇ ಕಲಿಕೆಯನ್ನು ತೊಡಗಿಸಿಕೊಳ್ಳಲು ಬಳಕೆಯಾಗುವ ಸಾಧನಗಳೇ ಚಟುವಟಿಕೆಗಳು:

ತರಗತಿಯ ಏಕರೂಪದ ಇದುವರೆಗಿನ ಕಲಿಕಾ ವಿಧಾನಗಳನ್ನು ಬದಿಗೊತ್ತಿ ನಿರಂತರವಾದ ಜ್ಞಾನ ಮತ್ತು ಅನುಭವಾತ್ಮಕವಾಗಿ ಮಕ್ಕಳು ಕಟ್ಟಿಕೊಳ್ಳಲು ಕಲಿಕಾ ಚಟುವಟಿಕೆಗಳನ್ನು ಬಳಸುವುದ ಅನಿವಾರ್ಯವಾಗಿದೆ. ಎನ್.ಸಿ.ಎಫ್‌ನ ಆಶಯಗಳಾದ ಜ್ಞಾನ ಪುನರ್ರಚನೆ, ಅನುಭವಾತ್ಮಕ ಕಲಿಕೆ, ಕಂಠಪಾಠದಿಂದ ದೂರ ಜೀವನಾವಶ್ಯಕತೆಗಳಿಗೆ ಪೂರಕವಾದ ಜ್ಞಾನ ರಚನೆಯು ಚರ್ಚಾತ್ಮಕವಾಗಿ ಮಕ್ಕಳಿಂದಲೇ ಪ್ರಾರಂಭವಾಗ ಬೇಕೆಂಬುದು ಇದರ ಉದ್ದೇಶವಾಗಿದೆ.

ಹಾಗೆಯೇ ಉದ್ದೇಶಿತ ಚಟುವಟಿಕೆಯಿಂದ ಕಲಿಕೆಯು ಸರಳವಾಗಬೇಕು, ಘಟಕವಾರು ವಿಭಿನ್ನ ರೀತಿಯ ಚಟುವಟಿಕೆಗಳನ್ನು ಮಕ್ಕಳ ಸಾಮರ್ಥ್ಯಕ್ಕನುಗುಣವಾಗಿ ಆಯೋಜಿಸಬೇಕೆಂದು ಇಂದಿನ ಉದ್ದೇಶವಾಗಿದೆ.

ಕಲಿಕೆಯ ಗುರಿ ಮತ್ತು ಉದ್ದೇಶಗಳನ್ನು ತರಗತಿಯ ಒಳಗೆ ಮತ್ತು ಹೊರಗೆ ನೀಡುವುದರ ಮೂಲಕ ಕಲಿಕಾಂಶಕ್ಕೆ ಪೂರಕವಾಗಿ ತರಗತಿಯ ಪ್ರತಿಯೊಬ್ಬ ವಿದ್ಯಾರ್ಥಿಯು ಪಾಲ್ಗೊಳ್ಳುವಂತಿರಬೇಕು. ಈ ಹಿನ್ನಲೆಯಲ್ಲಿ ಸಮಾಜವಿಜ್ಞಾನಕ್ಕೆ ಸಂಬಂಧಪಟ್ಟಂತೆ ಸಂಗ್ರಹ, ವರದಿತಯಾರಿಕೆ, ಪ್ರಬಂಧ ಮಂಡನೆ, ಸಂವಾದ ಚರ್ಚೆ, ಸ್ಪರ್ಧೆ, ಅವಲೋಕನ, ಗುಂಪುರಚನೆ, ಪ್ರಶ್ನಾವಳಿ ಯೋಜನೆ, ಪಟ್ಟಿ ಮಾಡುವುದು, ತಯಾರಿಕೆ, ಸಮೀಕ್ಷೆ, ವೀಕ್ಷಣೆ, ಭೇಟಿ, ಪ್ರವಾಸ, ಇನ್ನಿತರ ಚಟುವಟಿಕೆಗಳನ್ನು ಕೊಡುವುದರ ಮೂಲಕ ಮಕ್ಕಳನ್ನು ಗುಣಾತ್ಮಕ ಕಲಿಕೆಯಲ್ಲಿ ತೊಡಗಿಸಿಕೊಳ್ಳಬಹುದು.

ಆದ್ದರಿಂದ ಪ್ರಸ್ತುತ ಸಂದರ್ಭದಲ್ಲಿ ಕಲಿಕೆಯ ದೃಷ್ಟಿಯಿಂದ ಕೆಲವು ಚಟುವಟಿಕೆಗಳನ್ನು ಅವಲೋಕಿಸೋಣ.

**ಚಟುವಟಿಕೆ : ಗುಂಪು ಚರ್ಚೆ**

**ಅರ್ಥಸ್ವರೂಪ :** ಕಲಿಕೆಗೆ ಸಂಬಂಧಿಸಿದಂತೆ, ವಿಷಯಾಧಾರಿತವಾಗಿ ವಿವಿಧ ಗುಂಪುಗಳನ್ನು ಮಾಡಿ, ಪ್ರತಿ ಗುಂಪಿಗೂ ನಿರ್ದಿಷ್ಟ ವಿಷಯವನ್ನು ಹಂಚಿ, ವಿಸ್ತೃತ ಚರ್ಚೆಯನ್ನು ಮಾಡಿ ಕಲಿಕೆಯನ್ನು ಪರಸ್ಪರ ದೃಢಪಡಿಸಿಕೊಳ್ಳುವ ಚಟುವಟಿಕೆಗೆ ಗುಂಪು ಚರ್ಚೆ ಎನ್ನಬಹುದು.

**ಲಕ್ಷಣಗಳು :**

1. ಪ್ರತಿ ಗುಂಪಿಗೂ ವಿವಿಧ ವಿಷಯದ ಹಂಚಿಕೆಯಾಗಿರುತ್ತದೆ.
2. ಕಲಿಕಾ ವಿಷಯವನ್ನು ಬಿಡಿ ಬಿಡಿಯಾಗಿ ದೃಢಪಡಿಸಿಕೊಳ್ಳಲಾಗುತ್ತದೆ.
3. ಪ್ರತಿ ವಿದ್ಯಾರ್ಥಿಗಳ ಭಾಗವಹಿಸುವಿಕೆ ಇರುತ್ತದೆ.
4. ಹಂಚಿಕೆಯಾದ ವಿಷಯಗಳು ವಿಮರ್ಶೆಗೆ ಒಳಪಟ್ಟು ಸರಿ ತಪ್ಪುಗಳ ನಿರ್ಣಯವಾಗುತ್ತದೆ.
5. ಚರ್ಚಾ ವಿಷಯಕ್ಕೆ ಸಂಬಂಧಿಸಿದ ಪೂರ್ವಜ್ಞಾನವನ್ನು ಓರೆಗೆ ಹಚ್ಚುತ್ತದೆ.

**ಉದ್ದೇಶಗಳು :**

1. ನಾಯಕತ್ವ ಗುಣಗಳನ್ನು ಬೆಳೆಸುವುದು.
2. ಪ್ರತಿ ವಿದ್ಯಾರ್ಥಿಗಳು ಕಲಿಕೆಯನ್ನು ಸ್ವಯಂ ದೃಢಪಡಿಸಿಕೊಳ್ಳುವರು.
3. ವಿಷಯದ ಮೇಲಿನ ಪ್ರಭುತ್ವವನ್ನು ಪರೀಕ್ಷಿಸುವುದು.
4. ಕಲಿಕಾ ವಿಷಯದ ಚರ್ಚೆಯ ನಂತರ ಕಲಿಕೆಯನ್ನು ಪ್ರಶ್ನೋತ್ತರಗಳ ಮೂಲಕ ಖಾತ್ರಿಪಡಿಸಿಕೊಳ್ಳುವರು.
5. ಸಾಮರ್ಥ್ಯಕ್ಕೆ ಅನುಸಾರವಾದ ವಿಷಯದ ಆಯ್ಕೆ ಮಾಡಿಕೊಳ್ಳುವುದು
6. ಗುಂಪಿನ ಸದಸ್ಯರ ಜೊತೆ ಮುಕ್ತವಾಗಿ ಬೆರೆಯುವುದು.

ಉದಾಹರಣೆಗೆ : ಅಧ್ಯಾಯ–9 ಭೂಸಾರಿಗೆ (ಭಾರತದ ಭೌಗೋಳಶಾಸ್ತ್ರ)

ಅನುಕೂಲಕಾರರು ವಿವಿಧ ಗುಂಪುಗಳ ರಚನೆ ಮಾಡಿ, ಪ್ರತಿ ಗುಂಪಿಗೂ ಸಂಬಂಧಿಸಿದ ಕಲಿಕಾ ವಿಷಯವನ್ನು ನೀಡಿ ಅದರ ಸದ್ಯತೆ ಬಗ್ಗೆ ಸೂಚನೆಗಳನ್ನು ನೀಡುವುದು.

ವಿದ್ಯಾರ್ಥಿಗಳು ಅನುಕೂಲಕಾರರ ಸೂಚನೆಗನುಸಾರವಾಗಿ ತಮಗೆ ನೀಡಿದ ವಿಷಯದ ಮೇಲೆ ತಮ್ಮ ತಮ್ಮ ಗುಂಪಿನಲ್ಲಿ ವಿಮರ್ಶಾತ್ಮಕವಾಗಿ ಚರ್ಚಿಸಿ, ನಂತರ ತರಗತಿಯಲ್ಲಿ ವಿಷಯಗಳನ್ನು ಪರಸ್ಪರ ಹಂಚಿಕೊಂಡು ಕಲಿಕೆಯನ್ನು ಕಟ್ಟಿಕೊಳ್ಳುವರು. ಈ ಕೆಳಗಿನ ಕಲಿಕಾಂಶಗಳನ್ನು ಆಧಾರವಾಗಿಟ್ಟುಕೊಂಡು ಗುಂಪು ರಚನೆ ಮಾಡಬಹುದು.

- ಭಾರತದಲ್ಲಿ ಸಾರಿಗೆ ಮಹತ್ವ
- ರಸ್ತೆಸಾರಿಗೆ ಪ್ರಾಮುಖ್ಯತೆ ಮತ್ತು ಪ್ರಮುಖ ರಾಷ್ಟ್ರೀಯ ಹೆದ್ದಾರಿಗಳು
- ರಸ್ತೆಸಾರಿಗೆಯ ತೊಡಕುಗಳು
- ಪ್ರಮುಖ ಬಂದರುಗಳು
- ಪ್ರಮುಖ ವಿಮಾನ ನಿಲ್ದಾಣಗಳು

| ಕ್ರಮ. ಸಂಖ್ಯೆ | ಗುಂಪುಚರ್ಚೆಗೆ ಸಂಬಂಧಿಸಿದಂತೆ ಶಿಕ್ಷಕರ ಅವಲೋಕನ ತಪಶೀಲು ಪಟ್ಟಿ | ಹೌದು | ಇಲ್ಲ |
|---|---|---|---|
| 01 | ಗುಂಪು ಚರ್ಚೆ ಸನ್ನಿವೇಶದ ಬಗ್ಗೆ ಜ್ಞಾನವಿದೆಯೇ | | |
| 02 | ಗುಂಪು ಚರ್ಚೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆಯೇ? | | |
| 03 | ತನ್ನ ವಾದವನ್ನು ತಾರ್ಕಿಕವಾಗಿ ಮಂಡಿಸುತ್ತದೆಯೇ? | | |
| 04 | ನೀಡಿದ ಅಂಶವನ್ನು ವಿಮರ್ಶಿಸಿ ಸರಿ/ತಪ್ಪೆಂದು ಸಾಬೀತುಪಡಿಸುತ್ತಿದೆಯೇ | | |
| 05 | ಟೀಕೆಗಳನ್ನು, ವಿಮರ್ಶೆಗಳನ್ನು ಧನಾತ್ಮಕವಾಗಿ ಸ್ವೀಕರಿಸುತ್ತಿದೆಯೇ? | | |
| 06 | ಸನ್ನಿವೇಶವನ್ನು ಅರ್ಥೈಸಿಕೊಳ್ಳುವ ಕೌಶಲವಿದೆಯೇ? | | |
| 07 | ಕಲಿಕಾಂಶಕ್ಕೆ ಸಂಬಂಧಿಸಿದ ಸಮಸ್ಯೆಗಳು ಮತ್ತು ಪ್ರಸ್ತುತದಲ್ಲಿರುವ ಸಮಸ್ಯೆಗಳ ಬಗ್ಗೆ ಪರಿಹಾರಗಳನ್ನು ತಿಳಿದಿದೆಯೇ? | | |
| 08 | ವಿಷಯದ ಕುರಿತು ತನ್ನದೇ ಆದ ಅಭಿಪ್ರಾಯ ಮಂಡಿಸುವ ಸಾಮರ್ಥ್ಯ ಹೊಂದಿದೆಯೇ? | | |
| 09 | ನಾಯಕತ್ವದ ಗುಣಗಳನ್ನು ಪ್ರದರ್ಶಿಸಿತೇ? | | |
| 10 | ಗುಂಪಿನ ಸದಸ್ಯರೊಂದಿಗೆ ವಿಷಯದ ಬಗ್ಗೆ ತನ್ನ ಅಭಿಪ್ರಾಯ ಚರ್ಚಿಸುತ್ತಿದೆಯೇ? | | |

**ಚಟುವಟಿಕೆ : ಚರ್ಚಾ ಸ್ಪರ್ಧೆ**

**ಸ್ವರೂಪ (ಅರ್ಥ) :** ಒಂದು ನಿರ್ದಿಷ್ಟ ಚೌಕಟ್ಟಿನೊಳಗೆ ಕಲಿಕಾಂಶವನ್ನು ಆಧರಿಸಿ, ವಿದ್ಯಾರ್ಥಿಗಳು ಹೇಗೆ ಪರಸ್ಪರ ಸಂವಾದಿಸುತ್ತಾರೆಂಬುದರ ಜೊತೆಗೆ ತಮ್ಮದೆಯಾದ ನಿಯಮಗಳನ್ನು ಹೊಂದಿ, ತಮ್ಮ ಭಿನ್ನಾಭಿಪ್ರಾಯಗಳ ಕುರಿತು ಚರ್ಚಿಸಿ ನಿರ್ಣಯಿಸಿ, ಕಲಿಕೆಯನ್ನು ಕಟ್ಟಿಕೊಳ್ಳುವ ಚಟುವಟಿಕೆಗೆ 'ಚರ್ಚಾಸ್ಪರ್ಧೆ' ಎನ್ನಬಹುದು.

**ಲಕ್ಷಣಗಳು :**

1. ಸ್ವಪ್ರಮಾಣದ ಸೂತ್ರ ಮತ್ತು ವಾಸ್ತವವಾದದಿಂದ ದೃಢತೆಯನ್ನು ಪರೀಕ್ಷಿಸುವಂತಿರುತ್ತದೆ.
2. ಸಕಾರಣಗಳ ಸಹಿತ ವಾದಗಳು ವಿಮರ್ಶೆಗೆ ಒಳಪಡುತ್ತವೆ.
3. ತಾತ್ವಿಕ ಪ್ರಶ್ನೆಗಳನ್ನು ಕೇಂದ್ರೀಕರಿಸಿ ಸರಿ–ತಪ್ಪುಗಳ ಪ್ರಮಾಣೀಕರಿಸಲಾಗುತ್ತದೆ.
4. ಕೌಶಲ್ಯಗಳ ಬೆಳವಣಿಗೆಗೆ ಪೂರಕವಾಗಿದೆ.
5. ಸ್ಪಷ್ಟವಾದ ನಿಯಮಗಳನ್ನು ಹೊಂದಿರುತ್ತದೆ.

**ಉದ್ದೇಶಗಳು :**

1. ವೈವಿಧ್ಯಮಯ ಪರಿಣಾಮಕಾರಿ ವಾದಗಳನ್ನು ವಿವಿಧ ಸಂದರ್ಭಗಳಿಗೆ ಸಂಪರ್ಕಿಸುವುದು ಮತ್ತು ಅರ್ಥಮಾಡಿಕೊಳ್ಳುವುದು.
2. ವಿವಾದಗಳ ವಿಶ್ಲೇಷಿಸುವ, ಸಾಕ್ಷಿಗಳ ಮೌಲ್ಯಮಾಪನ ಮಾಡುವ, ಹಾಗೂ ವಾದಗಳನ್ನು ಅಲ್ಲಗಳೆಯುವ ಸಾಮರ್ಥ್ಯ ಬೆಳೆಸುವುದು.
3. ಶೈಕ್ಷಣಿಕ ಮತ್ತು ಸಂವಹನ ಸಿದ್ಧಾಂತಗಳ ತಳಹದಿಯಲ್ಲಿ ಕಲಿಕಾ ಸನ್ನಿವೇಶವನ್ನು ಸೃಷ್ಟಿಸಿ, ವಿದ್ಯಾರ್ಥಿಗಳಲ್ಲಿ ಕುಶಲತೆಗಳನ್ನು (proficiencies)ಬೆಳೆಸುವುದು.
4. ನಿರ್ಧಾರಗಳು ನಿರ್ಮಿತವಾಗುವ (ಮಾಡಬೇಕಾದ) ಸನ್ನಿವೇಶದಲ್ಲಿ ಪರಿಣಾಮಕಾರಿ ಯಾಗಿ ಪಾಲ್ಗೊಳ್ಳುವುದು.
5. ನಾಯಕತ್ವ ಮತ್ತು ಗುಂಪಿನಲ್ಲಿ ಭಾಗವಹಿಸುವ ಅವಕಾಶಗಳನ್ನು ಕೈಗೂಡಿಸಿ ಕೊಳ್ಳುವುದು.

ಉದಾಹರಣೆಗೆ : ಅಧ್ಯಾಯ 4 ಸಾಮಾಜಿಕ ಸಮಸ್ಯೆಗಳು (ಸಮಾಜಶಾಸ್ತ್ರ)

1. 'ಬಾಲ ಕಾರ್ಮಿಕ ಪದ್ಧತಿಯ ನಿರ್ಮೂಲನೆ ಸಾರ್ವಜನಿಕರಿಗೆ ಅರಿವು ಮೂಡಿಸುವುದರಿಂದ ಸಾಧ್ಯ' – ಹೌದು / ಇಲ್ಲ.

2. 'ವರದಕ್ಷಿಣೆ ನಿಷೇಧವು ಪುರುಷರಿಂದ ಸಾಧ್ಯವೋ ಅಥವಾ ಮಹಿಳೆಯರಿಂದ ಸಾಧ್ಯವೋ' – ಪುರುಷರಿಂದ / ಮಹಿಳೆಯರಿಂದ ಎಂಬ ಅಂಶಗಳ ಮೇಲೆ ಚರ್ಚಾಸ್ಪರ್ಧೆ

3. 'ಹೆಣ್ಣು ಶಿಶುಹತ್ಯೆಗಳನ್ನು ತಡೆಯುವುದು ಜನರಿಂದ ಸಾಧ್ಯ' – ಪರ / ವಿರೊಧ.

| ಕ್ರ. ಸಂ. | ಚರ್ಚಾಸ್ಪರ್ಧೆಗೆ ಸಂಬಂಧಿಸಿದಂತೆ ಶಿಕ್ಷಕರ ಅವಲೋಕದ ತಪಶೀಲು ಪಟ್ಟಿ | ಹೌದು | ಇಲ್ಲ |
|---|---|---|---|
| 01 | ಕೊಟ್ಟಿರುವ ವಿಷಯದ ಬಗ್ಗೆ ಜ್ಞಾನವಿದೆಯೇ? | | |
| 02 | ವಿಷಯ ಮಂಡನೆಯ ಆರಂಭ ಉತ್ತಮವಾಗಿತ್ತೇ? | | |
| 03 | ವಿಷಯ ಮಂಡನೆಯಲ್ಲಿ ಸ್ವಂತಿಕೆ ಇತ್ತೇ? | | |
| 04 | ವಿಷಯ ಪ್ರಸ್ತಾವನೆ ವೇಳೆ, ಪ್ರಸ್ತುತ ಘಟನೆಗಳನ್ನು ಬಳಕೆ ಮಾಡಿಕೊಂಡಿದ್ದಾರೆಯೇ? | | |
| 05 | ತನ್ನ ವಾದ ಮಂಡನೆಯಲ್ಲಿ ಸಮರ್ಥಿಸಿಕೊಳ್ಳುವ ಗುಣವನ್ನು ಪ್ರದರ್ಶಿಸಿತೇ? | | |
| 06 | ವಿಷಯ ಮಂಡನೆಯಲ್ಲಿ ಗೊಂದಲವಿದೆಯೇ? | | |
| 07 | ಹೆಚ್ಚಿನ ಮಾಹಿತಿ ಸಂಗ್ರಹಿಸಲು ಗ್ರಂಥಾಲಯ ಪುಸ್ತಕ/ ಇತರ ಪುಸ್ತಕಗಳ ಬಳಕೆ ಮಾಡಿಕೊಂಡಿದ್ದಾರೆಯೇ? | | |
| 08 | ಹಂತಹಂತವಾಗಿ ವಿಷಯವನ್ನು ಮಂಡಿಸಿದ್ದಾರೆಯೇ? | | |
| 09 | ವಿಷಯದ ಎಲ್ಲೆಯೊಳಗೆ ಅನಿಸಿಕೆ ವ್ಯಕ್ತವಾಯಿತೇ? | | |
| 10 | ವಿಷಯ ಮಂಡನೆಯ ಮುಕ್ತಾಯ ಉತ್ತಮವಾಗಿತ್ತೇ? | | |

**ಚಟುವಟಿಕೆ : 'ಪಟ್ಟಿ ಮಾಡುವುದು'**

**ಸ್ವರೂಪ :** ಕಲಿಕಾಂಶಗಳಿಗೆ ಸಂಬಂಧಿಸಿದಂತೆ ಕಾರಣಗಳು, ಪರಿಣಾಮಗಳು, ಕ್ರಮಗಳು, ಕಾರ್ಯಕ್ರಮಗಳು, ಸಾಧನೆಗಳು, ಸೌಲಭ್ಯಗಳು, ಉದ್ದೇಶಗಳು, ರಾಷ್ಟ್ರಗಳು, ವಿಧಗಳು ಇನ್ನೂ ಮುಂತಾದವುಗಳನ್ನು ವೈಯಕ್ತಿಕವಾಗಿ ಅಥವ ಗುಂಪಿನಲ್ಲಿ ಕ್ರಮಬದ್ಧವಾಗಿ ಪಟ್ಟಿ ಮಾಡಿ ಕಲಿಕೆಯನ್ನು ಕಟ್ಟಿಕೊಳ್ಳುವ ಚಟುವಟಿಕೆಗೆ 'ಪಟ್ಟಿ ಮಾಡುವಿಕೆ' ಎನ್ನಬಹುದು.

**ಲಕ್ಷಣಗಳು :**

1. ನಿರ್ದಿಷ್ಟ ವಿಷಯದ ವಿಶ್ಲೇಷಣೆಯಾಗುತ್ತದೆ.
2. ವಿಷಯಕ್ಕೆ ಪೂರಕವಾದ ಹೊಸ ಅಂಶಗಳ ಸೇರ್ಪಡೆಯನ್ನು ಬಯಸುತ್ತದೆ.
3. ದಿನನಿತ್ಯದ ಬದುಕಿನ ಘಟನೆಗಳ ಹೋಲಿಕೆ ಮಾಡಿ ಸಂಬಂಧೀಕರಿಸುತ್ತದೆ.
4. ವಿಭಿನ್ನ ಆಲೋಚನೆಗಳಲ್ಲಿ ಮಗ್ನವಾಗುವಂತೆ ಮಾಡುತ್ತದೆ.
5. ಸ್ವ ಅಭಿಪ್ರಾಯಗಳ ಬೆಳವಣಿಗೆಯಾಗುತ್ತದೆ.
6. ಸತ್ಯ ಸಂಗತಿಗಳ ದರ್ಶನವಾಗುತ್ತದೆ.

**ಉದ್ದೇಶಗಳು :**

1. ಸಾಮಾಜಿಕ ಜವಾಬ್ದಾರಿಗಳ ಅರಿವು ಮೂಡಿಸುವುದು.
2. ಭವಿಷ್ಯದ ನಿರ್ಧಾರಗಳನ್ನು ಕೈಗೊಳ್ಳಲು ಸೂಕ್ತ ಮಾರ್ಗದರ್ಶನ ನೀಡುವುದು
3. ಪರಿಸರ ಪ್ರಜ್ಞೆ, ಮಾನವೀಯತೆ, ಪ್ರಾಮಾಣಿಕತೆ, ಮುಂತಾದ ಮೌಲ್ಯಗಳನ್ನು ಬೆಳೆಸುವುದು
4. ಸನ್ನಿವೇಶ ಮತ್ತು ವಿಷಯ ವಿಶ್ಲೇಷಿಸುವ ಸಾಮರ್ಥ್ಯಗಳಿಸುವುದು
5. ಸೃಜನಶೀಲತೆಯನ್ನು ಬೆಳೆಸುವುದು.

ಉದಾಹರಣೆ : ಅಧ್ಯಾಯ –5 ಜಾಗತಿಕ ಸಂಸ್ಥೆಗಳು (ರಾಜ್ಯಶಾಸ್ತ್ರ)

ಅನುಕೂಲಕಾರರು ಈ ಅಧ್ಯಾಯಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಕಲಿಕಾಂಶಗಳನ್ನು ವಿದ್ಯಾರ್ಥಿಗಳಿಗೆ ಪಟ್ಟಿ ಮಾಡಲು ತಿಳಿಸಬಹುದು.

* ವಿಶ್ವಸಂಸ್ಥೆಯ ಉದ್ದೇಶಗಳು
* ವಿಶ್ವಸಂಸ್ಥೆಯ ಅಂಗಸಂಸ್ಥೆಗಳು
* ಭದ್ರತಾ ಸಮಿತಿಯ ಖಾಯಂ ಸದಸ್ಯ ದೇಶಗಳು ಮತ್ತು ಕಾರ್ಯಗಳು
* ವಿಶ್ವ ಸಂಸ್ಥೆಯ ಸಾಧನೆಗಳು
* ವಿಶ್ವಸಂಸ್ಥೆಯ ಆಶ್ರಯದ ವಿವಿಧ ಸಂಘಸಂಸ್ಥೆಗಳು
* ಆಹಾರ ಮತ್ತು ಕೃಷಿ ಸಂಸ್ಥೆ (FAO)ಯ ಉದ್ದೇಶಗಳು
* ILO ದ ಕಾರ್ಯಗಳು
* ಭೀಕರ ರೋಗಗಳು ಮತ್ತು ರೋಗ ನಿಯಂತ್ರಕ ಕ್ರಮಗಳ ಪಟ್ಟಿ ಮಾಡುವಿಕೆ

*     ಕಾಮನ್‌ವೆಲ್ತ್ ರಾಷ್ಟ್ರಸಂಘದ ಉದ್ದೇಶಗಳು

| ಕ್ರ. ಸಂ. | ಪಟ್ಟಿ ಮಾಡುವಿಕೆ ಅವಲೋಕನ ತಪಶೀಲು ಪಟ್ಟಿ | ಹೌದು | ಇಲ್ಲ |
|---|---|---|---|
| 01 | ಚಟುವಟಿಕೆಗೆ ಸಂಬಂಧಿಸಿದ ಜ್ಞಾನ ಇದೆಯೇ? | | |
| 02 | ಸಹಪಾಠಿಗಳ ಸಹಾಯವನ್ನು ಬಯುಸುತ್ತಾರೆಯೇ? | | |
| 03 | ಸ್ವಂತಿಕೆಯ ಪ್ರದರ್ಶನ ಮಾಡುತ್ತಾರೆಯೇ? | | |
| 04 | ಇತರರಿಗೆ ಸಹಾಯ ಮಾಡುತ್ತಾರೆಯೇ? | | |
| 05 | ಒತ್ತಡಕ್ಕೆ ಒಳಗಾಗಿದ್ದರೇ? | | |
| 06 | ಆಸಕ್ತಿಯುತವಾಗಿ ಚಟುವಟಿಕೆಯಲ್ಲಿ ಪಾಲ್ಗೊಂಡಿತ್ತೇ? | | |
| 07 | ಕೊಟ್ಟ ಕಾರ್ಯವನ್ನು ಬೇಗ ಮುಗಿಸುವ ಮನೋಭಾವ ಹೊಂದಿದೆಯೇ? | | |
| 08 | ಸಮಸ್ಯೆ ಎದುರಾದಾಗ ಅನುಕೂಲಕಾರರೊಡನೆ ಚರ್ಚಿಸುತ್ತದೆಯೇ? | | |
| 09 | ವಿಷಯಕ್ಕೆ ಪೂರಕವಾಗಿ ಹೊಸ ಅಂಶವನ್ನು ಸೇರಿಸುವ ಸಾಮರ್ಥ್ಯ ಹೊಂದಿದೆಯೇ? | | |
| 10 | ಇತರರಿಗೆ ನೋವಾಗುವಂತೆ ವರ್ತಿಸುತ್ತದೆಯೇ? | | |

**ಪ್ರಶ್ನೋತ್ತರ ಚಟುವಟಿಕೆ**

**ಅರ್ಥ ಸ್ವರೂಪ :** ಸಂಬಂಧಿಸಿದ ಘಟಕ ವಿಷಯಕ್ಕೆಪೂರಕವಾದ ವಿಷಯಕ್ಕೆ ಪೂರಕವಾದ ಪ್ರಶ್ನೆಗಳನ್ನು ಕೇಳಿ ಉತ್ತರವನ್ನು ಪಡೆದು ಕಲಿಕಾಂಶಗಳನ್ನು ಅರ್ಥೈಸಿಕೊಳ್ಳುವ ಚಟುವಟಿಕೆಯೇ ಪ್ರಶ್ನೋತ್ತರ ಚಟುವಟಿಕೆ.

**ಲಕ್ಷಣಗಳು :**

1. ಪ್ರಶ್ನೆಗಳು ಕಲಿಕಾಂಶಗಳಿಗೆ ಸಂಬಂಧಪಟ್ಟಿರಬೇಕು.
2. ಪ್ರಶ್ನೆಗಳು ಸ್ಪಷ್ಟವಾಗಿರಬೇಕು.
3. ಪ್ರಶ್ನೆಗಳು ನಿಖರತೆಯಿಂದ ಕೂಡಿರಬೇಕು.
4. ಪ್ರಶ್ನೆಗಳು ಗುಣಾತ್ಮಕವಾಗಿರಬೇಕು.
5. ಪ್ರಶ್ನೆಗಳು ಆಸಕ್ತಿಯನ್ನು ಕೆರಳಿಸುವಂತಿರಬೇಕು.
6. ಪ್ರಶ್ನೆಗಳಿಗೆ ಉತ್ತರ ಸ್ಪಷ್ಟವಾಗಿ ದೊರೆಯುವಂತಿರಬೇಕು.
7. ಅನ್ವಯ ಕೌಶಲ್ಯ ಸ್ವತಂತ್ರಾಭಿವ್ಯಕ್ತಿಗೆ ಅವಕಾಶ ನೀಡುವಂತಿರಬೇಕು.

**ಉದ್ದೇಶಗಳು :**

1. ಪ್ರಶ್ನಿಸುವ, ಉತ್ತರಿಸುವ ಕೌಶಲ್ಯಾಭಿವೃದ್ಧಿ ಮಾಡುವುದು.
2. ವಿಷಯ ಸ್ಪಷ್ಟನೆ ಮಾಡುವುದು.
3. ಪ್ರಶ್ನೆಗಳ ಮೂಲಕ ಜ್ಞಾನವರ್ಧನೆಗೆ ಅವಕಾಶ ಕಲ್ಪಿಸುವುದ.
4. ಸ್ವತಂತ್ರ್ಯ ಅಭಿವ್ಯಕ್ತಿಗೆ ಅವಕಾಶ ಕೊಡುವುದು.
5. ದೃಢತೆ, ಧೈರ್ಯ, ಆಲಿಸುವುದು ತಾಳ್ಮೆ ಗುಣಗಳನ್ನು ಬೆಳೆಸುವುದು.

**ಈ ಚಟುವಟಿಕೆಗೆ ಆಯ್ಕೆ ಮಾಡಿಕೊಳ್ಳಬಹುದಾದ ಘಟಕ**

**ಇತಿಹಾಸ – ಭಾರತಕ್ಕೆ ಯೂರೋಪಿಯನ್ನರ ಆಗಮನ –**

ಅನುಕೂಲಕಾರರು ಸಂಬಂಧಿಸಿದ ಘಟಕದ ವಿಷಯದ ಪ್ರಶ್ನೆಗಳನ್ನು ಸಿದ್ಧಪಡಿಸಿಕೊಂಡು ಬರಲು ಕಲಿಕಾರ್ಥಿಗೆ ಸೂಚಿಸುವರು. ವಿದ್ಯಾರ್ಥಿಗಳು ತಯಾರಿಸಿಕೊಂಡ ಪ್ರಶ್ನೆಗಳನ್ನು ತರಗತಿಯಲ್ಲಿ ಎರಡು ಗುಂಪುಗಳಲ್ಲಿ ವಿಂಗಡಿಸಿ ಉತ್ತರ ಪಡೆಯಲು ಅನುಕೂಲಿಸುವರು ಒಂದು ಗುಂಪು ಪ್ರಶ್ನೆ ಕೇಳಿದರೆ ಇನ್ನೊಂದು ಗುಂಪು ಉತ್ತರಿಸುವುದು. ಅನಕೂಲಕಾರ ಪ್ರಶ್ನೆ ಮತ್ತು ಉತ್ತರಗಳಲ್ಲಿ ತೊಡಕುಂಟಾದರೆ ಮಧ್ಯಪ್ರವೇಶಿಸಿ ಪರಿಹರಿಸುವರು ಸ್ಪಷ್ಟಪಡಿಸುವರು. ತನ್ಮೂಲಕ ಕಲಿಕೆಗೆ ಅನುಕೂಲಕಾರ ವಾತಾವರಣ ನಿರ್ಮಿಸಿ ಜ್ಞಾನವನ್ನು ಖಾತ್ರಿಪಡಿಸಿ ಕೊಳ್ಳುವುದು. ಈ ಕೆಳಗಿನ ಕಲಿಕಾಂಶಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುವುದು.

- ಭಾರತ ಮತ್ತು ಯೂರೋಪ್ ದೇಶಗಳ ನಡವಿನ ವ್ಯಾಪಾರ
- ಹೊಸ ಸಮುದ್ರಯಾನಕ್ಕೆ ಪ್ರೇರಣೆ
- ಭಾರತಕ್ಕೆ ಬಂದ ಯೂರೋಪಿಯನ್ನರ ಬಗ್ಗೆ ಮಾಹಿತಿ
- ವ್ಯಾಪಾರಕ್ಕೆ ಅನುಮತಿ ಪಡೆದ ಬಗ್ಗೆ
- ಕರ್ನಾಟಿಕ್ ಯುದ್ದಗಳು
- ಬ್ರಿಟೀಷರ ಅಧಿಪತ್ಯ ಸ್ಥಾಪನೆ
- ಬಂಗಾಳದಲ್ಲಿ ರಾಬರ್ಟ್‌ಕ್ಲೈವ್‌ನಿಂದ ದ್ವಿಸರ್ಕಾರ ಜಾರಿ.

**ಚಟುವಟಿಕೆಗೆ ಪೂರಕವಾದ**

ತಂತ್ರ : ಪ್ರಶ್ನಾವಳಿ

ವಿಧಾನ : ಪ್ರಶ್ನೆಗಳು ಅವಲೋಕನ

| ಕ್ರ.ಸಂ. | ಪ್ರಶ್ನೆಗಳ ಅವಲೋಕನ | ಹೌದು | ಇಲ್ಲ |
|---|---|---|---|
| 01 | ಪ್ರಶ್ನೆಗಳ ರಚನಾನಿಯಮ ಅನುಸರಿಸಿದ್ದಾರೆಯೇ? | | |
| 02 | ಪ್ರಶ್ನೆಗಳು ವಿಷಯಕ್ಕೆ ಸಂಬಂಧಿಸಿವೆಯೇ? | | |
| 03 | ಭಾರತಕ್ಕೆ ಬಂದ ಯೂರೋಪಿಯನ್ನರ ಪರಿಚಯವಿದಯೇ? | | |
| 04 | ಯೂರೋಪಿಯನ್ನರು ಭಾರತೀಯ ದೊರೆಗಳ ನಡುವೆ ನಡೆಸಿದ ಹೋರಾಟವನ್ನು ಅರಿತಿದ್ದಾರೆಯೇ? | | |
| 05 | ಯೂರೋಪಿಯನ್ನರು ಭಾರತಕ್ಕೆ ಬಂದಾಗ ಇದ್ದಂತಹ ಭಾರತದ ರಾಜಕೀಯ ಸ್ಥಿತಿಯನ್ನು ತಿಳಿದಿದ್ದಾರೆಯೇ? | | |
| 06 | ಬ್ರಿಟೀಷರು ಭಾರತದಲ್ಲಿ ಅಧಿಕಾರ ಸ್ಥಾಪಿಸಿದ ಬಗೆಯನ್ನು ಅರ್ಥೈಸಿಕೊಂಡಿದ್ದಾರೆಯೇ? | | |
| 07 | ಪ್ರಶ್ನಿಸುವ ಮತ್ತು ಉತ್ತರಿಸುವ ಕೌಶಲ್ಯವನ್ನು ಹೊಂದಿದ್ದಾರೆಯೇ? | | |
| 08 | ಚಟುವಟಿಕೆಯಲ್ಲಿ ಆಸಕ್ತಿಯಿಂದ ಪಾಲ್ಗೊಂಡಿದ್ದಾರೆಯೇ? | | |

## ಕ್ಷೇತ್ರದರ್ಶನ ಚಟುವಟಿಕೆ

ಕಲಿಕಾಂಶಕ್ಕೆ ಸಂಬಂಧಿಸಿದಂತೆ ಪರಿಣಾಮಕಾರಿ ಕಲಿಕೆಗಾಗಿ ಐತಿಹಾಸಿಕ ಸ್ಮಾರಕಗಳು, ಪುರಾಣ ಪ್ರಸಿದ್ಧ ಸ್ಥಳಗಳು, ದೇವಸ್ಥಾನಗಳು, ಮಸೀದಿಗಳು, ಚರ್ಚ್‌ಗಳು, ಅಭಯಾರಣ್ಯಗಳು, ಪಕ್ಷಿಧಾಮಗಳು, ರಾಷ್ಟ್ರೀಯ ಉದ್ಯಾವನಗಳು, ಅಣೆಕಟ್ಟುಗಳು, ಕೈಗಾರಿಕೆಗಳು, ಕೆರೆ ಕಟ್ಟೆಗಳು, ನದಿತೀರಗಳು ಮತ್ತು ಸಾರಿಗೆ ಕ್ಷೇತ್ರಗಳು ಮುಂತಾದವುಗಳನ್ನು ಭೇಟಿ ಮಾಡಿ ಕಲಿಕಾ ಚಟುವಟಿಕೆಯನ್ನು ಕ್ಷೇತ್ರದರ್ಶನ ಚಟುವಟಿಕೆ ಎನ್ನುವರು.

<u>**ಲಕ್ಷಣಗಳು :**</u>

1. ಕ್ಷೇತ್ರದರ್ಶನ ಕಲಿಕೆಗೆ ಪೂರಕವಾಗಿರಬೇಕು.
2. ಸಂಬಂಧಪಟ್ಟ ಕ್ಷೇತ್ರಗಳನ್ನು ಸುಲಭವಾಗಿ ಭೇಟಿಮಾಡುವಂತಿರಬೇಕು.
3. ಜ್ಞಾನರಚನೆಗೆ ಅವಕಾಶ ಕಲ್ಪಿಸಬೇಕು.
4. ಜೀವನಾನುಭವವನ್ನು ನೀಡುವಂತಿರಬೇಕು.
5. ಮನಸ್ಸಿಗೆ, ನೆಮ್ಮದಿ, ಸಂತೋಷ, ಶಾಂತಿ, ಮನರಂಜನೆಯನ್ನು ನೀಡುವಂತಿರಬೇಕು.

<u>**ಉದ್ದೇಶಗಳು :**</u>

1. ಜ್ಞಾನವರ್ಧನೆಗೆ ಕ್ಷೇತ್ರದರ್ಶನ ಅವಕಾಶ ನೀಡುವುದು
2. ಕಲಿಕಾ ಸಾಮರ್ಥ್ಯ ಬೆಳೆಸುವುದು.
3. ಹೊಸ ಚಿಂತನೆಗೆ ಅವಕಾಶ ನೀಡುವುದು.
4. ಮಾನಸಿಕ ಶಾಂತಿ, ನೆಮ್ಮದಿ, ಮನರಂಜನೆ ಪಡೆಯುವುದು
5. ಹೊಸ ಅನುಭವ ಪಡೆಯಲು

<u>ಈ ಚಟುವಟಿಕೆಗೆ ಆಯ್ಕೆ ಮಾಡಿಕೊಂಡ ಘಟನೆ</u> : <u>ಭೂಗೋಳ 'ಜಲಸಂಪನ್ಮೂಲಗಳು'</u>

<u>ಅಣೆಕಟ್ಟೆಗೆ ಭೇಟಿ :</u>

ಅನುಕೂಲಕಾರನು ಕ್ಷೇತ್ರದರ್ಶನ ಚಟುವಟಿಕೆಯನ್ನು ಸಂಬಂಧಪಟ್ಟ ಕ್ಷೇತ್ರಕ್ಕೆ ನಿಗದಿ ಪಡಿಸಿಕೊಂಡು ವಿದ್ಯಾರ್ಥಿಗಳಿಗೆ ಸ್ಥಳಗಳ ಆಯ್ಕೆ ಮಾಡಲು ಸೂಚಿಸುವುದು.

ಉದಾ: ವಿದ್ಯಾರ್ಥಿಗಳು ತಮ್ಮೂರಿನ ಸಮೀಪದಲ್ಲಿ ಇರುವ ಅಣೆಕಟ್ಟೆಗೆ ಭೇಟಿ ನೀಡಿ ಮಾಹಿತಿಯನ್ನು ಸಂಗ್ರಹಿಸಿಕೊಳ್ಳುವರು. ನಂತರ ತರಗತಿಯಲ್ಲಿ ಅನುಭವವನ್ನು ಹಂಚಿಕೊಂಡು ಜ್ಞಾನ ಕಟ್ಟಿಕೊಳ್ಳಲು, ಅನುಕೂಲಕಾರರು ಅವಕಾಶ ಕಲ್ಪಿಸುವುದು. ಅಣೆಕಟ್ಟುಗಳ ನಿರ್ಮಾಣ, ಉದ್ದೇಶ, ಉಪಯೋಗಗಳನ್ನು ಅರ್ಥೈಸಿಕೊಳ್ಳುವುದು.

ಈ ಚಟುವಟಿಕೆಯಲ್ಲಿ ಬಳಸಬಹುದಾದ

ತಂತ್ರ : ವೀಕ್ಷಣೆ

ವಿಧಾನ : ವೀಕ್ಷಣಾ ಸೂಚಿ

| ಕ್ರ. ಸಂ. | ವೀಕ್ಷಣಾ ಸೂಚಿ | ಹೌದು | ಇಲ್ಲ |
|---|---|---|---|
| 01 | ಕ್ಷೇತ್ರದರ್ಶನದ ಬಗ್ಗೆ ಜ್ಞಾನವಿದೆಯೇ? | | |
| 02 | ಅಣೆಕಟ್ಟೆಯನ್ನು ಎಲ್ಲಿ ಕಟ್ಟಿದ್ದಾರೆ? | | |
| 03 | ಅಣೆಕಟ್ಟೆನ್ನು ಯಾವ ನದಿಗೆ ಕಟ್ಟಿದ್ದಾರೆ? | | |
| 04 | ಅಣೆಕಟ್ಟೆ ನಿರ್ಮಿಸಿರುವ ಉದ್ದೇಶವೇನು? | | |
| 05 | ಆಣೆಕಟ್ಟೆಯನ್ನು ಯಾವಾಗ ಕಟ್ಟಿದರು? | | |
| 06 | ಅಣೆಕಟ್ಟನ್ನು ನಿರ್ಮಿಸಿದವರು ಯಾರು? | | |
| 07 | ಅಣೆಕಟ್ಟೆಯ ಪ್ರಯೋಜನಗಳೇನು? | | |
| 08 | ಅಣೆಕಟ್ಟೆ ವೀಕ್ಷಿಸಿದ ವರದಿ ಮಂಡಿಸುವ ಸಾಮರ್ಥ್ಯ ಹೊಂದಿದ್ದಾನೆಯೇ | | |
| 09 | ಅಣೆಕಟ್ಟೆ ಕ್ಷೇತ್ರದರ್ಶನದ ಅನುಭವದಿಂದ ಜಲಸಂಪನ್ಮೂಲಗಳ ಉಪಯೋಗ ಅರಿತುಕೊಂಡಿರುವನೇ? | | |

**1. ಸಂದರ್ಶನ ;**

**ಅರ್ಥ :** ಘಟಕಕ್ಕೆ ಪೂರಕವಾದ ಹೆಚ್ಚಿನ ಮಾಹಿತಿಯನ್ನು ಗಳಿಸಿಕೊಳ್ಳಲು ನಿರ್ದಿಷ್ಟ ಗುರಿಹೊಂದಿದ ಪ್ರಶ್ನಾವಳಿಗಳೊಂದಿಗೆ ವ್ಯಕ್ತಿ ಸಂಸ್ಥೆಯನ್ನು ಭೇಟಿ ಮಾಡಿ ಕಲಿಕೆಯನ್ನು ದೃಢೀಕರಿಸಿಕೊಳ್ಳುವ ಚಟುವಟಿಕೆಯ ರೂಪಕ್ಕೆ ಸಂದರ್ಶನ ಎನ್ನಬಹುದು.

**ಲಕ್ಷಣಗಳು :**

1. ನಿರ್ದಿಷ್ಟ ಪ್ರಶ್ನೆಗಳನ್ನು ಹೊಂದಿರುತ್ತದೆ.
2. ಪ್ರಶ್ನೆಗಳು ಸಂದರ್ಶಿಸುವ ವ್ಯಕ್ತಿಯ ಅನುಭವ ಮತ್ತು ವಿಷಯದ ವ್ಯಾಪ್ತಿಯ ಪರಿಧಿಯಲ್ಲಿ ಇರುತ್ತದೆ.
3. ಪ್ರಶ್ನೆಗಳು ಕ್ರಮಾನುಗತವಾಗಿರುತ್ತವೆ.
4. ಸಂದರ್ಶನ ಸಂದರ್ಭ ಮುಕ್ತ ವಾತಾವರಣವನ್ನು ಕಲ್ಪಿಸುವಂತಿರುತ್ತದೆ.
5. ಪರಿಪೂರ್ಣ ಕಲಿಕೆಗೆ ಅವಕಾಶ ಕಲ್ಪಿಸುವಂತಿರುತ್ತದೆ.
6. ಸಂದರ್ಶಿಸುವವನು ಪ್ರಶ್ನಿಸುವ ಮತ್ತು ಸರಿ ಉತ್ತರ ಪಡೆಯುವ ಸಾಮರ್ಥ್ಯವನ್ನು ಹೊಂದಿರುತ್ತಾನೆ.

**ಉದ್ದೇಶಗಳು :**

1. ಕಲಿಕಾ ವಿಷಯದ ಸಮಗ್ರ ಮಾಹಿತಿ ದೊರೆಯಬೇಕು
2. ಪ್ರಶ್ನೆಗಳು ಗೊಂದಲಗಳಿಂದ ಕೂಡಿರಬಾರದು
3. ಸಂದರ್ಶನಾಂಶಗಳನ್ನು ಸೂಕ್ತವಾಗಿ ದಾಖಲಿಸಿಕೊಂಡಿರಬೇಕು
4. ಸಂದರ್ಶನದ ಮಾಹಿತಿಯು ಕಲಿಕಾಂಶದೊಂದಿಗೆ ಅನುಪಾಲನೆಗೊಳ್ಳಬೇಕು.
5. ಸಂದರ್ಶನದ ಅನುಭವವನ್ನು ಹಂಚಿಕೊಳ್ಳುವುದರೊಂದಿಗೆ ಕಲಿಕೆಯನ್ನು ಖಾತ್ರಿಪಡಿಸಿಕೊಳ್ಳಬೇಕು.

**ಘಟಕದ ಆಯ್ಕೆ :** ಉದ್ಯಮಗಾರಿಕೆ : (ವ್ಯವಹಾರ ಅಧ್ಯಾಯ)

**ಪೂರ್ವಸಿದ್ಧತೆ :** ಅನುಕೂಲಕಾರರು ಸಂದರ್ಶನಕ್ಕೆ ಸಂಬಂಧಿಸಿದ ವಿಷಯದ ಆಯ್ಕೆಯನ್ನು ತರಗತಿಗೆ ಪ್ರಸ್ತುತ ಪಡಿಸುವುದು. ವಿಷಯಕ್ಕೆ ಸಂಬಂಧಿಸಿದಂತೆ ಸಂದರ್ಶನ ಸಮಯದ ಪ್ರಶ್ನಾವಳಿಗಳ ಸ್ವರೂಪವನ್ನು ತರಗತಿಯಲ್ಲಿ ಚರ್ಚಿಸುವುದು.

ಆ ಸಂದರ್ಶನದ ಹಿನ್ನೆಲೆಯಲ್ಲಿ ಕಲಿಕೆಗೆ ಸಂಬಂಧಿಸಿದಂತೆ ವಿದ್ಯಾರ್ಥಿ ಚರ್ಚಿಸಿ, ತೀರ್ಮಾನ ತೆಗೆದುಕೊಳ್ಳುವುದು.

ಉದಾ : ಜಿಲ್ಲಾ ಕೈಗಾರಿಕಾ ಕೇಂದ್ರಗಳ (ಸಂಸ್ಥೆ), ಗ್ರಾಮೀಣ ಉತ್ಪನ್ನ ಸಂಸ್ಥೆ, ಎಲ್‌ಐಸಿ ಸಂಸ್ಥೆ, ಡಾಕ್ಟರ್, ಸ್ಥಳೀಯ ಉದ್ದಿಮೆದಾರ ವ್ಯಕ್ತಿ, ಬ್ಯೂಟಿಪಾರ್ಲರ್, ಫೋಟೋಸ್ಟುಡಿಯೋ, ಶಾಮಿಯಾನ, ಬಾಡಿಗೆದಾರ.

* ಸಂದರ್ಶನಕ್ಕೊಳಪಡುವ ವ್ಯಕ್ತಿ ಅಥವಾ ಸಂಸ್ಥೆಯ ವಿಳಾಸದ ಮಾಹಿತಿಯನ್ನು ಸ್ಪಷ್ಟಪಡಿಸಿಕೊಳ್ಳುವುದು.
* ಸಂದರ್ಶನದ ಕಾಲಾವಧಿಯನ್ನು ನಿಗದಪಡಿಸುವುದು
* ಸಂದರ್ಶನದ ಮಹತ್ವದ ಅರಿವನ್ನು ವಿದ್ಯಾರ್ಥಿಗೆ ಮನವರಿಕೆ ಮಾಡುವುದು.
* ವಿದ್ಯಾರ್ಥಿಗಳು ಸಂದರ್ಶನ ವಿಷಯವನ್ನು ಆಸಕ್ತಿಯಿಂದ ತಿಳಿದುಕೊಳ್ಳುವುದು.
* ಸಂದರ್ಶಿಸಿ ಆಯ್ಕೆಗನುಗುಣವಾಗಿ ಪ್ರಶ್ನಾವಳಿಗಳನ್ನು ತಯಾರಿಸಿಕೊಳ್ಳುವರು.
* ತಮ್ಮ ಆಸಕ್ತಿ ಲಭ್ಯತೆಗನುಗುಣವಾಗಿ ಸಂದರ್ಶನ ವಿಷಯದ ವ್ಯಕ್ತಿ / ಸಂಸ್ಥೆಯನ್ನು ಆಯ್ಕೆ ಮಾಡಿಕೊಳ್ಳುವುದು.
* ತಮಗೆ ಸಾಧ್ಯವಾಗುವ ಸಂದರ್ಶನದ ವ್ಯಕ್ತಿ/ಸ್ಥಳದ ವಿಳಾಸದೊಂದಿಗೆ ನೀಡಲಾಗಿರುವ ಕಾಲಾವಧಿಯೊಳಗೆ ಪೂರೈಸಿಕೊಳ್ಳಲು ನಿರ್ಧಾರವನ್ನು ತೆಗೆದು ಕೊಳ್ಳುವರು.
* ಸಂದರ್ಶನದ ಮಹತ್ವ ಕಲಿಕೆಯ ಪರಿಣಾಮದ ಅರಿವನ್ನು ಕುರಿತಂತೆ ಕುತೂಹಲ ಗೊಳ್ಳುವರು.

(ತೊಡಗಿಸಿಕೊಳ್ಳುವಿಕೆ : ಕಾರ್ಯತತ್ವತೆ ಪ್ರವೃತ್ತಿ)

ತರಗತಿ ಕೋಣೆಯಲ್ಲಿ ಚರ್ಚಿಸಲು ತೆಗೆದುಕೊಂಡ ತೀರ್ಮಾನದಂತೆ, ವಿದ್ಯಾರ್ಥಿಗಳು ಸಂಬಂಧಿಸಿದವರನ್ನು ಸಂದರ್ಶಿಸಿ, ಸೂಚನೆಗಳ ಅನ್ವಯ ಘಟಕಕ್ಕೆ ಪೂರಕವಾದ ಜ್ಞಾನವನ್ನು ಕಟ್ಟಿಕೊಳ್ಳುವರು.

ಉದಾ: 1. ಪರಿಚಯಾತ್ಮಕ ಪ್ರಶ್ನೆಗಳು

ಉದಾ: ಸಂದರ್ಶಕನು ತನ್ನ ಪರಿಚಯದೊಂದಿಗೆ ಸಂದರ್ಶಿಸುವರ ಪರಿಚಯ ಮಾಡಿಕೊಳ್ಳುವರು.

2. ವಿಷಯಾಧಾರಿತ ಪ್ರಶ್ನೆಗಳು:

ಉದಾ: ವ್ಯಕ್ತಿ

1. ನಿಮಗೆ ಈ ಉದ್ದಿಮೆಯಲ್ಲಿ ಆಸಕ್ತಿ ಮಾಡಲು ಕಾರಣವೇನು?

2. ನಿಮಗೆ ಈ ಉದ್ದಿಮೆಯಲ್ಲಿ ಆಸಕ್ತಿ ಮಾಡಲು ಕಾರಣವೇನು?

3. ಈ ಉದ್ದಿಮೆಯನ್ನು ಹೇಗೆ ಪ್ರಾರಂಭಿಸಿದಿರಿ?

4. ಈ ಉದ್ದಿಮೆಯ ಪ್ರಾರಂಭ ಅವಧಿಯ ನಿಮ್ಮ ಅನುಭವವೇನು?

5. ನಿಮ್ಮ ಉದ್ದಿಮೆ ಹೇಗಿದೆ?

6. ಉದ್ದಿಮೆ ಅಭಿವೃದ್ಧಿಯಲ್ಲಿನ ನಿಮ್ಮ ಪಾತ್ರವೇನು?

7. ಉದ್ದಿಮೆದಾರರಾಗಿ ನೀವು ಮಾರುಕಟ್ಟೆಯ ಪ್ರಾಬಲ್ಯವನ್ನು ಸಾಧಿಸಲು ಬಳಸುತ್ತಿರುವ ತಂತ್ರೋಪಾಯಗಳೇನು?

8. ನಿಮ್ಮ ಹೆಸರು ಯಶಸ್ಸು ಉದ್ದಿಮೆದಾರರ ಪಟ್ಟಿಯಲ್ಲಿ ಸೇರಿರಲು / ಸೇರಲು ನಿಮ್ಮ ಪ್ರಯತ್ನವೇನು?

9. ಈ ಸಂದರ್ಶನದ ಬಗ್ಗೆ ನಿಮ್ಮ ಅಭಿಪ್ರಾಯವೇನು? ಸಂದರ್ಶನ ಮುಕ್ತಾಯ...

**ಮೌಲ್ಯಮಾಪನ :**

ವಿದ್ಯಾರ್ಥಿಗಳು ಸಂದರ್ಶಿಸಿ ಪಡೆದ ಘಟಕದ ಕಲಿಕೆಯ ಮಾಹಿತಿಯನ್ನು ಕ್ರಮಬದ್ಧವಾಗಿ ಜೋಡಿಸಿಕೊಂಡು ತರಗತಿ ಕೋಣೆಯಲ್ಲಿ ಅನುಕೂಲಕಾರರ ಮಾರ್ಗ ದರ್ಶನದಂತೆ ಅನುಭವವನ್ನು ಹಂಚಿಕೊಂಡು ಪಡೆದ ಜ್ಞಾನವನ್ನು ಖಾತ್ರಿ ಪಡಿಸಿಕೊಳ್ಳುವರು.

(ಅನುಕೂಲಕಾರರ ಮೌಲ್ಯಮಾಪನ ಹಂತದ ಮಾರ್ಗದರ್ಶನವು ಕಲಿಕಾಂಶಗಳ ಪರಸ್ಪರ ಹಂಚಿಕೆಗೆ ಅನುವು ಮಾಡುವಂತಿರಲಿ. ಉದಾ: ವಿದ್ಯಾರ್ಥಿಗಳಿಗೆ ಅನುಭವ ಹಂಚಿಕೆಗೆ ಅವಕಾಶ. ಎನ್‌ಸಿಎಫ್ ಮತ್ತು ಸಿಸಿಇನ ಚೌಕಟ್ಟಿನೊಳಗೆ ವಿಷಯವನ್ನು ಮನನ ಮಾಡಿಸುವುದು.)

**ಚಟುವಟಿಕೆ –2**

**ಸಂಗ್ರಹ :**

ಅರ್ಥ: ಘಟಕಕ್ಕೆ ಸಂಬಂಧಿಸಿದಂತೆ ಪರಿಣಾಮಕಾರಿ ಕಲಿಕೆಯ ಸಂದರ್ಭಕ್ಕಾಗಿ ಪೂರಕ ಮಾಹಿತಿ, ಚಿತ್ರ, ವಸ್ತುಗಳು ಮಾದರಿಗಳು, ಗೀತೆಗಳು, ತೀರ್ಪುಗಳೂ, ಭಾಷಣಗಳು,

ಸಾಹಿತ್ಯಾಂಶಗಳನ್ನು ಇನ್ನಿತರ ಅಂಶಗಳನ್ನು ವಿವಿಧ ಮೂಲಗಳಿಂದ ಕ್ರೋಢೀಕರಿಸುವ ಕಲಿಕಾ ಚಟುವಟಿಕೆ 'ಸಂಗ್ರಹ' ಎನ್ನಬಹುದು.

**ಲಕ್ಷಣಗಳು** :

1. ಸಂಗ್ರಹಿಸಲ್ಪಟ್ಟ ಅಂಶಗಳು
2. ಸಂಗ್ರಹಾಂಶ ನಿಖರತೆಯ ಜ್ಞಾನವನ್ನು ನೀಡುವಂತಿರುತ್ತದೆ
3. ಸಂಗ್ರಹಾಂಶಗಳು ಸುಲಭವಾಗಿ ದೊರೆಯುವಂತಿರಬೇಕು.
4. ಸೃಜನಶೀಲತೆಯನ್ನು ಪ್ರತಿಬಿಂಬಿಸುತ್ತವೆ.
5. ಜ್ಞಾನವಾಹಿನಿಯ ಸಂಕೇತವಾಗಿ ಮೂಡುತ್ತದೆ.

**ಉದ್ದೇಶಗಳು** :

1. ವಿದ್ಯಾರ್ಥಿಗಳ ಸೃಜನ ಶೀಲತೆಯನ್ನು ಬೆಳೆಸುವಂತಿರಬೇಕು.
2. ಚಿಂತನೆ, ಹೋಲಿಕೆ, ವ್ಯತ್ಯಾಸ ಇವುಗಳಿಗೆ ಉತ್ತರವನ್ನು ಕಂಡುಕೊಳ್ಳುತ್ತಿರಬೇಕು.
3. ಜ್ಞಾನವರ್ಧನೆಗೆ ಪ್ರೇರಣೆ ನೀಡುವಂತಿರಬೇಕು.
4. ಮೌಲ್ಯಗಳಿಗೆ ಹೆಚ್ಚು ಆದ್ಯತೆಯನ್ನು ಕಲ್ಪಿಸುವಂತಿರಲಿ.
5. ಕುತೂಹಲ, ಆಸಕ್ತಿ, ಅನ್ವಯದ, ಕಲಿಕಾ ಸಾಮರ್ಥ್ಯಗಳ ವಿಕಾಸಕ್ಕೆ ಇಂಬು ನೀಡುವಂತಿರಲಿ .

ಈ ಚಟುವಟಿಕೆ ಆಯ್ಕೆ ಮಾಡಿಕೊಳ್ಳಬಹುದಾದ ಘಟಕಗಳು.

**1. ಇತಿಹಾಸ :** ಸ್ವಾತಂತ್ರ್ಯ ಹೋರಾಟ, ಜನಪದ ಚರಿತ್ರೆ

ಉದಾ : ಸ್ವಾತಂತ್ರ್ಯ ಹೋರಾಟಗಾರ ಜೀವನ ಚರಿತ್ರೆ ಸಂಗ್ರಹ

ಸಾಮಾಜಿಕ ಧಾರ್ಮಿಕ ಸುಧಾರಣೆ ಚಳುವಳಿಗಳು

**ರಾಜ್ಯಶಾಸ್ತ್ರ:** ಭಾರತದ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳು.

ಉದಾ: ಭ್ರಷ್ಟಾಚಾರ ವಿರೋಧಿ ಲೇಖನಗಳ ಸಂಗ್ರಹ

**ಭೂಗೋಳ:** ಭಾರತದ ಮಣ್ಣುಗಳು

ಉದಾ: ವಿವಿಧ ರೂಪದ ಮಣ್ಣುಗಳ ಸಂಗ್ರಹ

**ಅರ್ಥಶಾಸ್ತ್ರ:** ಅಭಿವೃದ್ಧಿ ವಿಶ್ವಸಂಸ್ಥೆ ಪ್ರಕಟಿಸಿರುವ

ಉದಾ: 1. ಮಾನವ  ವಿಕಾಸದ ಹಿನ್ನಲೆಯ ಅಭಿವೃದ್ಧಿ ಸೂಚಿಗೆ ಸಂಬಂಧಿಸಿದ ವರದಿಗಳ ಸಂಗ್ರಹ

* ಸಾರ್ವಜನಿಕ ಹಣಕಾಸು ಮತ್ತು ಆಯವ್ಯಯ ಗ್ರಾಮ / ತಾಲ್ಲೂಕು / ರಾಜ್ಯ / ಕೇಂದ್ರ

  ಸರ್ಕಾರದ ಕಳೆದ ವರ್ಷದ ಆಯವ್ಯ (ಖರ್ಚು) ಮಂಡನೆ ಕುರಿತ ಮಾಹಿತಿ ಸಂಗ್ರಹ.

**ವ್ಯವಹಾರ ಅಧ್ಯಯನ :**

* ಬ್ಯಾಂಕ್ ವ್ಯವಹಾರಗಳು

  ಉದಾ: ಚೆಕ್, ಡ್ರಾಫ್ಟ್, ವಿವಿಧ ಖಾತೆ, ಪಾಸ್‌ಬುಕ್, ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡುಗಳ ಸಂಗ್ರಹ

* ವಿಮೆ : ಪಾಲಿಸಿಗಳ ನಕಲು ಪ್ರತಿಸಂಗ್ರಹ.

## ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಪರಿಕಲ್ಪನೆ

### ಅನುಷ್ಠಾನ ಹಾಗೂ ದಾಖಲೆಗಳ ನಿರ್ವಹಣೆ

**ಪರಿಕಲ್ಪನೆ :**

ಕಲಿಕೆಯ ಸಂದರ್ಭದಲ್ಲಿ ಕಲಿಕೆಯ ಫಲಿತವನ್ನು ಕಂಡಕೊಳ್ಳಲು ಹೊಸ ಶಿಕ್ಷಣ ಕ್ರಮದ ಚೌಕಟ್ಟಿನಲ್ಲಿ ವಿನೂತನವಾದ ಮೌಲ್ಯ ಮಾಪನ ಪ್ರಕ್ರಿಯೆಯನ್ನು ಬಳಸಲಾಗುತ್ತಿದೆ.

ಈ ಹಿನ್ನಲೆಯಲ್ಲಿ ಕಲಿಕೆಯನ್ನು ನಿರಂತರವಾಗಿ ಮೌಲ್ಯಮಾಪನಕ್ಕೆ ಒಳಪಡಿಸಿ, ಮಗುವಿನ ಸಮಗ್ರ ವಿಕಾಸದ ಹಂತವನ್ನು ಅನುಕೂಲವಾಗುತ್ತಿರುವ ನೂತನ ಮೌಲ್ಯಮಾಪನ ಪ್ರಕ್ರಿಯೆಯೇ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವಾಗಿದೆ. (ಹೆಚ್ಚಿನ ಮಾಹಿತಿಗಾಗಿ ಸಾಧನ ಅವಲೋಕನ)

ಮೊದಲಿಗೆ, ನಿರಂತರ ಮೌಲ್ಯ/ಮಾಪನವೆಂದರೆ, ಮಗುವಿನ ಪ್ರತಿದಿನದ ಕಲಿಕೆಯಲ್ಲಿನ ಬೆಳವಣಿಗೆ ಹಾಗೂ ಅಭಿವೃದ್ಧಿಯನ್ನು ವರ್ತನೆಗಳ ಹಿನ್ನಲೆಯೂ ವ್ಯಕ್ತಿತ್ವದ ವಿಕಸನವನ್ನು ಕುರಿತಂತೆ ಅನುಕೂಲಕಾರನು ಸಹಜವಾಗಿ ಸದಾ ಮೌಲ್ಯಮಾಪನಕ್ಕೆ ಒಳಪಡಿಸುವ ಪ್ರಕ್ರಿಯೆಯನ್ನು ನಿರಂತರ ಮೌಲ್ಯಮಾಪನ ಎನ್ನುತ್ತೇವೆ.

ಉದಾ: ಸ್ವಾಮಿ ವಿವೇಕಾನಂದ (ಘಟಕ : ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು) ಜೀವನದ ಮೌಲ್ಯಗಳನ್ನು ಅಭ್ಯಾಸಿದ ಮಗು ತನ್ನೊಳಗೆ ಸರ್ವಧರ್ಮ ಸಹಿಷ್ಣುತೆ, ವಿಶ್ವಭಾತೃತ್ವ, ಸೇವಾಮನೋಭಾವ, ದುಡಿಮೆಯ ಮಹತ್ವ, ಸಂಸ್ಕೃತಿಯ ಹಿರಿಮೆಯನ್ನು ವ್ಯಕ್ತಿತ್ವದ ವಿಕಸನದಲ್ಲಿ ಹಿನ್ನಲೆಯಲ್ಲಿ ತನ್ನ ವರ್ತನೆಗಳೊಂದಿಗೆ (ನಿತ್ಯ ಜೀವನದಲ್ಲಿ) ಹೇಗೆ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಕಂಡುಕೊಂಡಿದೆ ಎಂಬುದನ್ನು ತಂತ್ರ–ಸಾಧನಗಳ ಮೂಲಕ ಸಂಬಂಧೀಕರಿಸುವುದು.

ವ್ಯಾಪಕ ಮೌಲ್ಯಮಾಪನ ಎಂದರೆ, ಮಗುವಿನ ಪಠ್ಯ, ಸಹಪಠ್ಯ ಹಾಗೂ ಸಹಜವರ್ತನಾ ಕ್ಷೇತ್ರಗಳಲ್ಲಿನ ಕಲಿಕೆಯನ್ನು ಸಮಗ್ರವಾಗಿ ಕ್ಷೇತ್ರವಾರು ತಂತ್ರ, ಸಾಧನಗಳ

ಮೂಲಕ ಸಂಬಂಧಪಟ್ಟ ಅನುಕೂಲಕಾರನು ಬಳಸಿಕೊಳ್ಳಬಹುದಾದ ಮೌಲ್ಯಮಾಪನ ಪ್ರಕ್ರಿಯೆಗೆ ವ್ಯಾಪಕ ಮೌಲ್ಯ ಮಾಪನ ಎನ್ನುತ್ತೇವೆ.

ಉದಾ: ಪಠ್ಯ: ಜನಪದ ಚರಿತ್ರೆ (ಘಟಕ) ಜನಪದ ಚರಿತ್ರೆಯನ್ನು ಅರ್ಥೈಸಿಕೊಂಡ ಮಗು ಕಟ್ಟಿಕೊಂಡಿರುವ ಜ್ಞಾನವನ್ನು ಮೌಖಿಕ ಪರೀಕ್ಷೆ(ತಂತ್ರ), ಪ್ರಶ್ನಾವಳಿ ಸಾಧನ ಮೂಲಕ ಕಲಿತ ಪಠ್ಯವನ್ನು ಖಾತ್ರಿ ಮಾಡಿಕೊಳ್ಳಲು ಅನುಕೂಲಕರ ಮೌಲ್ಯಮಾಪನಕ್ಕೆ ಒಳಪಡಿಸುವುದು.

**ಸಹಪಠ್ಯ : ಸಂಗೀತ (ಕ್ಷೇತ್ರ ಸ್ವರಜ್ಞಾನ)**

ಮಗುವಿನ ಸ್ವರ ಜ್ಞಾನವನ್ನು ಅರಿತುಕೊಳ್ಳಲು ಅನುಕೂಲಕಾರನು ಅವಲೋಕನ (ತಂತ್ರ)ದ ಮೂಲಕ, ಅವಲೋಕನ ತಪಶೀಲುಪಟ್ಟಿ (ಸಾಧನ) ವನ್ನು ಬಳಸಿ ಮೌಲ್ಯಮಾಪನಕ್ಕೆ ಒಳಪಡಿಸುವುದು.

**ಸಹಜವರ್ತನೆ:**

ಹೊಸ ಶಿಕ್ಷಣ ಕ್ರಮಕ್ಕೆ ಹೊಂದಿಕೊಂಡತೆ ಎನ್.ಸಿ.ಎಫ್.ನ ಆಶಯಗಳು ಹಾಗೂ ಸಿ.ಸಿ.ಇ.ನ ಉದ್ದೇಶಗಳು ಘಟಕದ ಮೂಲಕ ಮಗುವಿನ ಸಹಜ ವರ್ತನೆಗಳಲ್ಲಿನ ವಿಕಾಸ ವನ್ನು ಬಹಳ ಮುಖ್ಯವಾಗಿ ಬಯಸುತ್ತದೆ. ಈ ಹಿನ್ನಲೆಯಲ್ಲಿಯೇ ಅನುಕೂಲಕಾರರು ಮಗು ವಿನ ಸಹಜವರ್ತನೆಗಳ ನಿಖರತೆಗಾಗಿ ಮೌಲ್ಯಮಾಪನದಲ್ಲಿ ಹೆಚ್ಚಿನ ಆದ್ಯತೆಯನ್ನು ಕ್ಷೇತ್ರವಾರು ನೀಡಲೇಬೇಕು.

ಕ್ಷೇತ್ರ : ಜವಾಬ್ದಾರಿ : ಬಾಲಕಾರ್ಮಿಕ ಸಮಸ್ಯೆಯ ಪರಿಣಾಮವನ್ನು ಅರ್ಥೈಸಿಕೊಂಡ ಮಗು, ಕಟ್ಟಿಕೊಂಡಿರುವ ಜ್ಞಾನವನ್ನು ತನ್ನ ಜೀವನಾವಶ್ಯಕತೆಗೆ ಹೇಗೆ ಅಳವಡಿಸಿಕೊಂಡಿದೆ ಎಂಬುದನ್ನು ಮೌಲ್ಯಮಾಪನಕ್ಕೆ ಒಳಪಡಿಸುವುದು, ಸ್ವ ಅವಲೋಕನ ತಂತ್ರದ ಮೂಲಕ ಸ್ವ ಅವಲೋಕನ ತಪಶೀಲು ಪಟ್ಟಿ ಸಾಧನದ ಮೂಲಕ, ಮೌಲ್ಯಮಾಪನಕ್ಕೆ ಒಳಪಡಿಸಿಕೊಳ್ಳುವುದು.

'ತಪಶೀಲು ಪಟ್ಟಿ' (ಸ್ವ ಅವಲೋಕನ)

<u>ಮಾದರಿ :</u>

| | |
|---|---|
| 1. ನಾನು ಬಾಲಕಾರ್ಮಿಕರನ್ನು ಗುರುತಿಸಬಲ್ಲೆನೆ. | ಹೌದು/ ಇಲ್ಲ |
| 2.ಬಾಲ ಕಾರ್ಮಿಕ ಪದ್ಧತಿ ಆತಂಕಕಾರಿಯೇ | ಹೌದು/ ಇಲ್ಲ |
| 3. ನನ್ನ ಸುತ್ತ ಬಾಲಕಾಮಿಕರಿರುವರೇ | ಹೌದು/ ಇಲ್ಲ |
| 4. ಬಾಲ ಕಾರ್ಮಿಕರ ಪದ್ಧತಿಯನ್ನು ತಡೆಯುವ ಸಾಮರ್ಥ್ಯ ನನಗಿದೆಯೇ? | ಹೌದು/ ಇಲ್ಲ |
| 5. ಬಾಲ ಕಾರ್ಮಿಕರನ್ನು ತಡೆಯುವ ಪ್ರಯತ್ನ ನನ್ನಿಂದ ಆಗಿದೆಯೇ | ಹೌದು/ ಇಲ್ಲ |

ಈ ರೂಪದಲ್ಲೂ ಮಗುವಿನ ಜವಾಬ್ದಾರಿ ಕ್ಷೇತ್ರದ ಅರಿವಿನ ಮೌಲ್ಯಮಾಪನಕ್ಕೆ ವಿಭಿನ್ನ ವಿಧಾನಗಳಿರುವುದು ಅನುಕೂಲಕಾರ ತನ್ನ ಸಾಮರ್ಥ್ಯವಾರು ಅನುಸರಿಸಬಹುದು.

ಹೀಗೆ ನಿರಂತರ ಮತ್ತು ವ್ಯಾಪಕ ಮೌಲ್ಯ ಮಾಪನದ ಪರಿಕಲ್ಪನೆಯನ್ನು ಅರ್ಥೈಸಿ ಕೊಳ್ಳಬಹುದು. ಜೊತೆಗೆ ಇನ್ನಷ್ಟು ಉದಾಹರಣೆಗಳನ್ನು ಕಲಿವಿನ ವಿಧಾನ, ಚಟುವಟಿಕೆ ಗಳಲ್ಲೂ ಪೂರಕ ಮಾಹಿತಿಯನ್ನು ನೀಡಲಾಗಿದೆ.

## ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಅನುಪ್ರಧಾನ:

ಎನ್‌ಸಿಎಫ್ 2005ರ ಆಶಯದಂತೆ, ಸಿಸಿಇ 2009ರ ಉದ್ದೇಶಗಳನ್ನು ತರಗತಿಯ ಕೋಣೆಯಲ್ಲಿ ಕಡ್ಡಾಯವಾಗಿ ಅನುಷ್ಠಾನಗೊಳಿಸುವುದು ಅನುಕೂಲಕಾರರ ಈಗಿನ ಆದ್ಯತೆಯಾಗಿದೆ. ಈ ಹಿನ್ನೆಲೆಯಲ್ಲಿ ಸಮಾಜ ವಿಜ್ಞಾನ ಅನುಕೂಲಕಾರನೊಬ್ಬ ತನ್ನ ತರಗತಿಯ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು ಈ ಕೆಳಕಂಡಂತೆ ವಿಭಾಗವಾಗು ನೀಡಲಾಗಿರುವ ಘಟಕಗಳ ಅನ್ವಯ ಸಿ.ಸಿ.ಇ.ಯನ್ನು ಹೇಗೆ ಅನುಷ್ಠಾನಗೊಳಿಸಿಕೊಳ್ಳಬಹುದು ಎಂಬುದನ್ನು ಮಾದರಿಯಾಗಿ ನೀಡಲಾಗಿದೆ.

ವಿಭಾಗ : ಇತಿಹಾಸ

ಘಟಕ : ಬ್ರಿಟಿಷ್ ಆಡಳಿತದ ಬುನಾದಿ ಹಾಗೂ ಅದರ ಪರಿಣಾಮಗಳು

ಕಲಿವಿನ ವಿಧಾನ : ಘಟಕ ಪದ್ಧತಿ

ಬಳಸಬಹುದಾದ ಚಟುವಟಿಕೆ : ಗುಂಪುಚರ್ಚೆ

ಪ್ರಸ್ತುತ ಘಟಕಕ್ಕೆ ಸಂಬಂಧಿಸಿದಂತೆ, ಅನುಕೂಲಕಾರನು ಮೌಲ್ಯಮಾಪನ ಮಾಡುವಾಗ ಕಲಿವಿನ ವಿಧಾನವನ್ನು ಒಳಗೊಂಡಂತೆ ನೀಡಿದ ಚಟುವಟಿಕೆಯಲ್ಲಿನ ಕಲಿಕಾರ್ಥಿಗಳ ಪಠ್ಯ ಆಧಾರಿತವಾದ ಜ್ಞಾನವನ್ನು ಮೌಲ್ಯಮಾಪನ ಮಾಡಲು, ಚರ್ಚೆ, ಪ್ರಶ್ನಾವಳಿ, ಮಿಂಚುಪಟ್ಟಿ, ನಕ್ಷೆ, ಚಾರ್ಟ್ ಪಟ್ಟಿ ಮಾಡುವಿಕೆ, ಇತ್ಯಾದಿ ಸೂಚಕಗಳಂತೆ ಘಟಕಾಧಾರಿತ ಜ್ಞಾನವನ್ನು ಪರಸ್ಪರ ಚರ್ಚೆಯೊಂದಿಗೆ ಅರ್ಥೈಸಿಕೊಳ್ಳುವರು.

ಇದರ ಜೊತೆಗೆ ಘಟಕಕ್ಕೆ ಸಂಬಂಧಿಸಿದಂತೆ ನೀಡಿದ ಚಟುವಟಿಕೆಯ ಭಾವನಾತ್ಮಕ ವಲಯ (ಆಸಕ್ತಿ, ಕೌಶಲ್ಯ, ಮೌಲ್ಯಗಳು, ಮನೋಧೋರಣೆ)ವನ್ನು ಮೌಲ್ಯಮಾಪನಕ್ಕೆ ಅನುಕೂಲಕಾರ ಒಳಪಡಿಸುವುದು ಅಗತ್ಯವಾಗಿರುತ್ತದೆ.

ಅಂದರೆ 'ಆಸಕ್ತಿ'ಗೆ ಸಂಬಂಧಿಸಿದಂತೆ ನೀಡಿದ ಗುಂಪು ಚರ್ಚೆಯಲ್ಲಿ 'ಮಗುವಿನ ಪಾಲ್ಗೊಳ್ಳುವಿಕೆಯನ್ನು' ಮೌಲ್ಯಮಾಡುವುದು.

ಹಾಗೆಯೇ 'ಕೌಶಲ್ಯ'ಕ್ಕೆ ಸಂಬಂಧಿಸಿದಂತೆ ಘಟಕದ ಹಿನ್ನಲೆಯೊಂದಿಗೆ ಭಾರತದ ಭೂಪಟದಲ್ಲಿ ಮರಾಠ ಪ್ರಾಂತ್ಯ, ಮೈಸೂರು ಪ್ರಾಂತ್ಯ, ಪಂಜಾಬರ ಪ್ರಾಂತ್ಯ ಇತ್ಯಾದಿಗಳನ್ನು 'ಗುರುತಿಸುವುದು' ವನ್ನು ಮೌಲ್ಯಮಾಪನಕ್ಕೆ ಒಳಪಡಿಸಬೇಕು.

'ಮೌಲ್ಯಗಳಿಗೆ ಸಂಬಂಧಿಸಿದಂತೆ ದೇಶಪ್ರೇಮ'ವನ್ನು ಖಾತ್ರಿಪಡಿಸಿಕೊಳ್ಳುವ ಮೌಲ್ಯಮಾಪನಕ್ಕಾಗಿ ಗೃಹಪಾಠ ನೀಡುವುದು.

ಉದಾ: ದೇಶಪ್ರೇಮವನ್ನು ಕುರಿತಂತೆ ನಿನ್ನ ನಿರ್ಧಾರಗಳೇನು? ಭಾರತಕ್ಕೆ ಸೈನ್ಯಕ್ಕೆ ಸೇರಲು ನಿನ್ನ ಅಭಿಪ್ರಾಯ ಏಕೆ? ವಿವರಿಸಿರಿ.

'ಮನೋಧೋರಣೆ' ಸಂಬಂಧಿಸಿದಂತೆ ಪ್ರತಿ ಮಗುವಿನ ಕಾಳಜಿಯನ್ನು ಮೌಲ್ಯ ಮಾಪನಕ್ಕೆ ಈ ಮುಂದಿನ ಉದಾಹರಣೆಯಂತೆ ಮೌಲ್ಯಮಾಪನಕ್ಕೆ ಒಳಪಡಿಸಬಹುದು.

ಉದಾ: ಭಾರತದ ನೈಸರ್ಗಿಕ ಸಂಪತ್ತನ್ನು ಸಂರಕ್ಷಿಸಲು ನಿಮ್ಮ ಸಲಹೆಗಳನ್ನು ಕುರಿತಂತೆ ಪ್ರಬಂಧ ರಚನೆ.

**ಬಳಸಬಹುದಾದ ತಂತ್ರ ಮತ್ತು ಸಾಧನಗಳು**

ತಂತ್ರ : ಸಾಧನ

ಅವಲೋಕನ : ಸ್ವಅವಲೋಕನ ತಪಶೀಲು ಪಟ್ಟಿ (ವಿದ್ಯಾರ್ಥಿ)

* ಸಹಾಯಕ ಸೈನ್ಯ ಪದ್ಧತಿಯ ಬಗ್ಗೆ ತಿಳಿದುಕೊಂಡಿದ್ದೇನೆಯೇ? ಹೌದು/ಇಲ್ಲ
* ಆಂಗ್ಲೇ ಮರಾಠಿ ಯುದ್ಧಗಳ ಕಾರಣ ಪರಿಣಾಮಗಳನ್ನು ಅರ್ಥೈಸಿಕೊಂಡಿದ್ದೇನೆಯೇ? ಹೌದು/ಇಲ್ಲ
* ಗುಂಪಿನ ಚರ್ಚೆಯಲ್ಲಿ ಸಹಜವಾಗಿ ಪಾಲ್ಗೊಳ್ಳುತ್ತಿದ್ದೇನೆಯೇ? ಹೌದು/ಇಲ್ಲ
* ಘಟಕದಲ್ಲಿನ ಸ್ಥಳಗಳನ್ನು ಗುರುತಿಸುವ ಕೌಶಲ್ಯವನ್ನು ಪಡೆದಿದ್ದೇನೆಯೇ? ಹೌದು/ಇಲ್ಲ
* ಕಾನೂನುಗಳನ್ನು ಪರಿಪಾಲಿಸುವ ಕಾಳಜಿಯನ್ನು ಹೊಂದಿದ್ದೇನೆಯೇ? ಹೌದು/ಇಲ್ಲ

**ಶಿಕ್ಷಕರ ತಪಶೀಲು ಪಟ್ಟಿ**

* ಆಯ್ಕೆ ಮರಾಠ ಸಿಖ್ ಯುದ್ಧಗಳನ್ನು ವಿಶ್ಲೇಷಿಸುವ ಸಾಮರ್ಥ್ಯವನ್ನು ಪಡೆದಿರುತ್ತಾರೆಯೇ ಹೌದು/ಇಲ್ಲ
* ವ್ಯಾಪಾರಿ ಬಂಡವಾಳದ ಶಾಹಿತ್ವದ ಅರ್ಥವನ್ನು ತಿಳಿದಿದ್ದಾರೆಯೇ? ಹೌದು/ಇಲ್ಲ
* ವ್ಯಾಪಾರಿ ಬಂಡವಾಳ ಮತ್ತು ಕೈಗಾರಿಕಾ ಬಂಡವಾಳಗಳ ವ್ಯತ್ಯಾಸಗಳನ್ನು ಪಟ್ಟಿ ಮಾಡಲು ಸಮರ್ಥರಾಗಿದ್ದಾರೆಯೇ? ಹೌದು/ಇಲ್ಲ

* ಬ್ರಿಟೀಷ್ ವಸಾಹತು ಶಾಹಿತ್ವ ಭಾರತ ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆಯ ಮೇಲೆ ಬೀರಿದ ಪರಿಣಾಮಗಳ ಅರಿವಿದೆಯೇ? ಹೌದು/ಇಲ್ಲ

* ಬ್ರಿಟೀಷರ ಕಾನೂನುಗಳು, ಭಾರತೀಯರನ್ನು ಮಣಿಸುವಲ್ಲಿ ಹೇಗೆ ಯಶಸ್ವಿಯಾದವು ಎಂಬುದನ್ನು ವಿಶ್ಲೇಷಿಸಬಲ್ಲನೆ? ಹೌದು/ಇಲ್ಲ

* ಗುಂಪುಚರ್ಚೆ ಸನ್ನಿವೇಶದ ಬಗ್ಗೆ ಜ್ಞಾನವಿದೆಯೇ? ಹೌದು/ಇಲ್ಲ

* ಚರ್ಚೆಯಲ್ಲಿ ತರಗತಿಯ ಎಲ್ಲಾ ಮಕ್ಕಳು ಸಕ್ರಿಯವಾಗಿ ಭಾಗವಹಿಸಿದ್ದಾರೆಯೇ(ಆಸಕ್ತಿ)? ಹೌದು/ಇಲ್ಲ

* ಕೈಗಾರಿಕಾ ಬಂಡವಾಳದಿಂದಾಗಿ ಭಾರತೀಯ ಅರ್ಥವ್ಯವಸ್ಥೆ ಹೇಗೆ ಶೋಚನೀಯ ಸ್ಥಿತಿಯನ್ನು ತಲುಪಿತು ಎಂಬುದನ್ನು ತಾರ್ಕಿಕ (ಕೌಶಲ್ಯ)ವಾಗಿ ಅರ್ಥೈಸುತ್ತಾರೆಯೇ? ಹೌದು/ಇ

* ಭಾರತೀಯತೆಯನ್ನು ಹೆಮ್ಮೆಯಿಂದ ಸ್ವೀಕರಿಸಿದ್ದಾರೆಯೆ? (ಮೌಲ್ಯ) ಹೌದು/ಇಲ್ಲ

* ನಾಯಕತ್ವದ ಗುಣಗಳನ್ನು ಪ್ರದರ್ಶಿಸುತ್ತಾರೆಯೇ? ಹೌದು/ಇಲ್ಲ

**ಉಪಸಂಹಾರ :** ಹೀಗೆ ಪ್ರಸ್ತುತ ಘಟಕಕ್ಕೆ ಸಂಬಂಧಿಸಿದಂತೆ ಬಳಸಲ್ಪಟ್ಟ ಕಲಿವಿನ ವಿಧಾನ ಹಾಗೂ ಚಟುವಟಿಕೆಯ ಹಿನ್ನಲೆಯಲ್ಲಿ ಅನುಕೂಲಕಾರನು ಮೌಲ್ಯಮಾಪನವನ್ನು ಕೈಗೊಂಡು, ಪಠ್ಯ ಮತ್ತು ಪೂರಕವಾದ ಸಹಜ ವರ್ತನೆಗಳಲ್ಲಿ ಕಲಿಕಾರ್ಥಿ ಮನನ ಮಾಡಿಕೊಂಡ ಜ್ಞಾನವನ್ನು ಖಾತ್ರಿಪಡಿಸಿಕೊಳ್ಳಬೇಕಾಗುತ್ತದೆ.

ವಿಭಾಗ : ರಾಜ್ಯಶಾಸ್ತ್ರ

ಘಟಕ : ಅಧ್ಯಾಯ – 2

## ಭಾರತದ ವಿದೇಶಾಂಗ ನೀತಿ

**ಕಲಿವಿನ ವಿಧಾನ : ಪಠ್ಯಪುಸ್ತಕ ಅವಲೋಕನ ವಿಧಾನ**

**ಬಳಸಿದ ಚಟುವಟಿಕೆ : ಅವಲೋಕನ**

ಪ್ರಸ್ತುತ ಘಟಕಕ್ಕೆ ಸಂಬಂಧಿಸಿದಂತೆ ತನ್ನ ತರಗತಿಯ ಕಲಿಕಾರ್ಥಿಗಳು ಕಲಿವನ್ನು ಪಡೆಯಲು ಅನುಕೂಲಕಾರನ ನಿರ್ದೇಶನದಂತೆ ಪಠ್ಯಪುಸ್ತಕವನ್ನು, ಓದುವ, ಪ್ರಶ್ನಿಸುವ, ಗ್ರಹಿಸುವ, ಅರ್ಥೈಸಿಕೊಳ್ಳುವ, ಚರ್ಚಿಸುವ, ವಿಶ್ಲೇಷಿಸುವ, ತಾರ್ಕಿಕವಾಗಿ ಚಿಂತಿಸುವ, ಪಟ್ಟಿ ಮಾಡುವ ನಿರ್ದಿಷ್ಟಗಳ ಮೂಲಕ ಪಠ್ಯಪುಸ್ತಕವನ್ನು ಅವಲೋಕಿಸಿ ಜ್ಞಾನವನ್ನು ಕಟ್ಟಿಕೊಳ್ಳುವರು. ಈ ಸಾಮರ್ಥ್ಯವು ಅವಲೋಕನದ ಮೂಲಕ ಕಲಿಕಾರ್ಥಿಯಲ್ಲಿ ಸಾಧಿತವಾಗಿರುವುದನ್ನು ಈ ಕೆಳಗಿನಂತೆ ಮೌಲ್ಯಮಾಪನಕ್ಕೆ ಒಳಪಡಿಸಬೇಕು.

ಉದಾ : ಪಠ್ಯಕ್ಕೆ ಸಂಬಂಧಿಸಿದಂತೆ, ಭಾರತದ ವಿದೇಶಾಂಗ ನೀತಿಯ ಸ್ವರೂಪ, ಪಂಚಶೀಲ ತತ್ವ, ಅಲಿಪ್ತನೀತಿ, ವರ್ಣದೇಶ ನೀತಿಗೆ ವಿರೋಧ, ನಿಶ್ಯಸ್ತ್ರೀಕರಣವೆಂಬ ಕಲಿಕಾಂಶಗಳನ್ನು ಪಠ್ಯಪುಸ್ತಕ ಅವಲೋಕಿಸಿ, ಅನುಮಾನಗಳನ್ನು ಗುರುತಿಸಿ, ಚರ್ಚಿಸಿ ವಿಶ್ಲೇಷಿಸಿ, ಆಲಿಸಿ ಅರ್ಥೈಸಿಕೊಳ್ಳುವರು. ಈ ಸಂದರ್ಭದಲ್ಲಿ ಅನುಕೂಲಕಾರನು ಕೆಲವು ಸೂಚಿಗಳನ್ನು ತರಗತಿಯಲ್ಲಿ ನೀಡುವುದನ್ನು ಮರೆಯಬಾರದು. ಹಾಗೂ ಜ್ಞಾನಾತ್ಮಕ ವಲಯದ ಮೌಲ್ಯಮಾಪನಕ್ಕಾಗಿ ಪ್ರಶ್ನಾವಳಿ, ಆಶುಭಾಷಣ, ಭಾಷಣ, ಚರ್ಚಾಸ್ಪರ್ಧೆ ಅಥವಾ ಗೃಹಪಾಠ ನೀಡುವುದರ ಮೂಲಕ ಕಲಿಕಾರ್ಥಿ ಪಡೆದ ಜ್ಞಾನವನ್ನು ಅಳತೆ ಮಾಡಬಹುದು.

ಹಾಗೆಯೇ ಪ್ರಸ್ತುತ ಘಟಕಕ್ಕೆ ಸಂಬಂಧಿಸಿದಂತೆ ಕಲಿವಿನ ವಿಧಾನ ಹಾಗೂ ಬಳಸಿಕೊಂಡ ಚಟುವಟಿಕೆಗಳ ಹಿನ್ನಲೆಯಲ್ಲಿ ಹೊಸ ಶಿಕ್ಷಣ ಕ್ರಮದ ಆಶಯಗಳನ್ನು ಈಡೇರಿಸಲು ಭಾವನಾತ್ಮಕ ವಲಯದ ಮೌಲ್ಯಮಾಪನವನ್ನು ಈ ಮುಂದಿನಂತೆ ಮುಂದುವರೆಸಬಹುದು.

ಪ್ರಸ್ತುತ ಘಟಕದಲ್ಲಿ ನೀಡಿದ ಚಟುವಟಿಕೆಯು ಕಲಿಕಾರ್ಥಿಯಲ್ಲಿ ಆಸಕ್ತಿ, ಮೌಲ್ಯ, ಕೌಶಲ್ಯ, ಮನೋಧೋರಣೆ ಅನ್ವಯ ಚಿಂತನೆ ಮುಂತಾದಂತೆ ಚೌಕಟ್ಟನ್ನು ಹೊಂದಿರುತ್ತದೆ.

* ಮಂಡನೆ (ಆಸಕ್ತಿ)

  ವಿಶ್ವಶಾಂತಿ ಕಾಪಾಡುವಲ್ಲಿ ಭಾರತದ 'ಆಲಿಪ್ತನೀತಿ' ಕುರಿತು ಪ್ರಬಂಧ ಮಂಡನೆ.

* ವಿಶ್ವಭ್ರಾತೃತ್ವ (ಮೌಲ್ಯಗಳು)

  'ಪಂಚಶೀಲ ತತ್ವಗಳು ವಿಶ್ವಭ್ರಾತೃತ್ವಕ್ಕೆ ಮುನ್ನುಡಿಯಂತಿದೆ'

* ವರದಿ ತಯಾರಿಕೆ

* ನಿರರ್ಗಳತೆ (ಕೌಶಲ್ಯ)

  'ವರ್ಣಾಭೇದ ನೀತಿ ಮಾನವೀಯತೆಗೆ ಒಂದು ಕಳಂಕ' (ಭಾಷಣ ಸ್ಪರ್ಧೆ)

* ತೀರ್ಮಾನ (ಅನ್ವಯ)

  ವಸಾಹತುಶಾಹಿತ್ವ ದೇಶದ ಸಾರ್ವಭೌಮತ್ವಕ್ಕೆ ದಕ್ಕೆಯನ್ನು ಉಂಟು ಮಾಡುತ್ತದೆ. ಈ ವಿಷಯವನ್ನು ವಿಶ್ಲೇಷಿಸಿ ತೀರ್ಮಾನವನ್ನು ತೆಗೆದುಕೊಳ್ಳಿರಿ.

* ಸಹಿಷ್ಣತೆ (ಮನೋಧೋರಣೆ)

  ಭಾರತ ಇತರ ರಾಷ್ಟ್ರಗಳೊಂದಿಗೆ ಹೊಂದಿರುವ 'ಸಹಿಷ್ಣತಾ' ಧೋರಣೆಗೆ ಸಂಬಂಧಿಸಿದಂತೆ ಪ್ರಕಟವಾಗಿರುವ ಲೇಖನಗಳೊಂದಿಗೆ ಒಂದು ಯೋಜನೆ ತಯಾರಿಸಿ, ನಿಮ್ಮ ಅಭಿಪ್ರಾಯವನ್ನು ಬರೆಯಿರಿ.

* ತಾರ್ಕಿಕತೆ (ಚಿಂತನೆ)

* ಭಾರತ ನಿಶ್ಯಸ್ತ್ರೀಕರಣ ಒಪ್ಪಂದಕ್ಕೆ ಸಹಿ ಹಾಕಿಲ್ಲ ಏಕೆ? ಮಾಹಿತಿಯನ್ನು ಸಂಗ್ರಹಿಸಿರಿ

* ಭಾರತದ ಅಣುಶಕ್ತಿ ಪ್ರಧಾನ ರಾಷ್ಟ್ರವಾಗಿದ್ದರೂ ಶಾಂತಿಧೋರಣೆಯನ್ನು ವಿಶ್ವಮಟ್ಟದಲ್ಲಿ ಪಾಲಿಸುತ್ತದೆ ಏಕೆ? ಪೂರಕ ಅನಿಸಿಕೆಗಳನ್ನು ಸಂಗ್ರಹಿಸಿರಿ.

**<u>ಬಳಸಬಹುದಾದ ತಂತ್ರಗಳು ಮತ್ತು ಸಾಧನಗಳು</u>**

| | | |
|---|---|---|
| **ತಂತ್ರಗಳು** | : | **ಸಾಧನಗಳು** |
| 1. ಪರೀಕ್ಷೆ (ಲಿಖಿತ) | : | ಪ್ರಶ್ನೆಪತ್ರಿಕೆ |
| 2. ಮೌಖಿಕ | : | ಪ್ರಶ್ನಾವಳಿಗಳು |

ಉದಾ: ಪ್ರಶ್ನೆಪತ್ರಿಕೆ

* ಬಹುಆಯ್ಕೆ ಪ್ರಶ್ನೆ
* ಒಂದೊಂದೇ ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೆಗಳು
* ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು
* ಐದು ಆರು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು.
* ಮೌಖಿಕ ಪ್ರಶ್ನೆಗಳು

ಯಾರು? ಏನು? ಎಷ್ಟು? ಯಾವುದು? ಎಲ್ಲಿ? ಎಂಬ ಪ್ರಶ್ನೆಗಳನ್ನು ಒಳಗೊಂಡಂತೆ, ನಿಖರ ಉತ್ತರ ಬಯಸುವ ಪ್ರಶ್ನೆಗಳನ್ನು ಒಳಗೊಂಡಿರಲಿ. ಭಾವನಾತ್ಮಕ ಅಂಶಗಳ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಈ ಮುಂದಿನಂತೆ ಮಾದರಿಯನ್ನು ನೀಡಲಾಗಿದೆ.

ಉದಾ:

**ತಂತ್ರ** : **ಸಾಧನ**

1. ಅವಲೋಕನ : ದರ್ಜಾಮಾಪನ

(ದರ್ಜಾ ಮಾಪನದ ಪರಿಕಲ್ಪನೆ ಕುರಿತು ಅನುಬಂಧ 1ರಲ್ಲಿ ನೀಡಲಾಗಿದೆ)

**ಮಾದರಿ ಪ್ರಬಂಧ ಮಂಡನೆ (ಆಸಕ್ತಿ)**

1. ಬರವಣಿಗೆಯಲ್ಲಿ ಸೃಜನಶೀಲತೆಯನ್ನು ಪ್ರದರ್ಶಿಸುತ್ತಾರೆ
   ಯಾವಾಗಲೂ/ಕೆಲವೊಮ್ಮೆ/ ಯಾವಾಗಲೂ ಇಲ್ಲ
2. ವಿಷಯದ ಬೆಳವಣಿಗೆಯನ್ನು ಹಂತಹಂತವಾಗಿ ಉತ್ತಮ
   ಶೈಲಿಯೊಂದಿಗೆ ಪ್ರಸ್ತುತ ಪಡಿಸುತ್ತಾರೆ.
   ಯಾವಾಗಲೂ / ಕೆಲವೊಮ್ಮೆ / ಯಾವಾಗಲೂ ಇಲ್ಲ
   ವರದಿ ತಯಾರಿಕೆ (ಮೌಲ್ಯ)
3. ವರದಿ ವಿಷಯದ ಚೌಕಟ್ಟಿನೊಳಗೆ ಇರುತ್ತದೆ.
   ಯಾವಾಗಲೂ / ಕೆಲವೊಮ್ಮೆ / ಯಾವಾಗಲೂ ಇಲ್ಲ

4. ವರದಿಯಲ್ಲಿ ಸ್ವಂತಿಕೆಯನ್ನು ಪ್ರದರ್ಶಿಸುತ್ತಾರೆ.

ಯಾವಾಗಲೂ/ಕೆಲವೊಮ್ಮೆ / ಯಾವಾಗಲೂ ಇಲ್ಲ

* **ಭಾಷಣಸ್ಪರ್ಧೆ (ಕೌಶಲ್ಯ)**

5. ಭಾಷಣದಲ್ಲಿ ವಿಷಯ ಮಂಡಿಸುವಿಕೆಯ ಶೈಲಿ ಉತ್ತಮವಾಗಿದೆ.

ಯಾವಾಗಲೂ/ಕೆಲವೊಮ್ಮೆ/ಯಾವಾಗಲೂ ಇಲ್ಲ

6. ವಿಷಯದ ಪ್ರಬುದ್ಧತೆಯನ್ನು ಹೊಂದಿರುತ್ತಾರೆ

ಯಾವಾಗಲೂ/ಕೆಲವೊಮ್ಮೆ/ ಯಾವಾಗಲೂ ಇಲ್ಲ

* **ತೀರ್ಮಾನ (ಅನ್ವಯ)**

7. ವಿಷಯವನ್ನು ಚರ್ಚಿಸಿ ವಿಶ್ಲೇಷಿಸಿ ತೀರ್ಮಾನಕ್ಕೆ ಬರುತ್ತಾರೆ

ಯಾವಾಗಲೂ/ಕೆಲವೊಮ್ಮೆ/ಯಾವಾಗಲೂ ಇಲ್ಲ

8. ವಿಷಯದ ಬಗ್ಗೆ ಸಕಾರಾತ್ಮಕ ನಿಲುವುಗಳನ್ನು ತಾಳುತ್ತಾರೆ.

ಯಾವಾಗಲೂ/ಕೆಲವೊಮ್ಮೆ/ಯಾವಾಗಲೂ ಇಲ್ಲ

* **ಸಹಿಷ್ಣುತೆ (ಮನೋಧೋರಣೆ)**

9. ಕಲಿಕೆಯಲ್ಲಿ ಸಹಪಾಠಿಗಳ ಅಭಿಪ್ರಾಯಕ್ಕೆ ಗೌರವವನ್ನು ಕೊಡುತ್ತಾರೆ

ಯಾವಾಗಲೂ / ಕೆಲವೊಮ್ಮೆ / ಯಾವಾಗಲೂ ಇಲ್ಲ

10. ವಿಶ್ವಮಟ್ಟದಲ್ಲಿನ ಭಾರತದ ತಾಳ್ಮೆಯುತ ತೀರ್ಮಾನಗಳ ಬಗ್ಗೆ ಮೆಚ್ಚುಗೆಯನ್ನು ತೋರಿಸುತ್ತಾರೆ.

ಯಾವಾಗಲೂ/ಕೆಲವೊಮ್ಮೆ/ಯಾವಾಗಲೂ ಇಲ್ಲ

* **ತಾರ್ಕಿಕತೆ (ಚಿಂತನೆ)**

11. ವಿಷಯಕ್ಕೆ ಪೂರಕವಾದ ಮಾಹಿತಿಯನ್ನು ಸಂಗ್ರಹಿಸುತ್ತಾರೆ

ಯಾವಾಗಲೂ /ಕೆಲವೊಮ್ಮೆ/ಯಾವಾಗಲೂ ಇಲ್ಲ

12. ಅನಿಸಿಕೆಗಳನ್ನು ಯಥಾವತ್ತಾಗಿ ಕ್ರೋಢೀಕರಿಸುವ ಸಾಮರ್ಥ್ಯವನ್ನು

ಹೊಂದಿದ್ದಾರೆ. ಯಾವಾಗಲೂ/ಕೆಲವೊಮ್ಮೆ/ಇಲ್ಲವೇ ಇಲ್ಲ

13. ವರದಿಗಳು ಪ್ರಭಾವಯುತವಾಗಿರುತ್ತವೆ.

ಯಾವಾಗಲೂ/ಕೆಲವೊಮ್ಮೆ/ಯಾವಾಗಲೂ ಇಲ್ಲ

14. ಭಾಷಣದಲ್ಲಿನ ತೀರ್ಮಾನಗಳು ನಿಖರವಾಗಿರುತ್ತವೆ

ಯಾವಾಗಲೂ/ಕೆಲವೊಮ್ಮೆ/ಯಾವಾಗಲೂ ಇಲ್ಲ

15. ಕಲಿಕೆಯಲ್ಲಿ ಹೊಂದಾಣಿಕೆಯನ್ನು ಮೆರೆಯುತ್ತಾರೆ

ಯಾವಾಗಲೂ/ಕೆಲವೊಮ್ಮೆ/ಯಾವಾಗಲೂ ಇಲ್ಲ

**ಉಪಸಂಹಾರ :** ಹೀಗೆ ಅನುಕೂಲಕಾರನು ಪ್ರಸ್ತುತ ಘಟಕಕ್ಕೆ ಸಂಬಂಧಿಸಿದಂತೆ ಕಲಿವಿನ ವಿಧಾನ (ಅವಲೋಕನ), ವಿಧಾನದ ಮೂಲಕ, ನೀಡಲಾದ ಚಟುವಟಿಕೆ (ಅವಲೋಕನ ಚರ್ಚೆ, ಭಾಷಣ, ವರದಿ, ಯೋಜನೆ, ಸಂಗ್ರಹ)ಗಳ ಮೂಲಕ, ವಿಷಯದ ಜ್ಞಾನಾಂಶ ಹಾಗೂ ಭಾವನಾತ್ಮಕ (ಆಸಕ್ತಿ, ಕೌಶಲ್ಯ, ಮೌಲ್ಯ, ಮನೋಧೋರಣೆ ಅನ್ವಯ) ವಲಯಗಳ ವ್ಯಾಪ್ತಿಯಲ್ಲಿ ಅನುಕೂಲಿಸಿ, ಪಠ್ಯ ಮತ್ತು ಪಠ್ಯಪುಸ್ತಕದ ಆಚೆ ಕಲಿಕಾರ್ಥಿಗಳಲ್ಲಿನ ಜ್ಞಾನವು ಹೇಗೆ ಜೀವನಾವಶ್ಯಕತೆಗಳಿಗೆ ಅನುವು ಮಾಡಿಕೊಡುತ್ತದೆ ಎಂಬುದರ ಹಿನ್ನಲೆಯ ಮಾನದಂಡದೊಂದಿಗೆ ಮೌಲ್ಯಮಾಪನ ವನ್ನು ಮಾಡಲಾಗುವುದು.

ವಿಭಾಗ : **ಸಮಾಜಶಾಸ್ತ್ರ**

ಘಟಕ : **ಅಧ್ಯಾಯ –3**

## ಸಾಮೂಹಿಕ ವರ್ತನೆ ಮತ್ತು ಪ್ರತಿಭಟನೆಗಳು

ವಿಧಾನ : ಪ್ರಶ್ನೋತ್ತರ ವಿಧಾನ

ಚಟುವಟಿಕೆ : ಪ್ರಶ್ನಾವಳಿ

ಪ್ರಸ್ತುತ ಅಧ್ಯಾಯಕ್ಕೆ ಸಂಬಂಧಿಸಿದಂತೆ ಪ್ರಶ್ನೋತ್ತರ ವಿಧಾನದ ಮೂಲಕ ತರಗತಿಯಲ್ಲಿ ಚಟುವಟಿಕೆಯಾಗಿ ಪ್ರಶ್ನಾವಳಿಯ ಮೂಲಕ ಜ್ಞಾನವನ್ನು ಕಟ್ಟಿಕೊಳ್ಳಲು ಅವಕಾಶವನ್ನು ಕಲ್ಪಿಸಲಾಗುವುದು. ಈ ಹಿನ್ನಲೆಯಲ್ಲಿ ಕಲಿಕಾರ್ಥಿಯು ಪೂರ್ವಜ್ಞಾನ ದೊಂದಿಗೆ ಸಂಬಂಧಿಸಿದ ಅಧ್ಯಾಯದ ಜ್ಞಾನವನ್ನು ಕಟ್ಟಿಕೊಳ್ಳಲು ನಿಖರವಾದ ಪ್ರಶ್ನಾವಳಿ ಗಳೊಂದಿಗೆ (ಏಕೆ? ಏನು, ಹೇಗೆ, ಯಾವಾಗ, ಎಲ್ಲಿ, ಕಾರಣ, ವ್ಯತ್ಯಾಸ, ಹೋಲಿಕೆ, ಸಂಬಂಧ, ಚರ್ಚೆ) ಸ್ಪಷ್ಟವಾಗಿ ಅರಿವನ್ನು ಕಟ್ಟಿಕೊಳ್ಳುವ ತರಗತಿ ಚಟುವಟಿಕೆಯ ಮೂಲಕ ಕಲಿಕೆಯನ್ನು ಪ್ರಸ್ತುತ ಪಡಿಸಲಾಗುವುದು.

ಅಂದರೆ, ಅನುಕೂಲಕಾರನು ಅಧ್ಯಾಯವನ್ನು ಅನುಕೂಲಿಸುವುದಕ್ಕಾಗಿ, ಪೂರ್ವ ಸಿದ್ಧತೆಯ ಹಂತದಲ್ಲಿ ಪ್ರಶ್ನಾವಳಿ ಚಟುವಟಿಕೆಗೆ ಸಂಬಂಧಿಸಿದಂತೆ ತರಗತಿಯಲ್ಲಿ ಎರಡು ಗುಂಪುಗಳ ರಚನೆ ಮಾಡಿ ಒಂದು ಗುಂಪಿಗೆ ಪ್ರಶ್ನಾವಳಿ ರಚಿಸಿಕೊಳ್ಳಲು, ಮತ್ತೊಂದು ಗುಂಪಿಗೆ ಉತ್ತರವನ್ನು ರೂಪಿಸಿಕೊಳ್ಳಲು ತಿಳಿಸುವುದು. ನಂತರ ಎರಡೂ ತಂಡದವರಿಗೆ ಪಠ್ಯಪುಸ್ತಕವನ್ನು ಓದಲು ತಿಳಿಸಿ ಈ ಸಂದರ್ಭದಲ್ಲಿ ಕಲಿಕಾಂಶಕ್ಕೆ ಸಂಬಂಧಿಸಿದಂತೆ ಮುಖ್ಯಾಂಶಗಳ ಪಟ್ಟಿ, ಅರ್ಥವಾಗದ ವಿಷಯಾಂಶದ ಪಟ್ಟಿಯನ್ನು ಮಾಡಿಕೊಳ್ಳಲು ತಿಳಿಸುವುದು ಈ ಹಂತದಲ್ಲಿ ಹೆಚ್ಚಿನ ಮಾಹಿತಿಗೆ ಅನುಕೂಲಕಾರನ ಸಲಹೆಯನ್ನು ಪಡೆದುಕೊಳ್ಳುವಂತೆ ಸೂಚಿಸುವುದು.

ನಂತರ ಕಲಿಕೆ ಅನುಕೂಲಿಸುವ ಸಂದರ್ಭದಲ್ಲಿ ಪ್ರಶ್ನೆ ಕೇಳುವ ತಂಡದವರು, ಪ್ರಶ್ನೆ ಕೇಳಿದರೆ ಮತ್ತೊಂದು ತಂಡದವರು ಉತ್ತರವನ್ನು ಸ್ಪಷ್ಟಪಡಿಸುವಂತೆ ಅವಕಾಶ ಕಲ್ಪಿಸುವುದು.

ಇಲ್ಲಿ ಹೆಚ್ಚಿನ ಆದ್ಯತೆ ಮಕ್ಕಳಿಗೇ ಕಲ್ಪಿಸುವುದು. ವಿಷಯದ ಕ್ಲಿಷ್ಟತೆ, ಸ್ಪಷ್ಟತೆಗಳಿಗಾಗಿ ಕಲಿವಿನ ಸಂದರ್ಭದಲ್ಲಿ (ವ್ಯತ್ಯಾಸ, ಹೋಲಿಕೆ, ಚಿಂತನೆ, ಸಮರ್ಥನೆ, ತೀರ್ಮಾನ, ವಿಶ್ಲೇಷಣೆ ಸಂಬಂಧಿಸಿದಂತೆ) ಅನುಕೂಲಕಾರನು ಮಧ್ಯೆ ಪ್ರವೇಶಿಸಿ ನಿಖರತೆಯನ್ನು ಕಲ್ಪಿಸುವರು. ಈ ಎಲ್ಲಾ ತರಗತಿಯ ಚಟುವಟಿಕೆಯನ್ನು ಅನುಕೂಲಕಾರ ಈ ಕೆಳಗಿನಂತೆ ಮೌಲ್ಯಮಾಪನಕ್ಕೆ ಒಳಪಡಿಸಬೇಕು ಎಂಬುದಕ್ಕೆ ಮಾದರಿಯೊಂದನ್ನು ಕೊಡಲಾಗಿದೆ.

<u>**ಮಾದರಿ :**</u>

* ಎರಡು ಗುಂಪುಗಳ ರಚನೆ
* ಒಂದು ಗುಂಪು ಪ್ರಶ್ನೆಗಳನ್ನು ರಚಿಸಿಕೊಳ್ಳುವರು.

  ಉದಾ: ಜನಮಂದೆ ಎಂದರೇನು?
* ಜನ ಮಂದೆಯ ಸ್ವರೂಪವೇನು?
* ಜನಮಂದೆಯು ಸಮಾಜದ ಮೇಲೆ ಬೀರುವ ಪ್ರಭಾವವೇನು?
* ಜನಮಂದೆಯನ್ನ ನಿಯಂತ್ರಿಸುವ ಕ್ರಮಗಳನ್ನು ತಿಳಿಸಿರಿ.
* ದೊಂಬಿಯನ್ನು ಉದಾಹರಣೆಯೊಂದಿಗೆ ಅರ್ಥೈಸಿರಿ
* ಜನಮಂದೆ ಮತ್ತು ದೊಂಬಿಗಳಿಗಿರುವ ವ್ಯತ್ಯಾಸವನ್ನು ತಿಳಿಸಿರಿ
* ಚಳುವಳಿ ಪದದ ಅರ್ಥ ತಿಳಿಸಿರಿ
* ವಿವಿಧ ಚಳುವಳಿಗಳನ್ನು ಹೆಸರಿಸಿರಿ
* ಚಳುವಳಿಗೆ ಕಾರಣಗಳನ್ನು ಹೇಳಿರಿ
* ಚಳುವಳಿಯ ಉದ್ದೇಶಗಳನ್ನು ಪಟ್ಟಿ ಮಾಡಿರಿ
* ಸ್ತ್ರೀಯರ ಸಾಮಾಜಿಕ ಶಕ್ತಿಯನ್ನು ಬಲಪಡಿಸುವಲ್ಲಿ ಸ್ತ್ರೀ ಸ್ವಸಹಾಯ ಸಂಘಗಳು ಹೇಗೆ ಪಾತ್ರನಿರ್ವಹಿಸುತ್ತಿವೆ? ವಿವರಿಸಿ
* ಸ್ತ್ರೀ ಶಿಕ್ಷಣ ಏಕೆ? ಹೇಗೆ?
* 'ಸಾಮಾಜಿಕ ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಸ್ತ್ರೀಯರಿಗೆ ಸೂಕ್ತ ಅವಕಾಶ ಒದಗಿಸುವಲ್ಲಿ ಸ್ವಸಹಾಯ ಸಮೂಹಗಳು ಪ್ರಮುಖ ಪಾತ್ರ ವಹಿಸಿವೆ' – ಈ ಹೇಳಿಕೆಯನ್ನು ಸಮರ್ಥಿಸಿರಿ.

ಈ ರೂಪದ ಪ್ರಶ್ನೆಗಳ ತಯಾರಿಕೆಯೊಂದಿಗೆ ಒಂದು ಗುಂಪಿನ ಕಲಿಕಾರ್ಥಿಗಳ ಪ್ರಶ್ನಿಸುವ ಜ್ಞಾನ ಕೌಶಲ್ಯ, ಸಾಮರ್ಥ್ಯ, ಮನೋಧೋರಣೆ, ಆಸಕ್ತಿಗಳನ್ನು ಒಳಗೊಂಡಂತೆ ಅನುಕೂಲಕಾರ ಮೌಲ್ಯಮಾಪನಕ್ಕೆ ಒಳಪಡಿಸುವರು.

ಹಾಗೆಯೇ ತರಗತಿಯ ಮತ್ತೊಂದು ಗುಂಪಿನವರು ಈ ಎಲ್ಲಾ ಪ್ರಶ್ನಾವಳಿಗಳಿಗೆ ಸಮರ್ಥವಾದ ಸಮಪರ್ಕವಾದ ಉತ್ತರವನ್ನು ಆಸಕ್ತಿ, ಕೌಶಲ್ಯ, ಅನ್ವಯ, ಮನೋ ಧೋರಣೆಗಳ ಮೂಲಕ ಈ ಕೆಳಗಿನ ಉದಾಹರಣೆಯಂತೆ ಉತ್ತರಿಸುವರು.

ಉದಾ : ಪ್ರಶ್ನೆ ಒಂದಕ್ಕೆ ಉತ್ತರ

ಒಂದು ಆಸಕ್ತಿ ಸ್ವಪೂರ್ವ ಯೋಜನೆ ಇಲ್ಲದೆ, ಅನಿಶ್ಚಿತವಾಗಿ ಸೇರಿರುವ ಜನ ಸಮೂಹ (ಏನು ಎಂಬ ಪ್ರಶ್ನೆಗೆ)

*** ತಾರ್ಕಿಕ ಚಿಂತನೆಗೆ ಸಂಬಂಧಿಸಿದಂತೆ**

ಪ್ರಶ್ನೆ : ಸ್ತ್ರೀ ಸಾಮಾಜಿಕ ಶಕ್ತಿ ಕುರಿತಂತೆ

ಉತ್ತರ : ಸ್ವಸಹಾಯ ಸಂಘಗಳ ಮೂಲಕ

- ಕೌಟುಂಬಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹೊಣೆಗಾರಿಕೆ ಹೊರುವ ಸಾಮರ್ಥ್ಯ ಪಡೆದು ಸ್ತ್ರೀ ಸಬಲಳಾಗುತ್ತಾಳೆ.

ಈ ರೀತಿಯಾಗಿ ಉತ್ತರಿಸುವ ಗುಂಪಿನ ಕಲಿಕಾರ್ಥಿಗಳ ಕಲಿಕಾಂಶದ ಪ್ರಸ್ತುತಿಯನ್ನು ವಿಷಯದ ಜ್ಞಾನವಲಯ ಹಾಗೂ ಭಾವನಾತ್ಮಕ ವಲಯಗಳಾದ ಆಸಕ್ತಿ (ಉತ್ತರಿಸುವಿಕೆ) ಮೌಲ್ಯ (ತಾಳ್ಮೆಯಿಂದ ಉತ್ತರಿಸುವುದ, ಸಕಾರಾತ್ಮಕ ಭಾವನೆ) ಕೌಶಲ್ಯ (ತಾರ್ಕಿಕವಾಗಿ ಉತ್ತರಿಸುವುದು), ಮನೋಧೋರಣೆ (ಸಂವೇದನೆ), ಅನ್ವಯ (ಹೊಂದಾಣಿಕೆ) ನಿರ್ದಿಷ್ಟಗಳನ್ನು ಕಲಿಕಾರ್ಥಿಗಳು ಹೇಗೆ ಮನನ ಮಾಡಿಕೊಂಡಿದ್ದಾರೆ ಎಂಬುದನ್ನು ಅನುಕೂಲಕಾರನು ಮೌಲ್ಯ ಮಾಪನಕ್ಕೆ ತಂತ್ರಗಳು ಮತ್ತು ಸಾಧನಗಳನ್ನು ಬಳಸಿಕೊಳ್ಳುವುದರ ಮೂಲಕ ದೃಢೀಕರಿಸಿಕೊಳ್ಳುವನು.

**ಮೌಲ್ಯಮಾಪನ ಬಳಸಬಹುದಾದ ತಂತ್ರಗಳು ಮತ್ತು ಸಾಧನಗಳು :**

ತಂತ್ರಗಳು : ಸಾಧನಗಳು

ಅವಲೋಕನ : ಅವಲೋಕನ ಸೂಚಿ

* ಪ್ರಶ್ನಿಸುವವರಿಗೆ ಸಂಬಂಧಿಸಿದಂತೆ
* ಪ್ರಶ್ನಿಸುವ ರೀತಿ
* ಕಲಿಕಾಂಶಕ್ಕೆ ಪೂರಕವಾದ ಪ್ರಶ್ನೆ
* ಪ್ರಶ್ನೆಗಳು ನಿಖರವಾಗಿರಲಿ
* ಪ್ರಶ್ನೆಗಳು ಗುಣಾತ್ಮಕತೆಯಿಂದ ಕೂಡಿರಲಿ

  ಉದಾ: ದೊಂಬಿ ಮತ್ತು ಜನಸಮೂಹದ ವ್ಯತ್ಯಾಸವನ್ನು ತಿಳಿಸಿರಿ
* ಪ್ರಶ್ನೆಗಳು ತಾರ್ಕಿಕ ಚಿಂತನೆಗೆ ಅವಕಾಶ ಕಲ್ಪಿಸುವಂತಿರಲಿ
* ಪ್ರಶ್ನೆಗಳು ಸೃಜನಶೀಲ ಉತ್ತರವನ್ನು ನಿರೀಕ್ಷಿಸುವಂತಿರಲಿ
* ಆಸಕ್ತಿಯಿಂದ ಭಾಗವಹಿಸಿ ಪ್ರಶ್ನೆಗಳನ್ನು ಕೇಳುವುದು.
* ಉತ್ತರಿಸುವವರಿಗೆ ಸಂಬಂಧಿಸಿದಂತೆ
* ಪ್ರಶ್ನೆಗೆ ನಿಖರವಾದ ಉತ್ತರವನ್ನು ನೀಡುವುದು.
* ಕಲಿಕಾಂಶವನ್ನು ವಿಶ್ಲೇಷಿಸುತ್ತಾ ಸ್ಪಷ್ಟತೆಯ ವಿವರಣೆ ನೀಡುವುದು
* ಉತ್ತರಗಳು ಜ್ಞಾನ ರಚನೆಗೆ ಸಂಬಂಧಿಸಿದಂತೆ ಹೋಲಿಕೆ, ವ್ಯತ್ಯಾಸ, ಸಾಮ್ಯತೆಯ ಹಿನ್ನಲೆಯೂ ಜೀವನಾವಶ್ಯಕತೆಗಳಿಗೆ ಹೊಂದಿಕೊಂಡಂತೆ ಪ್ರಸ್ತುತ ಪಡಿಸುವಂತೆ ಉತ್ತರವಿರಲಿ.
* ಉತ್ತರಗಳು : ಘಟಕದ ಕಲಿಕೆಗೆ ಒತ್ತಾಸೆಯಾಗಿದ್ದು ಸ್ವಂತಿಕೆ, ತಾರ್ಕಿಕವಾದ ಆಲೋಚನೆಗಳು, ಸ್ಪಷ್ಟ ನಿರ್ಧಾರವನ್ನು ಒಳಗೊಂಡಿರಲಿ.
* ಉತ್ತರಿಸುವವರ ಸ್ವಭಾವ, ಶೈಲಿ, ಮಂಡನೆಯ ಪ್ರಕ್ರಿಯೆ, ವಿಶ್ಲೇಷಣಾ ರೀತಿ ಹಾಗೂ ಶೈಲಿ ಕೇಳುಗರ ಮೇಲೆ ಬೀರುವ ಪರಿಣಾಮವನ್ನು ಉತ್ತರಿಸುತ್ತಿರುವ ಹಿನ್ನಲೆಯಲ್ಲಿ ಮೌಲ್ಯಮಾಪನ ಮಾಡುವುದು
* ಉತ್ತರಿಸುವಲ್ಲಿನ ಆಸಕ್ತಿ (ಕಾತರತೆ) ಅವಕಾಶಗಳನ್ನು, ಸಮಯ ಪಾಲನೆಯನ್ನು ಬಳಸಿಕೊಂಡ ರೀತಿಯು ಮೌಲ್ಯಮಾಪನಕ್ಕೆ ಒಳಪಡುವುದು.

**ಉಪಸಂಹಾರ :**

ಹೀಗೆ ಅನುಕೂಲಕಾರನು ಪ್ರಸ್ತುತ ಅಧ್ಯಾಯಕ್ಕೆ ಬಳಸಿಕೊಂಡ ಕಲಿವಿನ ವಿಧನ ನೀಡಿದ ಚಟುವಟಿಕೆಯ ಹಿನ್ನಲೆಯಲ್ಲಿ ಮೌಲ್ಯಮಾಪನ ಪ್ರಕ್ರಿಯೆಯಾಗಿ ತೆಗೆದುಕೊಂಡ ತಂತ್ರಗಳು ಹಾಗೂ ಸಾಧನಗಳ ಮೂಲಕ ಕಲಿಕಾರ್ಥಿಗಳು, ದೃಢಪಡಿಸಿಕೊಂಡ ಪಠ್ಯಧಾರಿತ ಜ್ಞಾನದ ಜೊತೆಗೆ ಪಠ್ಯದ ಹೊರತಾಗಿ ಎಷ್ಟು ಯಾವ ಸಾಮರ್ಥ್ಯವನ್ನು ಪಡೆದಿದ್ದಾರೆ ಎಂಬುದನ್ನು ಭಾವನಾತ್ಮಕ ವಲಯದ (ಆಸಕ್ತಿ, ಕೌಶಲ್ಯ, ಅನ್ವಯ, ಅರ್ಥೈಸುವಿಕೆ, ತಾರ್ಕಿಕ ಚಿಂತನೆ ಒಳಗೊಂಡಂತೆ) ಮಾಪನದ ನಿರ್ದೇಶನದಂತೆ ಮೌಲ್ಯಮಾಪನವನ್ನು ನಿರ್ವಹಿಸಿ ಕಲಿಕೆಯ ಫಲಿತವನ್ನು ಕಂಡುಕೊಳ್ಳಲಾಗುವುದು.

ವಿಭಾಗ : **ಭೂಗೋಳ ಶಾಸ್ತ್ರ**

ಘಟಕ : **ಅಧ್ಯಾಯ–2**

**'ನೈಸರ್ಗಿಕ ವಿನಾಶಕಾರಕಗಳು'**

ವಿಧಾನ : ಪ್ರಯೋಗ ವಿಧಾನ

ಬಳಸಿಕೊಂಡ : ಪ್ರಯೋಗದಲ್ಲಿ ತೊಡಗುವುದು

ಚಟುವಟಿಕೆ

ಪ್ರಸ್ತುತ ಅಧ್ಯಾಯಕ್ಕೆ ಸಂಬಂಧಿಸಿದಂತೆ, ಅನುಕೂಲಕಾರನು ಪ್ರಯೋಗ ವಿಧಾನವನ್ನು ಆಯ್ಕೆ ಮಾಡಿಕೊಂಡು ಕಲಿಕಾಧಾರಗಳಿಗೆ ತೊಡಗಿಸಿಕೊಳ್ಳುವಿಕೆಯ ಅವಕಾಶವನ್ನು ನೀಡಲು ಪ್ರಯೋಗ ಚಟುವಟಿಕೆಯನ್ನು ನೀಡುವರು.

ಚಟುವಟಿಕೆಯ ರೂಪವಾಗಿ ಪ್ರಯೋಗವನ್ನು ಅರ್ಥೈಸಿಕೊಳ್ಳುವುದಾದರೆ 'ಕಲಿಕಾರ್ಥಿ, ಕಲಿಕಾಂಶದ ಬಗ್ಗೆ ಜ್ಞಾನವನ್ನು ಕಟ್ಟಿಕೊಳ್ಳುವಾಗ ಸ್ವಭಾಗಿತ್ವದೊಂದಿಗೆ ಅನುಭವಗಳನ್ನು ಸ್ಪಷ್ಟಪಡಿಸಿಕೊಳ್ಳುವ ಕ್ರಿಯಾಶೀಲ ಚಟುವಟಿಕೆಗೆ 'ಪ್ರಯೋಗ' ಎನ್ನಲಾಗುವುದು.

'ಪ್ರಯೋಗ' ಚಟುವಟಿಕೆಯನ್ನು ತರಗತಿಯಲ್ಲೂ ಪ್ರಸ್ತುತ ಪಡಿಸಲು ಮೊದಲು ಪೂರ್ವಸಿದ್ಧತೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಬೇಕಾಗುತ್ತದೆ.

ಹೇಗೆಂದರೆ, ಕಲಿಕಾಂಶಗಳಿಗೆ (ಪ್ರಯೋಗಕ್ಕೆ ಒಳಪಡುವಂತೆ) ಸಂಬಂಧಿಸಿದಂತೆ ವಿದ್ಯಾರ್ಥಿಗಳನ್ನು ಗುಂಪುಗಳನ್ನಾಗಿ ಮಾಡುವುದು. ಸಂಬಂಧಿಸಿದ ಗುಂಪುಗಳಿಗೆ ನಿರ್ವಹಿಸುವ ಪ್ರಯೋಗಕ್ಕನುಗುಣವಾಗಿ ಸೂಚಿಸಿ, ಸಲಹೆ, ಪರಿಕರಗಳ ಜೋಡಣೆ ಕ್ರಮ, ಮುನ್ನೆಚ್ಚರಿಕೆಯನ್ನು ನಿಖರವಾಗಿ ಅನುಕೂಲಕಾರನು ತಿಳಿಯಪಡಿಸುವುದು.

ಉದಾ: ಭೂಕುಸಿತ ಪ್ರಯೋಗಕ್ಕೆ ಸಂಬಂಧಿಸಿದಂತೆ –

**ಸೂಚನೆ** : ಸಂಬಂಧಿಸಿದ ಗುಂಪಿನವರು ಮಣ್ಣನ್ನು ಸಂಗ್ರಹಿಸುವುದು.

**ಸಲಹೆ** : ತರುವ ಮಣ್ಣು 'ರಾಳುರಾಳಾಗಿರಲಿ'.

| | | |
|---|---|---|
| **ಪರಿಕರಗಳು** | : | ಮಣ್ಣು, ನೀರು, ಪೇಪರ್‌ಕಟಿಂಗ್, ಸಸ್ಯ, ಪುಟ್ಟ ಮನುಷ್ಯ ಬೊಂಬೆಗಳು, ಮಳೆ ನೀರಿನ, ಪೈಪು, ಥರ್ಮಾಕೋಲ್, ಕಟ್ಟಿಗೆಯ ಕಡ್ಡಿಗಳು, ಇತ್ಯಾದಿ |
| **ಜೋಡಣೆ** | : | ಈ ಪರಿಕರಗಳನ್ನು ಭೂಮಿಯ ಮೇಲ್ಮೈ ರೂಪದಲ್ಲಿ ಜೋಡಿಸುವುದು ಹೇಗೆಂಬ ಕಲ್ಪನೆಯನ್ನು ಚರ್ಚೆ ಮೂಲಕ ತಿಳಿಸುವುದು. |
| **ಕ್ರಮ** | : | ತರಗತಿ ಗುಂಪಿಗೆ ಸೂಚನೆ |
| | – | ಎತ್ತರವಾದ ಮೇಜಿನ ಮೇಲೆ ತೆಗೆದುಕೊಂಡಿರುವ ಪರಿಕರಗಳನ್ನು ಹೇಗೆ ಜೋಡಿಸಬೇಕು ಎಂದು ತಿಳಿಸುವುದು.<br>ಮಣ್ಣಿನ ಜರುಗುವಿಕೆ ಗಮನಿಸುವುದು |
| | – | ಥರ್ಮಾಕೋಲಿನ ಕೆಳಭಾಗದಲ್ಲಿ ಜೋಡಿಸಿರುವ ಕಟ್ಟಿಗೆ ಕಡ್ಡಿಗಳ ಸ್ಥಾನ ಪಲ್ಲಟ ಮಾಡುವುದು ಹೇಗೆಂದು ತೋರಿಸುವುದು |
| | – | ಕುಸಿತವಾದ ಥರ್ಮಾಕೋಲ್ ಗಮನಿಸುವುದು ಹೇಗೆ, ಏಕೆ ಎಂಬುದನ್ನು ತಿಳಿಸುವುದು. |
| **ಮುನ್ನೆಚ್ಚರಿಕೆ** | : | ಪ್ರಯೋಗ ವಿಧಾನದಲ್ಲಿ ಅಪಾಯಕಾರಿ ಸಂದರ್ಭಗಳಲ್ಲಿ ಎಚ್ಚರದಿಂದಿರುವುದು. ನಿಮ್ಮ ಚಟುವಟಿಕೆಯು ಮೌಲ್ಯ ಮಾಪನಕ್ಕೆ ಒಳಪಡಿಸುವುದರಿಂದ ಈ ಮುಂದಿನ ಅಂಶಗಳನ್ನು ಪ್ರಸ್ತುತ ಪಡಿಸುವಾಗ ತಪ್ಪದೇ ಗಮನಿಸುವುದು.<br>– ಸೂಚನೆಗಳನ್ನು ಪಾಲಿಸುತ್ತಿರುವ ರೀತಿ<br>– ಪರಿಕರಗಳ ಬಳಕೆ<br>– ಪ್ರಯೋಗದ ಪರಿಣಾಮ<br>– ಪ್ರಯೋಗದ ಫಲಿತವನ್ನು ಸ್ವೀಕರಿಸುವ ರೀತಿ<br>– ಪ್ರಯೋಗದಲ್ಲಿ ನಾವಿನ್ಯತೆ<br>– ಪಾಲ್ಗೊಳ್ಳುವಿಕೆ<br>– ತರಗತಿ ಮಕ್ಕಳ ಆಸಕ್ತಿ, ಕುತೂಹಲಭರಿತವಾಗಿ ವೀಕ್ಷಿಸುವ ರೀತಿ.<br>– ಅನುಮಾನಗಳನ್ನು ಪ್ರಶ್ನಿಸುವ ಕ್ರಮ |

ಈ ರೀತಿ ಪೂರ್ವ ಸಿದ್ದತೆಯ ಹಂತದಲ್ಲಿ ಅನುಕೂಲಕಾರ ತನ್ನ ತರಗತಿ ಸಾಮರ್ಥ್ಯ, ದೊರೆಯುವ ಸಂಪನ್ಮೂಲಗಳನ್ನು ಕುರಿತಂತೆ, ಅಧ್ಯಾಯಕ್ಕೆ ಪೂರಕವಾಗಿ ಪ್ರಯೋಗ ಚಟುವಟಿಕೆ ಹೇಗಿರಬೇಕು, ಅದರ ಪ್ರಸ್ತುತಿಯ ಸ್ವರೂಪವನ್ನು ತರಗತಿಗೆ ಚರ್ಚೆ, ಸೂಚನೆಗಳ ಮೂಲಕ ಮನವರಿಕೆ ಮಾಡುತ್ತಾರೆ.

ನಂತರ ನಿರ್ದಿಷ್ಟ ಪಡಿಸಿದ ಅವಧಿಗೆ ತರಗತಿಯಲ್ಲಿ ಅನುಕೂಲಕಾರನ ಮಾರ್ಗದರ್ಶನದಲ್ಲಿ ಗುಂಪಿನ ಕಲಿಕಾರ್ಥಿಗಳು ಪ್ರಯೋಗ ಚಟುವಟಿಕೆಯನ್ನು ಪ್ರಸ್ತುತ ಪಡಿಸುವರು. ಈ ಸಂದರ್ಭದಲ್ಲಿ ತರಗತಿಯಲ್ಲಿನ ಅನುಮಾನ, ತೊಡಕು, ಗೊಂದಲ, ಹೆಚ್ಚಿನ ಮಾಹಿತಿ, ತರಗತಿಯಲ್ಲಿ ಕಲಿಕೆ (ಜ್ಞಾನ/ಭಾವನಾತ್ಮಕ) ಹೇಗಿತ್ತು. ಅದರ ಪರಿಣಾಮವೇನು? ಎಂಬುದನ್ನು ಕುರಿತಂತೆ ಸುಗಮಕಾರನು ಈ ಕೆಳಗೆ ಸೂಚಿಸಿರುವ ತಂತ್ರ ಮತ್ತು ಸಾಧನಗಳ ಮೂಲಕ ಮೌಲ್ಯಮಾಪನಕ್ಕೆ ಒಳಪಡಿಸುವನು.

**ಅನುಕೂಲಕಾರನು ಬಳಸಬಹುದಾದ ತಂತ್ರ ಮತ್ತು ಸಾಧನಗಳು :**

| **ತಂತ್ರ** | : | ಸಾಧನ |
|---|---|---|
| 1. ಅವಲೋಕನ / ವೀಕ್ಷಣೆ | : | **ವೀಕ್ಷಣಾ ಸೂಚಿ** |

- ಪಾಲಿಸಿದ ಸೂಚನೆಗಳು ಫಲಿತವಾದ ರೀತಿ
- ಪರಿಕರಗಳ ಕ್ರಮ ಬದ್ಧ ಬಳಕೆ
- ಪ್ರಯೋಗ ಮಾಡುವ ಗುಂಪಿನ ಹೊಂದಾಣಿಕೆ
- ಪ್ರಯೋಗದಿಂದ ಕಲಿಕೆ ಪ್ರೇರಣೆ ಪಡೆದ ರೀತಿ
- ಪ್ರಯೋಗವು ಕುತೂಹಲ, ಅನುಮಾನಗಳಿಗೆ ಉತ್ತರಿಸುವಂತಿರುವುದು.
- ವೈಜ್ಞಾನಿಕ ಭಾವನೆಯನ್ನು ಬಳಸಿದ ರೀತಿ(ಇತರರು)
- ನೈಜತೆಯನ್ನು ಪ್ರದರ್ಶಿಸುವಂತಿತ್ತೇ?
- ಪ್ರಯೋಗವು ಸರ್ವಸಮ್ಮತವಾಗಿತ್ತೇ?
- ಭೂಕುಸಿತ ಪರಿಣಾಮಕಾರಿಯಾಗಿತ್ತೇ?

- ಭೂಕುಸಿತಕ್ಕೆ ಕಾರಣಗಳನ್ನು ಅರ್ಥೈಸಿಕೊಳ್ಳಲಾಯಿತೇ?
- ಪ್ರಯೋಗದ ಮೂಲಕ ಮೂಡಿಬಂದ ಭೂಕುಸಿತದ ಪರಿಣಾಮಗಟ್ಟಗಳು ಸುಸ್ಪಷ್ಟವಾದವೇ?
- ಭೂಕುಸಿತ ಕುರಿತಂತೆ ಮುನ್ನೆಚ್ಚರಿಕಾ ಕ್ರಮಗಳು ಅರಿವಾಯಿತೇ?
- ಭಾರತದಲ್ಲಿ ಭೂಕುಸಿತ ಸಂಭಾವಿಸಬಹುದಾದ ಪ್ರದೇಶಗಳು ಅರಿವಾಯಿತೇ?

ಈ ವೀಕ್ಷಣಾ ಸೂಚಿಯ ಅನ್ವಯ ತರಗತಿಯಲ್ಲಿ ಅನುಕೂಲಿಸಲ್ಪಟ್ಟ ಪ್ರಯೋಗ ಚಟುವಟಿಕೆಯನ್ನು ಸುಗಮಕಾರನು, ಪೂರ್ವಸಿದ್ಧತಾ ಹಂತದಲ್ಲಿ ತಿಳಿಸಿದರೆ ಮೂಡಿ ಬಂದ ಹಿನ್ನೆಲೆಯನ್ನು ಪ್ರಶ್ನೆ, ಉತ್ತರ, ಮರುಪ್ರಶ್ನೆ, ಪಾಲ್ಗೊಳ್ಳುವಿಕೆ, ವೀಕ್ಷಿಸುವಿಕೆ, ತೊಡಗಿಕೊಳ್ಳುವಿಕೆ, ಮೂಲಕ ಸ್ಪಷ್ಟತೆಯ ಕಲಿಕಾಂಶವನ್ನು ಪಡೆದುಕೊಂಡು ಸ್ವಕಲಿಕೆ, ಅನುಭವಾತ್ಮಕ, ಜೀವನಾವಶ್ಯಕ ಬದುಕಿಗಾಗಿ ಜ್ಞಾನವನ್ನು ಕಟ್ಟಿಕೊಂಡು ವಿಷಯಾಧಾರಿತ ಕಲಿಕೆಯ ಎಲ್ಲೆಯಾಚೆ, ಅರಿವನ್ನು ಹೊಂದುವಲ್ಲಿ ಕಲಿಕಾರ್ಥಿಗಳ ಪಾತ್ರವನ್ನು ಕುರಿತಂತೆ ಮೌಲ್ಯಮಾಪನಕ್ಕೆ ಒಳಪಡಿಸುವರು.

**ಉಪಸಂಹಾರ :**

ಸಮಾಜ ವಿಜ್ಞಾನ ವಿಷಯದಲ್ಲಿ ಪ್ರಯೋಗ ವಿಧಾನವೂ ಪ್ರಯೋಗ ಚಟುವಟಿಕೆಯ ಮೂಲಕ ಕಲಿಕಾರ್ಥಿಗಳೂ ಕ್ರಿಯಾಶೀಲವಾಗಿ ಪಾಲ್ಗೊಂಡು ಪ್ರಾಯೋಗಿಕತೆ ಕಲಿಕಾಂಶದ ಗ್ರಹಿಕೆಗೆ ಉತ್ತಮ ಕಲಿಕಾಕಾರರು ತಮ್ಮ ಸಾಮರ್ಥ್ಯಾನುಸಾರ ಇಂತಹ ಚಟುವಟಿಕೆಗಳನ್ನು ತರಗತಿಯಲ್ಲಿ ಯಶಸ್ವಿಯಾಗಿ ತಪ್ಪದೇ ತರಬೇಕು ಎಂಬುದು ನೂತನ ಶಿಕ್ಷಣ ಕ್ರಮದ ದೃಢ ನಿರ್ಧಾರವಾಗಿದೆ.

ವಿಭಾಗ : **ಅರ್ಥಶಾಸ್ತ್ರ**

ಘಟಕ : **ಗ್ರಾಮೀಣಾಭಿವೃದ್ಧಿ**

ಕಲಿವಿನ ವಿಧಾನ : ಹೊರಸಂಚಾರ ವಿಧಾನ

ಬಳಸಿಕೊಂಡ ಚಟುವಟಿಕೆ : ಭೇಟಿ

ಅರ್ಥಶಾಸ್ತ್ರ ವಿಭಾಗಕ್ಕೆ ಸಂಬಂಧಿಸಿದಂತೆ 'ಗ್ರಾಮೀಣಾಭಿವೃದ್ಧಿ' ಘಟಕವನ್ನು ತರಗತಿ ಕೋಣೆಯಲ್ಲಿ ಅನುಕೂಲಿಸುವ ಸಂದರ್ಭದಲ್ಲಿ ಒಂದು ವಿಶಿಷ್ಟತಮವಾದ ಕಲಿಕಾ ವಿಧಾನ ವಾದ 'ಹೊರ ಸಂಚಾರ' ಎಂಬ ವಿಧಾನವನ್ನು ಅಳವಡಿಸಿಕೊಳ್ಳಬಹುದು. ಈ ವಿಧಾನಕ್ಕೆ ಪೂರಕವಾದ ಚಟುವಟಿಕೆಯಾಗಿ 'ಭೇಟಿ' ಎಂಬ ಪರಿಕಲ್ಪನೆಯನ್ನು ಪ್ರಸ್ತುತ ಪಡಿಸಬಹುದು.

ಬಹುತೇಕ, ಹೊರ ಸಂಚಾರ ವಿಧಾನ ಎಂದ ತಕ್ಷಣ ನಾವು 'ರೀ ಫ್ರೆಶ್'ಗಾಗಿ ಕೈಗೊಳ್ಳುವ ಚಟುವಟಿಕೆ ಎಂದು ಅರ್ಥೈಸಿಕೊಳ್ಳುತ್ತೇವೆ. ಹೌದು, ಆ ಆಲೋಚನೆ ಏನೋ ಸರಿ, ಈ ರೀಫ್ರೆಶ್ ನ್ನು ಪರಿಣಾಮಕಾರಿ ಕಲಿಕೆಗಾಗಿ ಬಳಸಿಕೊಂಡಾಗ, ಹೊಸ ಸಂಚಾರವು ಕಲಿಕಾ ವಿಧಾನವಾಗಿಯೂ ಮಾರ್ಪಡುತ್ತದೆ.

ಅಂದರೆ ಕಲಿವಿನ ವಿಧಾನವನ್ನು ಹೊರಸಂಚಾರವನ್ನು ಅರ್ಥೈಸುವುದಾದರೆ 'ಜ್ಞಾನವನ್ನು ಕಟ್ಟಿಕೊಳ್ಳಲು ಕಲಿಕಾ ಕೋಣೆಯ ಹೊರತಾಗಿ, ನಿರ್ದಿಷ್ಟ ಪಡಿಸಿಕೊಂಡ ಕಲಿಕಾಂಶದ ಪರಿಣಾಮಕಾರಿಯಾಗಿ ಅರ್ಥೈಸಿಕೊಳ್ಳಲು ಪೂರ್ವ ತಯಾರಿಯೊಂದಿಗೆ ಕಲಿಕಾರ್ಥಿಗಳು ಆಯ್ಕೆ ಮಾಡಿಕೊಂಡ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುವ ವಿಧಾನವೇ ಹೊರ ಸಂಚಾರ ವಿಧಾನವಾಗಿದೆ'.

ಈ ಹೊರ ಸಂಚಾರ ವಿಧಾನದಲ್ಲಿ ಪ್ರಮುಖ ಚಟುವಟಿಕೆಯಾಗಿ ಅಳವಡಿಸಿಕೊಳ್ಳ ಬಹುದಾದದ್ದು 'ಭೇಟಿ'. ಇಂತಹ 'ಭೇಟಿಗೆ ಒಂದು ನಿರ್ದಿಷ್ಟತೆ, ಖಚಿತ ಪಡಿಸಿಕೊಂಡ ಸ್ಥಳ, ಸಮಯ, ಕಲಿಕಾಂಶವನ್ನು ಒಳಗೊಂಡಂತೆ ಭೇಟಿ ನೀಡಿ ಅವಲೋಕಿಸಿ ಕಟ್ಟಿಕೊಳ್ಳುವ ಜ್ಞಾನದ ವ್ಯಾಪ್ತಿಯನ್ನು ಒಳಗೊಂಡಿರುತ್ತದೆ. ಭೇಟಿ ನೀಡುವ ಸ್ಥಳದ ಪೂರ್ವ ಮಾಹಿತಿ ಸಂಬಂಧಿಸಿದಂತೆ ಪೂರ್ವಯಾರಿ, ಭೇಟಿ ನೀಡುವವರ ಸಂಖ್ಯೆಯನ್ನು ಇಲ್ಲಿ ಪರಿಗಣನೆಗೆ

ತೆಗೆದುಕೊಳ್ಳಬೇಕಾಗುತ್ತದೆ. ಇಂತಹ ಭೇಟಿಯನ್ನು ಹೊರಸಂಚಾರ ವಿಧಾನದ ಅಡಿಯಲ್ಲಿ ತರಗತಿಯಲ್ಲಿ ಅನುಕೂಲಿಸಲು ಈ ಕೆಳಕಂಡಂತೆ ಪರಿಭಾವಿಸುವುದು. ಮೊದಲನೇ ಹೊರಸಂಚಾರ ಕುರಿತಂತೆ ಪೂರ್ವ ಸಿದ್ಧತೆಯನ್ನು ತರಗತಿಯಲ್ಲಿ ಸುಗಮಕಾರನು ಪ್ರಸ್ತುತಪಡಿಸುವುದು.

* ಗ್ರಾಮೀಣಾಭಿವೃದ್ಧಿ ಕುರಿತಂತೆ ಜ್ಞಾನವನ್ನು ಕಟ್ಟಿಕೊಳ್ಳಲು ಹೊರ ಸಂಚಾರವನ್ನು ಕೈಗೊಳ್ಳುವ ಉದ್ದೇಶವನ್ನು ತರಗತಿಗೆ ತಿಳಿಸುವುದು.

  ಉದಾ: ಗ್ರಾಮೀಣ ವ್ಯವಸ್ಥೆಯ ವಾಸ್ತವ ಸ್ಥಿತಿಗತಿಗಳನ್ನು ಕಣ್ಣಾರೆಕಂಡು ಅರ್ಥೈಸಿಕೊಳ್ಳಲು

* ಕಲಿಕಾಂಶಕ್ಕೆ ಪೂರಕವಾಗಿ ನಿರ್ದಿಷ್ಟ ಪಡಿಸಿಕೊಂಡ ಗ್ರಾಮ, ದಿನಾಂಕ ಮತ್ತು ಸಮಯವನ್ನು ತರಗತಿಗೆ ಚರ್ಚಿಸಿ ತೀರ್ಮಾನಿಸಿ ಸೂಚಿಸುವುದು.

* ಈ ಸಂದರ್ಭದಲ್ಲಿ ತರಗತಿಯನ್ನು ಗುಂಪುಗಳನ್ನಾಗಿ ಮಾಡಲು ಅನುಕೂಲಕಾರನು ನಿರ್ಧಾರ ಮಾಡಿ ತಿಳಿಸುವುದು.

* ಪ್ರತಿ ಗುಂಪಿಗೆ ಭೇಟಿ ಸಂದರ್ಭದಲ್ಲಿ ಕಲಿಕಾಂಶವನ್ನು ಕುರಿತಂತೆ ಸಂದರ್ಶಿಸುವ ವ್ಯಕ್ತಿಗಳು ವೀಕ್ಷಿಸುವ ರೀತಿ, ಪ್ರಶ್ನಾವಳಿಗಳ ರಚನೆ, ಭೇಟಿಗಾರನ ವರ್ತನೆ ಹೇಗಿರ ಬೇಕೆಂಬುದನ್ನು ಪೂರ್ವಸಿದ್ಧತೆಯಲ್ಲಿ ಸೂಚಿಸಬೇಕು.

  ಉದಾ: ಸಂದರ್ಶಿಸಿ ಗ್ರಾಮಪಂಚಾಯಿತಿ ಅಧ್ಯಕ್ಷ / ಸದಸ್ಯ / ಊರಿನ ಮುಖಂಡ

  ವೀಕ್ಷಿಸುವ ಸ್ಥಳ : ರಸ್ತೆ ಬೀದಿದೀಪ, ಸ್ವಚ್ಛತೆ, ಶಾಲೆ ಮನೆಗಳ ಸ್ವರೂಪ, ವಿಭಿನ್ನ ವ್ಯಕ್ತಿಗಳು, (ರೈತ, ಕೂಲಿಕಾರ, ಉದ್ಯೋಗಸ್ಥ, ಪಶುಪಾಲಕ, ಗೃಹಿಣಿಯರು, ಮಕ್ಕಳು, ಯುವಕರು ಇತ್ಯಾದಿ)

  ವೀಕ್ಷಿಸುವ ರೀತಿ : ಮೂಲ ಸೌಕರ್ಯಗಳನ್ನು ಆಧುನಿಕತೆಯ ಬೆಳವಣಿಗೆ ಹಿನ್ನಲೆಯಲ್ಲಿ ಗಮನಿಸುವುದು. ವಿವಿಧ ಬಗೆಯ ಉದ್ಯೋಗಸ್ಥರು, ಅವರುಗಳ ನಡುವಿನ ವ್ಯತ್ಯಾಸ, ಹೋಲಿಕೆ, ಸ್ಥಿತಿಗತಿಗಳನ್ನು ಗಮನಿಸುವುದು ಹೇಗೆಂಬುದನ್ನು ಸ್ಪಷ್ಟವಾಗಿ ಅನುಕೂಲಕಾರ ಸೂಚಿಸುವುದು.

* ಭೇಟಿ ನೀಡಿದ ಸಂದರ್ಭದಲ್ಲಿ ಕಲಿಕೆಗೆ ಬೇಕಾದ ವರ್ತನೆ ಹೇಗಿರಬೇಕೆಂದು ಸೂಚಿಸುವುದು. ಉದಾ: ಸಂದರ್ಶನ, ವೀಕ್ಷಣೆ, ಹಾಗೂ ಒಡನಾಟಗಳ ಸಂದರ್ಭದಲ್ಲಿ ಭಾಷೆ, ಸಂಬಂಧಿಸಿದಂತೆ ಕೇಳುವ ಪ್ರಶ್ನೆ, ಅನುಮಾನಗಳನ್ನು ಪ್ರಸ್ತುತ ಪಡಿಸುವಾಗ ಕಲಿಕಾರ್ಥಿಯು ಸಹಜವಾದ ವಿನಯವಂತಿಕೆಯನ್ನು ಒಳಗೊಂಡಿರಲು ಸೂಚಿಸುವುದು.

* ಕಲಿಕಾಂಶಗಳನ್ನು ಸಂಗ್ರಹಿಸವು ಛಾಯಾ ಚಿತ್ರಗಳನ್ನು ತೆಗೆಯುವ ಸಂದರ್ಭದ ಸೂಚನೆಗಳನ್ನು ಹೇಳುವುದು.
* ತಮಗೆ ನೀಡಿದ ಕಲಿಕಾಂಶಕ್ಕೆ ಹೊಂದಿಕೊಂಡಂತೆ ಗುಂಪಿನ ಕಲಿಕಾರ್ಥಿಗಳು ಆ ವ್ಯಾಪ್ತಿಯಲ್ಲಿ ಜ್ಞಾನವನ್ನು ಕಟ್ಟಿಕೊಳ್ಳುವುದು ಹೇಗೆ ಎಂಬುದನ್ನು ಸೂಚಿಸುವುದು.

ಉದಾ: ಉದ್ಯೋಗದ ಸ್ವರೂಪ

* ಮೂಲಭೂತ ಸೌಕರ್ಯಗಳು
* ಆರೋಗ್ಯ ಮತ್ತು ನೈರ್ಮಲ್ಯ
* ಸ್ತ್ರೀ ಮತ್ತು ಗ್ರಾಮೀಣಾಭಿವೃದ್ಧಿ
* ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ಯ
* ಸರ್ಕಾರಿ ಯೋಜನೆಗಳು / ಸೇವೆಗಳು

ಇವುಗಳನ್ನು ಕುರಿತಂತೆ ಭೇಟಿ ಸಂದರ್ಭದಲ್ಲಿ ಕಟ್ಟಿಕೊಳ್ಳಬೇಕಾದ ಜ್ಞಾನವು ಹೀಗೇ ಇರಬೇಕು ಹಾಗೂ ಸಂಬಂಧಿಸಿದಂತೆ ಪ್ರಶ್ನಾವಳಿಗಳನ್ನು ರೂಪಿಸಿಕೊಳ್ಳಲು ಸೂಚಿಸುವುದು.

* ಕಲಿಕಾರ್ಥಿಗಳು ಭೇಟಿಯ ಸಂದರ್ಭದಲ್ಲಿ ಅನುಕೂಲಕಾರನು ತಿಳಿಸಿರುವ ಸೂಚನೆಗಳನ್ನು ತಪ್ಪದೇ ಪಾಲಿಸುವುದು ಹಾಗೂ ಈ ಅಂಶವು ಮೌಲ್ಯಮಾಪನಕ್ಕೆ ಒಳಪಡುತ್ತದೆ ಎಂಬ ಅರಿವನ್ನು ಕಲಿಕಾರ್ಥಿಗಳಿಗೆ ಕಟ್ಟಿಕೊಡುವುದು.
* ಭೇಟಿಯ ಸಂದರ್ಭದಲ್ಲಿ ಕಟ್ಟಿಕೊಂಡ ಜ್ಞಾನಪೂರಕವಾದ ಅನುಭವ, ಮಾಹಿತಿ ಚಿತ್ರಗಳನ್ನು ಪರಸ್ಪರ ಎಲ್ಲರೂ ಒಂದು ಕಡೆ ಸೇರಿ ಘಟಕಕ್ಕೆ ಹೊಂದಿಕೊಂಡಂತೆ ವಿನಿಮಯ ಮಾಡಿಕೊಳ್ಳುವುದು ಹೇಗೆ ಎಂದು ಹೇಳುವುದು ಭೇಟಿ ನೀಡಿದ ಗ್ರಾಮದಲ್ಲಿಯೇ ಇದಕ್ಕೆ ಸಮಯಾವಕಾಶ, ಸ್ಥಳವಾಕಾಶ ಮಾಡಿಕೊಳ್ಳುವುದು.

(ಸಾಧ್ಯವಾದರೆ 'ಗ್ರಾಮ-ಜ್ಞಾನ' ಶೀರ್ಷಿಕೆಯಡಿಯಲ್ಲಿ ಸುಂದರ ಕಾರ್ಯಕ್ರಮವೊಂದು ಮೂಡಿಬರಲಿ)

ಸೂಚನೆ : ಪೂರಕವಾಗಿ ಅನುಕೂಲಕಾರ, ಕಲಿಕಾರ್ಥಿಗಳು ಚರ್ಚಿಸಿ ತೀರ್ಮಾನ ಕೈಗೊಳ್ಳುವುದು.

* ಈ ಕಾರ್ಯಕ್ರಮ, ಕಲಿಕಾಂಶ ಕಲಿಕಾರ್ಥಿಗಳಲ್ಲಿ ಅನುಭವಾತ್ಮಕವಾಗಿ ಜ್ಞಾನವನ್ನು ಖಾತ್ರಿ ಪಡಿಸಿಕೊಳ್ಳುವಂತೆ ಅನುಕೂಲಕಾರ ಗಮನಿಸುವುದು.

ಈ ಎಲ್ಲಾ ಪೂರ್ವಸಿದ್ಧತೆಯೊಂದಿಗೆ ಅನುಕೂಲಕಾರನ ಸಲಹೆ ಮಾರ್ಗದರ್ಶನದಂತೆ, ನಿರ್ದಿಷ್ಟ ಪಡಿಸಿದ ದಿನಾಂಕ ಹಾಗೂ ಸಮಯದಂದು ಕಲಿಕಾರ್ಥಿಗಳೆಲ್ಲರೂ

'ಗ್ರಾಮೀಣಾಭಿವೃದ್ಧಿ' ಘಟಕದ ಪರಿಣಾಮಕಾರಿ ಕಲಿಕೆಗೆ ಆಯ್ಕೆ ಮಾಡಿಕೊಂಡ ಗ್ರಾಮಕ್ಕೆ (ತಮ್ಮ ಅನುಕೂಲದಂತೆ) ಭೇಟಿ ನೀಡುವರು. ಸೂಚನೆಯಂತೆ ಕಲಿಕಾರ್ಥಿ ಗಳು (ಗುಂಪುವಾರು) ಕಲಿವಿನಲ್ಲಿ ತೊಡಗುವರು. ತಮ್ಮ ತಮ್ಮ ವ್ಯಾಪ್ತಿಯಲ್ಲೂ ಸಿದ್ಧಪಡಿಸಿಕೊಂಡಿರುವ ಪ್ರಶ್ನಾವಳಿಗಳು, ಪರಿಕರಗಳು, ಜ್ಞಾನ ಕಟ್ಟಿಕೊಳ್ಳಲು ಅಗತ್ಯವಾಗಿ ಬೇಕಿರುವ ಅನ್ವಯ ಕಲಿಕಾಂಶದ ಹಿನ್ನಲೆಯಲ್ಲಿ ತಮ್ಮನ್ನು ಆಸಕ್ತಿ, ಕೌಶಲ್ಯ, ಕುತೂಹಲ, ಮನೋಧೋರಣೆ (ಸಂವೇದನೆ), ತಾಳ್ಮೆ (ಮೌಲ್ಯ)ಗಳೆಂಬ ನಿರ್ದಿಷ್ಟಕಗಳೊಂದಿಗೆ ಜ್ಞಾನವನ್ನು ಕಟ್ಟಿಕೊಳ್ಳುವರು.

ಇದಾದ ನಂತರ ಅನುಕೂಲಕಾರನ ಸೂಚನೆಯಂತೆ ಗ್ರಾಮದ ನಿಗದಿತ ಸ್ಥಳದಲ್ಲಿ 'ಗ್ರಾಮ–ಜ್ಞಾನ' ಕಾರ್ಯಕ್ರಮ ರೂಪಿಸಿ, ಕಲಿಕಾಂಶವನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವರು. ಈ ಸಂದರ್ಭದಲ್ಲಿ ಪರಸ್ಪರ ಚರ್ಚೆ, ಪ್ರಶ್ನೆ, ಅನುಮಾನ, ಅನುಭಾವ, ಸಂಗ್ರಹಗಳ ಮೂಲಕ ಜ್ಞಾನವನ್ನು ವಿನಿಮಯ ಮಾಡಿಕೊಳ್ಳುವರು.

ಉದಾ: ಗ್ರಾಮಾಭಿವೃದ್ಧಿಯಲ್ಲಿ ಗ್ರಾಮ ಸದಸ್ಯರ ಪಾತ್ರ (ಚರ್ಚೆ)

* ಪಡಿತರ ವ್ಯವಸ್ಥೆ ಗ್ರಾಮದಲ್ಲಿ ಹೇಗೆ ನಿರ್ವಹಿಸಲ್ಪಡುತ್ತಿದೆ (ಪ್ರಶ್ನೆ)
* ಪಂಚಾಯತ್ ರಾಜ್ಯ ವ್ಯವಸ್ಥೆಯಿಂದಾಗಿಯೂ ಗ್ರಾಮಗಳು ಅಭಿವೃದ್ಧಿ ಆಗಿಯೇ ಇಲ್ಲ(ಅನುಮಾನ)
* ಸ್ತ್ರೀ ಶಕ್ತಿ ಸಂಘಗಳಿಂದಾಗಿ ಮಹಿಳೆಯರು ಸಬಲರಾಗುತ್ತಿದ್ದಾರೆ (ಅನುಭವ)
* ಕೃಷಿಯ ಧಾರುಣ ಸ್ಥಿತಿಯಿಂದಾಗಿ ಗ್ರಾಮಗಳು ಜೀವ ಕಳೆದುಕೊಳ್ಳುತ್ತಿವೆ (ಅನುಭವ)
* ಗ್ರಾಮೀಣ ಭಾಗಗಳಲ್ಲಿ ಮೂಲ ಸೌಕರ್ಯಗಳ ಕೊರತೆ ಕಾಣುತ್ತದೆ. ಕಾರಣಗಳನ್ನು ಸಂಗ್ರಹಿಸುವುದು (ಸಂಗ್ರಹ)

ಈ ರೀತಿ ತಮ್ಮ ತರಗತಿ ಮಕ್ಕಳ ಸಾಮರ್ಥ್ಯ, ಭೇಟಿ ನೀಡಿದ ಗ್ರಾಮ ಹಾಗೂ ಈ ಚಟುವಟಿಕೆ ರೂಪಿಸಲು ಅನುಕೂಲಕಾರ ಸಾಮರ್ಥ್ಯದ ಹಿನ್ನಲೆಯಲ್ಲಿ 'ಗ್ರಾಮೀಣಾಭಿವೃದ್ಧಿ ಘಟಕದ ಜ್ಞಾನವನ್ನು ತರಗತಿಯ ಕಲಿಕಾರ್ಥಿಗಳು ಪಡೆದುಕೊಳ್ಳುವರು.

ಹೀಗೆ ಪಡೆದುಕೊಂಡ ಮಕ್ಕಳ ಕಲಿಕೆಯು, ಘಟಕಕ್ಕೆ ಸಂಬಂಧಿಸಿದಂತೆ, ಜ್ಞಾನವಲಯ ಹಾಗೂ ಭಾವನಾತ್ಮಕ ವಲಯವನ್ನು ಹೇಗೆ ದೃಢಪಡಿಸಿದೆ ಎಂಬುದನ್ನು ಅನುಕೂಲಕಾರನು ಮೌಲ್ಯಮಾಪನಕ್ಕೆ ಈ ಮುಂದಿನ ತಂತ್ರಗಳು ಮತ್ತು ಸಾಧನಗಳನ್ನು ಬಳಸಿಕೊಳ್ಳುವ ಮೂಲಕ ಅರ್ಥೈಸಿಕೊಳ್ಳುವನು.

**ಮೌಲ್ಯಮಾಪನ ಬಳಸಿಕೊಂಡ ತಂತ್ರ ಮತ್ತು ಸಾಧನಗಳು :**

ಮೌಲ್ಯಮಾಪನವು ಕಲಿಕಾರ್ಥಿಯ ಜ್ಞಾನವಲಯ ಹಾಗೂ ಭಾವನಾತ್ಮಕ ವಲಯ ವನ್ನು ದೃಢಪಡಿಸುವಂತೆರುವುದು ಅಗತ್ಯ.

| | | |
|---|---|---|
| **ತಂತ್ರಗಳು** | – | **ಸಾಧನಗಳು** |
| 1. ಪರೀಕ್ಷೆ | – | ಮೌಖಿಕ ಪ್ರಶ್ನೆಗಳು |
| | | ಮೌಖಿಕ ಪ್ರಶ್ನೆಗಳ ಸ್ವರೂಪ: |

ಮೌಖಿಕ ಪ್ರಶ್ನೆಗಳು (ಸ್ವರೂಪ)ಕಲಿಕಾರ್ಥಿಯ ವ್ಯಕ್ತಿಗತ ಕಲಿಕೆ, ಸ್ವಭಾವ, ವರ್ತನೆಗಳನ್ನು ಪರೀಕ್ಷಿಸುವಂತಿದ್ದು, 'ಸಂದರ್ಶನ' ಮಾದರಿಗೆ ಇಂಬು ನೀಡುತ್ತದೆ.

ಮೌಖಿಕ ಪ್ರಶ್ನೆಗಳು, ಕಲಿಕಾರ್ಥಿಯಿಂದ ಒಂದು ಅಂಶದ ಉತ್ತರವನ್ನು ನಿರೀಕ್ಷಿಸುವುದರ ಜೊತೆಗೆ ತಾರ್ಕಿಕವಾದ ಚಿಂತನೆ, ಆಲೋಚನೆಗಳನ್ನು ಮಂಡಿಸುವಂತೆ ಅವಕಾಶಗಳನ್ನು ಕಲ್ಪಿಸುತ್ತದೆ. ಅಲ್ಲದೆ ಈ ಪ್ರಶ್ನೆಗಳು ಕಲಿಕಾರ್ಥಿಗಳತೊಡಗಿಸಿಕೊಳ್ಳುವಿಕೆ (ಆಸಕ್ತಿ, ಮೌಲ್ಯ, ಅನ್ವಯ, ಕೌಶಲ್ಯ, ಮನೋಧೋರಣೆ)ಯನ್ನು ಪರೀಕ್ಷಿಸುತ್ತದೆ.

**ಉದಾ: ಜ್ಞಾನವಲಯ**

* ಗ್ರಾಮೀಣಾಭಿವೃದ್ಧಿ ಎಂದರೇನು?
* ಗ್ರಾಮೀಣ ಜನರು ನಗರಗಳಿಗೆ ವಲಸೆ ಹೋಗಲು ಕಾರಣಗಳೇನು?
* ರೈತನ ಜೀವನಮಟ್ಟ ಸುಧಾರಿಸುವಲ್ಲಿ ಕೃಷಿ ಸಂಬಂಧೀ ಉದ್ಯೋಗಗಳು ಹೇಗೆ ಪಾತ್ರ ವಹಿಸುತ್ತವೆ ಎಂಬುದನ್ನು ವಿಶ್ಲೇಷಿಸಿರಿ
* ಗ್ರಾಮಗಳನ್ನು ಅಭಿವೃದ್ಧಿ ಪಡಿಸುವಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಕುರಿತಂತೆ ನಿಮ್ಮ ಸಲಹೆಗಳೇನು?
* ಭೇಟಿ ನೀಡಿದ ಗ್ರಾಮದ ಪ್ರಮುಖ ಸಾಮಾಜಿಕ ಸಮಸ್ಯೆಗಳೇನು? ಅದಕ್ಕೆ ನೀವು ನೀಡುವ ಪರಿಹಾರೋಪಾಯಗಳೇನು?

* ಗ್ರಾಮೀಣ ಸಂಸ್ಕೃತಿಯನ್ನು ಶ್ರೀಮಂತಗೊಳಿಸುವ ಬಗೆ ಹೇಗೆ?
* ಸಮಾಜ ಕಲ್ಯಾಣ ಯೋಜನೆಗಳನ್ನು ಗ್ರಾಮೀಣ ಭಾಗಗಳಿಗೆ ತಲುಪಿಸಲು ಗ್ರಾಮ ಪಂಚಾಯಿತಿ ಸದಸ್ಯನ ಪಾತ್ರವೇನು?
* ಉದ್ಯೋಗಸ್ಥ ಮಹಿಳೆ ಕುಟುಂಬ ನಿರ್ವಹಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತಾಳೆ ಸಮರ್ಥಿಸಿರಿ.

ಯೋಜನೆ – **ಭಾವನಾತ್ಮಕ ವಲಯ (ಯೋಜನಾ ಸೂಚಿ)**

* ನೀವು ಭೇಟಿ ನೀಡಿದ ಗ್ರಾಮದ ಸಮಸ್ಯೆಗಳನ್ನು ಚಿತ್ರದೊಂದಿಗೆ ಸಂಗ್ರಹಿಸಿ ಪಟ್ಟಿ ಮಾಡಿರಿ (ಆಸಕ್ತಿ – ತಯಾರಿಕೆ)
* ಕುಟುಂಬದ ಆರ್ಥಿಕ ದೃಢತೆಯನ್ನು ಕಾಪಾಡುವಲ್ಲಿ ಸ್ತ್ರೀ ಸಮಾನತೆ' ಅನಿವಾರ್ಯ ಈ ಹೇಳಿಕೆಯನ್ನು ನಿಮ್ಮ ಅಭಿಪ್ರಾಯಗಳೊಂದಿಗೆ ಸಮರ್ಥಿಸಿರಿ (ಮೌಲ್ಯ–ಸಮಾನತೆ)
* ಅಧಿಕಾರದ ವಿಕೇಂದ್ರೀಕರಣದಿಂದಲೇ ಗ್ರಾಮಗಳ ಪ್ರಗತಿ ಸಾಧ್ಯ ಎಂಬ ಹಿನ್ನಲೆಯಲ್ಲಿ ಅಸ್ಥಿತ್ವಕ್ಕೆ ಬಂದ ಪಂಚಾಯತ್ ರಾಜ್ ವ್ಯವಸ್ಥೆಯ ಆಡಳಿತ ಪ್ರಕ್ರಿಯೆ ಕುರಿತ ವರದಿ ತಯಾರಿಸಿ, ಸೂಕ್ತ ಉದಾಹರಣೆಗಳೊಂದಿಗೆ ತರಗತಿಯಲ್ಲಿ ಮಂಡಿಸಿರಿ.

(ಕೌಶಲ್ಯ – ಮಂಡನೆ)

* ಆರೋಗ್ಯವಂತ ಗ್ರಾಮೀಣ ಬದುಕಿಗೆ ನಿಮ್ಮ ಸಲಹೆಗಳೇನು?(ಅನ್ವಯ–ಸಲಹೆ)
* ಗ್ರಾಮೀಣ ಭಾಗದ ರೈತರನ್ನು ಕುರಿತಂತೆ ನಿಮ್ಮ ಅಭಿಪ್ರಾಯಗಳನ್ನು ಸಂಗ್ರಹಿಸಿರಿ (ಮನೋಧೋರಣೆ – ಕಾಳಜಿ). 'ವಿದ್ಯಾವಂತ ಮಹಿಳೆ ಸದೃಢ ಸಮಾಜವನ್ನು ನಿರ್ಮಿಸಬಲ್ಲಳು' ಮಾತನ್ನು ಮೆಚ್ಚುವಿರಾ? ವಿವರಿಸಿ
* ಜಾಗತೀಕರಣದಿಂದಾಗಿ ಗ್ರಾಮೀಣ ಭಾಗಗಳು ಅವಕಾಶದಿಂದ ವಂಚಿತವಾಗಿವೆ. ಸ್ಪರ್ಧೆ ಏರ್ಪಡಿಸಿ. (ಆಸಕ್ತಿ – ಪಾಲ್ಗೊಳ್ಳುವಿಕೆ)

(ಯೋಜನೆಗೆ ಸಂಬಂಧಿಸಿದಂತೆ ಮೌಲ್ಯಮಾಪನ ಸೂಚಿಯನ್ನು (ಯೋಜನಾಸೂಚಿ) ಅನುಬಂಧ 3 ರಲ್ಲಿ ನೀಡಲಾಗಿದೆ.)

**ಉಪಸಂಹಾರ** : ಪ್ರಸ್ತುತ ಗ್ರಾಮೀಣಾಭಿವೃದ್ಧಿ ಘಟಕಕ್ಕೆ ಸಂಬಂಧಿಸಿದಂತೆ, ಹೊರ ಸಂಚಾರ ವಿಧಾನದ ಮೂಲಕ ಭೇಟಿ ಎಂಬ ಚಟುವಟಿಕೆಯನ್ನು ಕಲಿಕಾರ್ಥಿಗಳೂ ಜ್ಞಾನವನ್ನು ಕಟ್ಟಿಕೊಳ್ಳುವುದಕ್ಕೆ ಪೂರಕವಾದ ಕಲಿಕಾ ಸಂದರ್ಭ ಹೇಗೆ ಅನು ಕೂಲಿಸಲ್ಪಟ್ಟಿತು? ಅದರ ಕಲಿವಿನ ಪರಿಣಾಮಗಳು ಏನು? ಎಂಬುದನ್ನು ವಿಸ್ತೃತವಾಗಿ ಅರ್ಥೈಸಲಾಗಿದ್ದು, ಈ ಸಂಬಂಧ ತರಬೇತುದಾರರು, ಶಿಬಿರದಲ್ಲಿ ಕಲಿಕೆಯ ಪ್ರತಿಯೊಬ್ಬ ಮಗುವನ್ನು ತಲುಪುವಂತೆ ಎಚ್ಚರವನ್ನು ವಹಿಸಿ ಸ್ವೀಕರಿಸುವಂತೆ ಮಾಡಬೇಕೆಂಬುದು ಇಲ್ಲಿನ ಮಹತ್ತರವಾದ ಆಶಯವಾಗಿದೆ.

**ನಿರಂತರ ಮತ್ತು ವ್ಯಾಪಕ ಮೌಲ್ಯ ಮಾಪನ ಕುರಿತಂತೆ ದಾಖಲೆಗಳ ನಿರ್ವಹಣೆ**

**ಸ್ವರೂಪ :**

ಕಲಿಕೆ ಮತ್ತು ಅದರ ಪರಿಣಾಮವನ್ನು ದೃಢೀಕರಿಸಿಕೊಳ್ಳಲು ಅನುಕೂಲಕಾರನು ಖಾತ್ರಿ ಮಾಡಿಕೊಂಡು ಕಲಿವನ್ನು ಮುಂದುವರೆಸಲು ದಾಖಲೆಗಳನ್ನು ನಿರ್ವಹಿಸಬೇಕಾಗುತ್ತದೆ. ಅದರಲ್ಲೂ ಇತ್ತೀಚೆಗೆ ವಿನೂತನ ಪರಿಕಲ್ಪನೆ ಅಡಿಯಲ್ಲಿ ತರಗತಿಗಳನ್ನು ಪ್ರವೇಶಿಸಿರುವ ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ (ಸಿಸಿಇ – 2009) ದಾಖಲೆಗಳ ನಿರ್ವಹಣೆಯು, ಕಲಿಕಾರ್ಥಿಗಳ ಅನುಕೂಲಕಾರನಿಗೆ, ಪೋಷಕ ಹಾಗೂ ಭಾಗೀದಾರನಿಗೆ ಏಕೆ ಹಾಗೂ ಹೇಗೆ ಅನಿವಾರ್ಯ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತದೆ.

ಈ ಸಂದರ್ಭದಲ್ಲಿ ಅನುಕೂಲಕಾರರು ದಾಖಲೆಗಳ ನಿರ್ವಹಣೆ ಸಿಸಿಇ ಅಡಿಯಲ್ಲಿ ಹೆಚ್ಚಿಗೆ ಹೊರೆಯನ್ನು ತಂದೊಡ್ಡಿದೆ ಎಂದು ಭಾವಿಸಿದಂತಿದೆ. ಆದರೆ ದಾಖಲೆಗಳ ನಿರ್ವಹಣೆ ಈ ರೀತಿಯ ಒತ್ತಡವನ್ನು ತಂದೊಡ್ಡವುದಿಲ್ಲ. ಏಕೆಂದರೆ ಆಯಾ ಘಟಕವನ್ನು ಅನುಕೂಲಿಸಿದ ಸಂದರ್ಭದಲ್ಲಿಯೇ ಕ್ರಮಾನುಗತವಾಗಿ ನಿರ್ವಹಿಸಿದರೆ ಖಂಡಿತ ಹೊರೆಯಾಗುವುದಿಲ್ಲ. ಆ ದಾಖಲೆಗಳು ಯಾವುವು ಎಂಬುದನ್ನು ನಮೂನೆಗಳೊಂದಿಗೆ ಲಗತ್ತಿಸಿ ಇಲ್ಲಿ ಕೊಡಲಾಗುತ್ತದೆ. ನಿರ್ವಹಿಸುವುದು ಹೇಗೆಂಬುದನ್ನು ಸೂಕ್ಷ್ಮವಾಗಿ ನೀಡಿದ್ದು ತರಬೇತಿಯ ಸಂದರ್ಭದಲ್ಲಿ ವಿಸ್ತೃತವಾಗಿ ತಿಳಿಸಲಾಗುವುದು.

ಹತ್ತನೇ ತರಗತಿಯು ಮಗುವಿನ ಕಲಿಕೆಯಲ್ಲಿ ಪ್ರಮುಖ ಘಟ್ಟವಾಗಿದ್ದು ಆ ಕಲಿಕೆಯ ಮೌಲ್ಯಮಾಪನ, ದಾಖಲೆ, ಫಲಿತಾಂಶ, ಒಳಗೊಂಡ ಪ್ರಕ್ರಿಯೆ ಈ ವರ್ಷದಿಂದ ವಿನೂತನ ರೂಪದೊಂದಿಗೆ ಪರಿಕಲ್ಪಿತವಾಗಿದೆ. ಹಾಗಾಗಿ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದಲ್ಲಿ ದಾಖಲೆಗಳ ನಿರ್ವಹಣೆ, ಪ್ರಮುಖವಾದ ಲಕ್ಷಣಗಳೊಂದಿಗೆ ನಿರ್ದಿಷ್ಟ ಉದ್ದೇಶಗಳನ್ನು ಒಳಗೊಂಡಿದೆ ಎಂಬುದನ್ನು ಮರೆಯುವಂತಿಲ್ಲ.

**<u>ಲಕ್ಷಣಗಳು :</u>**

* ನಮೂನೆಗಳು ಸ್ಪಷ್ಟವಾಗಿರಲಿ
* ದಾಖಲೆಗಳ ನಿರ್ವಹಣೆ ನಿರಂತರವಾಗಿರಲಿ
* ಕಲಿಕಾರ್ಥಿಗಳ ಸಮಗ್ರ ವ್ಯಕ್ತಿತ್ವವನ್ನು ದೃಢೀಕರಿಸುವಂತಿರಬೇಕು
* ಅನುಕೂಲಕಾರ ಸುಲಭವಾಗಿ ನಿರ್ವಹಿಸುವಂತಿರಬೇಕು
* ಪಠ್ಯಪುಸ್ತಕದ ಆಶಯಗಳನ್ನು ಈಡೇರಿಸುವಂತಹ ನಮೂನೆಯ ಮಾದರಿ ಇರಬೇಕು.
* ಮಗುವಿನ ಕಲಿಕಾ ಚಲನೆಯನ್ನು ಸಾಬೀತು ಪಡಿಸುವ ಮಾದರಿಯಾಗಿರಬೇಕು.
* ಮಗುವಿನ ಕಲಿವಿನ ಕೊರತೆಯನ್ನು ಅಳೆಯುವ ಮಾಪನವಾಗಿರುತ್ತದೆ.

**ಉದ್ದೇಶಗಳು :**

- ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದಲ್ಲಿ ದಾಖಲೆಗಳ ನಿರ್ವಹಣೆ ಮತ್ತು ನಿರ್ದಿಷ್ಟ ಉದ್ದೇಶಗಳನ್ನು ಹೊಂದಿದೆ.

* ಮಗುವಿನ ಆಸಕ್ತಿ, ಮೌಲ್ಯ, ಕೌಶಲ್ಯವನ್ನು ಪ್ರತಿಬಿಂಬಿಸುವುದಾಗಿದೆ.
* ಮಗುವಿನ ನಿರಂತರ ಮೌಲ್ಯಮಾಪನಕ್ಕೆ ಸಾಕ್ಷಿಯಾಗಿರುವುದು
* ಪರಿಣಾಮಕಾರಿ ಕಲಿಕೆಗೆ ಅನುವು ಮಾಡುತ್ತದೆ.
* ಪರಿಹಾರ ಬೋಧನೆಯು ಯಾರಿಗೆ, ಏಕೆ, ಹೇಗೆ ಎಂಬುದನ್ನು ತಿಳಿಸುವುದಾಗಿದೆ.
* ರಾಷ್ಟ್ರೀಯ ಶಿಕ್ಷಣದ ನೀತಿಯ ಅನ್ವಯದ ಹಂತವನ್ನು ನಿರ್ದಿಷ್ಟ ಪಡಿಸುತ್ತದೆ.
* ಅನುಕೂಲಕಾರನ ಸಾಮರ್ಥ್ಯವನ್ನು ಪ್ರತಿಬಿಂಬಿಸುವುದಾಗಿದೆ.
* ದಾಖಲೆಗಳು ಅನುಕೂಲಕಾರನಿಗೆ ಕೈಮರ (Handpos) ಇದ್ದಂತೆ ಎಂದು ಪರಿಭಾವಿಸುವುದಾಗಿದೆ.
* ದಾಖಲೆಗಳು ಶಿಕ್ಷಣ ಪ್ರಕ್ರಿಯೆ ಅಡಿಗಲ್ಲುಗಳಾಗಿ ಪರಿಗಣಿಸಲಾಗಿದೆ.

ಈ ಎಲ್ಲಾ ಲಕ್ಷಣ, ಸ್ವರೂಪ, ಉದ್ದೇಶಗಳನ್ನು ಒಳಗೊಂಡಂತೆ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯವರ ನಿರ್ದೇಶನದಂತೆ, ಹತ್ತನೇ ತರಗತಿಯ ಪರೀಕ್ಷಾ ಪರಿಕಲ್ಪನೆ ಮಾದರಿಯಲ್ಲಿ ಈ ಕೆಳಕಂಡಂತೆ ದಾಖಲೆಗಳ ನಮೂನೆಗಳನ್ನು ಅನುಕೂಲಕಾರನು ನಿರ್ವಹಿಸಬಹುದಾಗಿದೆ.

* ವಾರ್ಷಿಕ ಪಾಠಯೋಜನೆ : ಈ ದಾಖಲೆಯನ್ನು 9ನೇ ತರಗತಿಯ ರಚನಾ–2 ರಲ್ಲಿ ನೀಡಲಾಗಿದೆ.

* ಪಾಠ / ಘಟಕ ಯೋಜನೆ : ಈ ದಾಖಲೆಯನ್ನು 9ನೇ ತರಗತಿಯ ರಚನಾ–2ರಲ್ಲಿ ಒದಗಿಸಲಾಗಿದೆ.

* ಕ್ರೋಢೀಕೃತ ಅಂಕವಹಿ : ಸಾಧನಾ ಪುಷ್ಟಿಯಲ್ಲಿ ನೀಡಿದೆ.

**ವಿದ್ಯಾರ್ಥಿ ಸಂದರ್ಶನ ನಮೂನೆ**

| ಕ್ರ.ಸಂ. | ವಿದ್ಯಾರ್ಥಿಯ ಹೆಸರು\ತರಗತಿ | ದಿನಾಂಕ | ಸಂದರ್ಶನಕ್ಕೆ ಕಾರಣ | ಚರ್ಚಾಂಶ/ ತೀರ್ಮಾನ | ಷರಾ |
|---|---|---|---|---|---|
| | | | | | |

**6. ಪರಿಹಾರ ಬೋಧನಾ ನಮೂನೆ**

| ಕ್ರ.ಸಂ. | ವಿದ್ಯಾರ್ಥಿಯ ಹೆಸರು ತರಗತಿ | ತರಗತಿ | ಕೊರತೆ ಇರುವ ಕಲಿಕಾಂಶ | ಕೈಗೊಂಡ ಚಟುವಟಿಕೆ | ಫಲಿತಾಂಶ | ಷರಾ |
|---|---|---|---|---|---|---|
| | | | | | | |

**7. ತಂತ್ರ ಮತ್ತು ಸಾಧನಗಳ ಪಟ್ಟಿ (ಘಟಕವಾರು)**

| ಕ್ರ.ಸಂ. | ಘಟಕದ ಹೆಸರು | ಬಳಸಿಕೊಂಡ ತಂತ್ರ | ಬಳಸಿಕೊಂಡ ಸಾಧನ | ಷರಾ |
|---|---|---|---|---|
| | | | | |

## 8. ಶಿಕ್ಷಕರ ಡೈರಿ ನಮೂನೆ (ಸೂಚ್ಯವಾಗಿ)

| ಕ್ರ.ಸಂ | ದಿನಾಂಕ | ಅವಧಿಗಳು / ತರಗತಿ | | | ಅನುಕೂಲಿಸಿದ ಘಟಕದ ಹೆಸರು /ಭಾಗ | | | | | ಷರಾ |
|---|---|---|---|---|---|---|---|---|---|---|
| | | 1 | 2 | 3 | 4 | 5 | 6 | 7 | 8 | |
| | | | | | | | | | | |

## ಪರಿಹಾರ ಬೋಧನಾ ಪ್ರಕ್ರಿಯೆ

**ಪರಿಕಲ್ಪನೆ :**

ಕಲಿಕೆಯ ಸಂದರ್ಭದಲ್ಲಿನ ಎಲ್ಲಾ ಕಲಿಕಾರ್ಥಿಗಳ ಕಲಿಕೆಯ ಫಲಿತ ಒಂದೇ ರೀತಿ ಇರುತ್ತದೆ ಎಂದು ಪರಿಭಾವಿಸಲು ಸಾಧ್ಯವಿಲ್ಲ. ಏಕೆಂದರೆ ಒಂದು ತರಗತಿ ವಿಭಿನ್ನ ರೀತಿ ವಿಭಿನ್ನ ಪರಿಸರಗಳಿಂದ ಬರುವ ವಿದ್ಯಾರ್ಥಿಗಳಿದ್ದು ಇವರೆಲ್ಲರ ಕಲಿಕೆ ಏಕರೂಪವನ್ನು ಹೊಂದಿರುವುದಿಲ್ಲ. ಅಂದರೆ ತರಗತಿಯಲ್ಲಿ ಅತಿ ವೇಗವಾಗಿ ಕಲಿಯುವ ವಿದ್ಯಾರ್ಥಿಗಳಿದ್ದಾರೆ, ಅದೇ ತರಗತಿಯಲ್ಲೂ ಅಷ್ಟೆ ನಿಧಾನವಾಗಿ ಕಲಿಕೆಯಲ್ಲಿ ತೊಡಗುವ ಮಕ್ಕಳಿರುತ್ತಾರೆ.

ಈ ಹಿನ್ನೆಲೆಯಲ್ಲಿ ನಿಧಾನಗತಿಯಲ್ಲಿ ಕಲಿಯುತ್ತಿರುವ ಮಕ್ಕಳನ್ನು ಹೆಚ್ಚು ಹೆಚ್ಚು ತೊಡಗಿಸಿಕೊಳ್ಳುವಂತೆ ಮಾಡಲು ಪರಿಹಾರ ಬೋಧನೆ ಒಂದು ಮುಖ್ಯ ಸಾಧನವಾಗಿದೆ.

ಪರಿಹಾರ ಬೋಧನೆ ಎಂದರೆ, ಕಲಿಕೆಯಲ್ಲಿ ನಿಧಾನ ಗತಿಯನ್ನು ಅನುಭವಿಸುತ್ತಿರುವ ಕಲಿಕಾರ್ಥಿಗಳಿಗೆ ವಿಶೇಷವಾದ ಕಲಿಕಾ ಚಟುವಟಿಕೆಗಳ ಮೂಲಕ ಇವರನ್ನು ಕಲಿಕೆಯ ಮುಖ್ಯವಾಹಿನಿಗೆ ತರಲು ಅನುಕೂಲಕಾರನು ಅನುಸರಿಸುವ ವಿನೂತನ ಕಲಿವಿನ ವಿಧಾನವನ್ನೇ ಪರಿಹಾರ ಬೋಧನೆ ಎನ್ನುತ್ತೇವೆ.

ಇಂತಹ ಪರಿಹಾರ ಬೋಧನೆಯನ್ನು ಅಚ್ಚುಕಟ್ಟಾಗಿ ರೂಪಿಸಿಕೊಳ್ಳುವುದರಿಂದ ಇದರ ಯಶಸ್ಸನ್ನು ಗುರುತಿಸಬಹುದು. ಈ ನಿಟ್ಟಿನಲ್ಲಿ ಪರಿಹಾರ ಬೊಧನೆಯು ವಿವಿಧ ಹಂತಗಳನ್ನು ಕೆಳಗಿನಂತೆ ನೀಡಲಾಗಿದೆ.

**ಪರಿಹಾರ ಬೋಧನೆ ಯಾರಿಗೆ :**

ಕಲಿಕೆಯ ಸಂದರ್ಭದಲ್ಲಿ ಯಾವ ಮಗು ಮಂದಗತಿಯನ್ನು ಹೊಂದಿರುತ್ತದೆಯೋ ಅಂತಹ ಮಕ್ಕಳಿಗೆ ಪರಿಹಾರ ಬೋಧನೆ ಅಗತ್ಯವಾಗಿರುತ್ತದೆ. ಇಲ್ಲಿ ಅನುಕೂಲಕಾರನು ಆಯಾ ತರಗತಿಯ ಕಲಿಕಾ ಸಾಮರ್ಥ್ಯಗಳ ಪರಿಚಯವನ್ನು ಮಾಡಿಕೊಂಡಿರಬೇಕು. ಆದ್ದರಿಂದ ತರಗತಿವಾರು ಮೂಲ ಕಲಿಕಾ ಸಾಮರ್ಥ್ಯಗಳ ಕೊರತೆ ಇರುವ ಮಗುವಿಗೆ ಪರಿಹಾರ ಬೋಧನೆ ಅಗತ್ಯವಾಗಿರುತ್ತದೆ.

**ಹೇಗೆ:**

**1. ಆಪ್ತಸಮಾಲೋಚನೆ / ಸಂದರ್ಶನ :**

ಅನುಕೂಲಕಾರನು ನಿಧಾನಗತಿಯಲ್ಲಿ ಕಲಿಯುತ್ತಿರುವ ಮಕ್ಕಳನ್ನು ಗುರುತಿಸಿ, ಅಂತಹವರನ್ನು ಪ್ರತ್ಯೇಕವಾಗಿ (ತಮಗೆ ಅನುಕೂಲವಾದಂತೆ)ಸಂದರ್ಶಿಸಿ ಸ್ನೇಹಮಯ ಪ್ರಶ್ನೆಗಳನ್ನು ಕೇಳುತ್ತಾ ಬೆನ್ನು ತಟ್ಟುತ್ತಾ ಮಗು ತನ್ನ ಅಂತರಂಗವನ್ನು ಬಿಚ್ಚಿ ಹೇಳುವಂತೆ ವಾತಾವರಣ ಸೃಷ್ಟಿಸುವ ಜಾಣ್ಮೆ ಅನುಕೂಲಕರನದ್ದಾಗಿರಬೇಕು. ಹಾಗೂ ಎಚ್ಚರಿಕೆ ವಹಿಸುವುದು ಮಗುವಿನ ಎಲ್ಲಾ ಮಾತುಗಳನ್ನು ಸತ್ಯಕ್ಕೆ ಹತ್ತಿರವೆಂದು ಸ್ವೀಕರಿಸುವ ಮನೋಭಾವ ಅನುಕೂಲಕಾರನಿಗೆ ಇರಬೇಕು. ಏಕೆಂದರೆ ಯಾವ ಮಗುವೂ ದಡ್ಡನಲ್ಲ. ಸಂಸ್ಕೃತಿ, ಕಾರ್ಯ, ಕಾರಣ, ಸಂದರ್ಭಗಳು ಮಗುವಿನ ಈ ಸ್ಥಿತಿಗೆ ಕಾರಣ ಎಂಬ ಪೂರ್ವ ಪ್ರಜ್ಞೆ ಸರಳವಾಗಿರಲಿ ಧ್ವನಿ ಏರಿಳಿತವಿರಲಿ. ಮುಖದಲ್ಲಿ ಮಂದಹಾಸ ತುಂಬಿರಲಿ. ಮಗುವಿನ ಮನಮುಟ್ಟುವಂತಿರಲಿ. ವಾಸ್ತವ ಅನುಕೂಲಕಾರನಿಗೆ ಅರ್ಥವಾಗುವಂತಿರಲಿ ಮಗುವಿನ ಎಲ್ಲಾ ಭಾವನೆಗಳಿಗೆ ಸ್ಪಂದನೆ, ಸಾಂತ್ವನ, ಪ್ರೋತ್ಸಾಹ, ಧೈರ್ಯ, ಹೆಮ್ಮೆ, ತೋರುವಂತಹ ವರ್ತನೆ ಅನುಕೂಲಕಾರನದಾಗಿರಬೇಕು. ಈ ರೂಪದ ಸಂದರ್ಶನ ಮಗುವಿನ ಕಲಿಕೆಯ ಕೊರತೆಗೆ ಕಾರಣ ಕಂಡುಕೊಳ್ಳುವಂತಿರಲಿ.

**2. ಪೋಷಕರೊಂದಿಗೆ ಚರ್ಚೆ:**

ಮಂದಗತಿಯ ಕಲಿಕೆಯಲ್ಲಿ ತೊಡಗಿರುವ ವಿದ್ಯಾರ್ಥಿಗಳ ಹಿನ್ನಲೆಯನ್ನು ಅನುಕೂಲಕಾರನು ತಿಳಿದುಕೊಳ್ಳಲು ಮಗುವಿನ ಪೋಷಕರನ್ನು ಶಾಲೆಗೆ ಕರೆಸಿ ಮಗುವನ್ನು ಕುರಿತಂತೆ ಮುಕ್ತವಾಗಿ ಸಮಾಲೋಚಿಸುವುದು. ಪರಸ್ಪರ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳುವುದು. ಅಭಿಪ್ರಾಯಗಳನ್ನು ನಂಬಿಕೆಯಿಂದ ಸ್ವೀಕರಿಸುವುದು ಮಗು ವಿನೊಂದಿಗೂ, ಶಿಕ್ಷಕ, ಪೋಷಕ ಅಭಿಪ್ರಾಯಗಳನ್ನು ಹಂಚಿಕೊಳ್ಳುವುದು. ಇಲ್ಲೆಲ್ಲಾ ಕೋಪ, ಆವೇಶ, ಪೂರ್ವಾಗ್ರಹ ಪೀಡಿತ ಭಾವನೆಗಳು ಹತ್ತಿರ ಸುಳಿಯಬಾರದು. ಕನಿಷ್ಠ ತಿಂಗಳಿಗೊಮ್ಮೆಯಾದರೂ ಪೋಷಕರೊಂದಿಗೆ ಚರ್ಚೆ ಅಗತ್ಯವಾಗಿರುತ್ತದೆ.

**3. ಕುಟುಂಬಗಳಿಗೆ ಭೇಟಿ :**

ಅನುಕೂಲಕಾರನು ನಿಧಾನಗತಿಯ ಕಲಿಕೆಯ ಮಕ್ಕಳನ್ನು ಸಂದರ್ಶಿಸಿ, ಪೋಷಕರೊಂದಿಗೆ ಚರ್ಚಿಸಿ ನಂತರ ಪೋಷಕರ ಮನೆಗೇ ಖುದ್ದು ಭೇಟಿ ನೀಡಿ ತಯಾರಿಸಿಟ್ಟುಕೊಂಡ ಪ್ರಶ್ನಾವಳಿಗಳಿಗೆ ಉತ್ತರ ಪಡೆಯುವುದು, ಸಲಹೆ ಸೂಚನೆಗಳನ್ನು

ನೀಡುವುದು ಕಲಿಕೆಗೆ ಪೂರಕವಾಗಿರುತ್ತದೆ. ಇಂತಹ ಸಂದರ್ಭಗಳಲ್ಲಿ ಬಹು ಎಚ್ಚರ ಅನುಕೂಲಕಾರನಿಗ ಇರಬೇಕಾಗುತ್ತದೆ.

**4. ಗುಂಪುರಚನೆ :**

ನಿಧಾನಗತಿಯ ಕಲಿಕಾ ಮಕ್ಕಳನ್ನು ಗುರುತಿಸಿ, ಅಂತಹವರನ್ನು ತರಗತಿಯಲ್ಲಿ ಈಗಾಗಲೇ ಕಲಿತಿರುವ ಮಕ್ಕಳೊಂದಿಗೆ ಬೆರೆಯುವಂತೆ, ಗುಂಪು ರಚನೆ, ಅವರೊಂದಿಗೆ ಶಾಲಾ ಅವಧಿಯಲ್ಲಿ ಸದಾ ಒಡನಾಟ ಹೊಂದಿರುವುದು, ಬೇಕು ಬೇಡಗಳನ್ನು ಚರ್ಚಿಸುವುದು, ಇತ್ಯಾದಿ ಚಟುವಟಿಕೆಗಳಲ್ಲಿ ತೊಡಗಿ ಹಂತಹಂತವಾಗಿ ಕಲಿಕೆಯನ್ನು ವೃದ್ಧಿಸಿಕೊಳ್ಳುವುದು. ಇಲ್ಲೆಲ್ಲಾ ಅನುಕೂಲಕಾರನು ಸೂಕ್ತ ಸೂಚನೆ, ಮಾರ್ಗದರ್ಶನ ನೀಡಬೇಕಾಗುತ್ತದೆ. ಹಾಗೂ ಅವಲೋಕಿಸಬೇಕಾಗುತ್ತದೆ.

**5. ಬೆನ್ನುತಟ್ಟುವುದು:**

ಬೆನ್ನು ತಟ್ಟುವುದು ಎಂದರೆ ಬೇರೆ ಏನೂ ಅರ್ಥವಲ್ಲ. ನಿಧಾನಗತಿಯ ಕಲಿಕಾರ್ಥಿಗಳಿಗೆ ಸದಾ ಪ್ರೀತಿ–ವಾತ್ಸಲ್ಯ ಪ್ರಶಂಸೆಗಳೊಂದಿಗೆ ಪ್ರೋತ್ಸಾಹದಾಯಕ ಮಾತುಗಳನ್ನಾಡುವುದು, ಅವರ ತೀರ್ಮಾನಗಳಿಗೇ ಮೊದಲಿನ ಆದ್ಯತೆಯನ್ನು ನೀಡುವುದು, ಅವರನ್ನು ತರಗತಿಯ ಮುಂದಿನ ಸಾಲಿನಲ್ಲಿ ಕೂರಿಸಿರುವುದು, ಹೀಗೆ ಸದಾ ಗಮನಿಸುವುದಲ್ಲದೆ, ಇಂತಹ ಕಲಿಕಾರ್ಥಿಗಳನ್ನು ಬೇರೆಯವರೊಂದಿಗೆ ಹೋಲಿಸಿ, ಹೀಯಾಳಿಸುವುದನ್ನು ಮಾಡಲೇಬಾರದು. ಇವರೊಂದಿಗೆ ವರ್ತಿಸುವಾಗ ಅನುಕೂಲಕಾರನಿಗೆ ಅಗಾಧವಾದ ತಾಳ್ಮೆ ಅಗತ್ಯವಾಗಿರುತ್ತದೆ.

**6. ಸರಳ ಚಟುವಟಿಕೆಗಳಿಗೆ ಆದ್ಯತೆ:**

ನಿಧಾನ ಗತಿಯ ಕಲಿಕಾರ್ಥಿಗಳಿಗೆ ಪರಿಹಾರ ಬೋಧನೆಯ ಸಂದರ್ಭದಲ್ಲಿ ಸರಳವಾದ ಚಟುವಟಿಕೆಯನ್ನು ನೀಡುವುದು ಹಾಗೂ ಆ ಚಟುವಟಿಕೆಗಳಲ್ಲಿ ಆ ಮಕ್ಕಳು ತಪ್ಪದೇ ಭಾಗವಹಿಸುವಂತೆ ನೋಡಿಕೊಳ್ಳುವುದು ಮುಖ್ಯವಾಗಿರುತ್ತದೆ. ಅದಕ್ಕಾಗಿ ಅನುಕೂಲಕಾರನು ಮಕ್ಕಳ ಆಸಕ್ತಿದಾಯಕ ಸಾಮರ್ಥ್ಯ ಹೆಚ್ಚುವಂತಹ ಕ್ರಿಯಾಶೀಲ ಚಟುವಟಿಕೆ ರೂಪಿಸುವುದು ಅಗತ್ಯವಾಗಿರುತ್ತದೆ. ಏಕೆಂದರೆ ಮಕ್ಕಳ ತೊಡಗಿಸಿ ಕೊಳ್ಳುವಿಕೆಯಿಂದ ಕಲಿಕೆ ಸಾಧ್ಯವಾಗುತ್ತಿರುತ್ತದೆ ಎಂಬುದನ್ನು ಇಲ್ಲಿ ಮರೆಯುವಂತಿಲ್ಲ.

ಉದಾಹರಣೆಗಳು: – ಬರೆದು ತೋರಿಸುವುದು

- ಚಿತ್ರ ತೋರಿಸುವುದು
- ಮಾದರಿ ತೋರಿಸುವುದು
- ಬರೆದದ್ದನ್ನು ಓದಿಸುವುದು
- ಪ್ರಶ್ನೆ ಕೇಳುವಂತೆ ಉತ್ತೇಜನ
- ನಕ್ಷೆ ರಚನೆ

7. **ಒಂದು ಅಂಶದ ಪ್ರಶ್ನೆಗಳಿಗೆ ಆದ್ಯತೆ:**

ನಿಧಾನಗತಿಯ ಕಲಿಕಾರ್ಥಿಗಳಿಗೆ ಸಹಜವಾಗಿ ಸ್ಮರಣ ಶಕ್ತಿ ಕಡಿಮೆ ಇರುವುದರಿಂದ ಇವರ ಸ್ಮರಣಾ ಸಾಮರ್ಥ್ಯವನ್ನು ಹಂತ ಹಂತವಾಗಿ ಹೆಚ್ಚಿಸಲು ಪ್ರಾರಂಭ ಹಂತದಲ್ಲಿಯೇ ದೀರ್ಘ ಉತ್ತರ ಪ್ರಶ್ನೆಗಳನ್ನು ಕೇಳುವುದಕ್ಕೆ ಬದಲಾಗಿ, ವಿಶೇಷವಾಗಿ ಪರಿಹಾರ ಬೋಧನೆ ಸಂದರ್ಭದಲ್ಲಿ ಒಂದು ಅಂಶದ ಅಥವಾ ಕಿರುಉತ್ತರದ ಪ್ರಶ್ನೆಗಳನ್ನು ಮನನ ಮಾಡಿಕೊಳ್ಳುವಂತೆ ಪ್ರೇರೇಪಿಸಬೇಕು ಹಾಗೆಯೇ ಕಡ್ಡಯ ನಕ್ಷೆ ರಚನೆ ಮತ್ತು ಗುರುತಿಸುವುದನ್ನು ಅಭ್ಯಾಸ ಮಾಡಿಸುವುದು.

ಈ ಎಲ್ಲಾ ಪರಿಹಾರ ಬೋಧನೆಗೆ ಸಂಬಂಧಿಸಿದ ಈ ಮೇಲಿನ 'ಸಪ್ತಸೂತ್ರಗಳನ್ನು' ಅನುಸರಿಸಿ, ನಿಧಾನ ಕಲಿಕೆಯ ಮಕ್ಕಳನ್ನು ಕಲಿಕೆಯ ಮುಖ್ಯ ವಾಹಿನಿಗೆ ತರುವುದು ಮುಖ್ಯವಾಗಿರುತ್ತದೆ. ಈ ಪ್ರಕ್ರಿಯೆಯನ್ನು ಅನುಕೂಲಕಾರನು ತನ್ನದೇ ಬಿಡುವಿನ ವೇಳೆಯಲ್ಲಿ ಸ್ವಹಿತಾಸಕ್ತಿಯಿಂದ ನಿರ್ವಹಿಸುವುದು.

## 10ನೇ ತರಗತಿಯ ಸಮಾಜ ವಿಜ್ಞಾನ

## ವಿನ್ಯಾಸದೊಂದಿಗೆ ಪ್ರಶ್ನೆ ಪತ್ರಿಕೆ (ಮಂಡಳಿಯ ನಿಯಮಾನುಸಾರ)

### ಕಠಿಣತೆಯ ಮಟ್ಟ

| ಪ್ರಶ್ನೆಗಳು | ಶೇಕಡಾ ಅಂಕ (100ಕ್ಕೆ) | ಶೇಕಡಾ ಅಂಕ (80ಕ್ಕೆ) |
|---|---|---|
| ಸುಲಭ | 30% | 24% |
| ಸಾಧಾರಣ | 50% | 40% |
| ಕಠಿಣ | 20% | 16% |
| | 100% | 80% |

### ಉದ್ದಿಷ್ಟಾನುಸಾರ ಪ್ರಾಮುಖ್ಯತೆ

| ಕ್ರ.ಸಂ | ವಲಯಗಳು | ಶೇಕಡಾ 100% | ಶೇಕಡಾ 80% |
|---|---|---|---|
| 1 | ಜ್ಞಾನಾತ್ಮಕ | 16% | 13% |
| 2 | ಅರ್ಥೈಸಿಕೊಳ್ಳುವಿಕೆ | 50% | 40% |
| 3 | ಅನ್ವಯ | 29% | 22% |
| 4 | ಕೌಶಲ | 5% | 5% |
| | | 100 (ಅಂಕಗಳು) | 80 (ಅಂಕಗಳು) |

### ವಿಷಯಾನುಸಾರ ಅಂಕಿಗಳು

| ವಿಭಾಗಗಳು | ಅಂಕಗಳು |
|---|---|
| ಇತಿಹಾಸ | 20 |
| ರಾಜ್ಯಶಾಸ್ತ್ರ | 11 |
| ಸಮಾಜಶಾಸ್ತ್ರ | 08 |
| ಭೂಗೋಳ | 25 |
| ಅರ್ಥಶಾಸ್ತ್ರ | 08 |
| ವ್ಯವಹಾರ ಅಧ್ಯಯನ | 08 |
| ಒಟ್ಟು | 80 |

## ಪ್ರಶ್ನಾನುಸಾರ ಪ್ರಾಮುಖ್ಯತೆ

| ಕ್ರಸಂ | ಪ್ರಶ್ನೆಗಳು | ಅಂಕಗಳು | ವಿಭಾಗಗಳು | | | | | | |
|---|---|---|---|---|---|---|---|---|---|
| | | | ಇತಿಹಾಸ | ರಾಜ್ಯಶಾಸ್ತ್ರ | ಸಮಾಜಶಾಸ್ತ್ರ | ಭೂಗೋಳ | ಅರ್ಥಶಾಸ್ತ್ರ | ವ್ಯವಹಾರ ಅಧ್ಯಯನ | ಒಟ್ಟು |
| 1 | ಬಹು ಆಯ್ಕೆ | 1 x10 | 2 | 2 | 1 | 2 | 1 | 2 | |
| 2 | ಒಂದು ಅಂಕಿ | 1 x 14 | 3 | 2 | 2 | 4 | 2 | 1 | |
| 3 | ಎರಡು ಅಂಕಿ | 2 x 15 | 4 | 2 | 6 | 6 | 1 | 1 | |
| 4 | ಮೂರು ಅಂಕಿ | 3 x 16 | 1 | 1 | 1 | 1 | 1 | 1 | |
| 5 | ನಾಲ್ಕು ಅಂಕಿ ದೀರ್ಘ ಉತ್ತರ | 4 x 1 | 1 | – | – | 1 | – | – | |
| 6 | ಭೂಪಟ | 1 +3 | – | – | – | 4 | – | – | |
| | **ಒಟ್ಟು** | | **20** | **11** | **08** | **25** | **08** | **08** | **80** |

# ಮಾದರಿ ನೀಲಿ ನಕ್ಷೆ (ಮಂಡಳಿಯ ನಿಯಮಾನುಸಾರ)

| ಅಧ್ಯಾಯ | ಜ್ಞಾನಾತ್ಮಕ | | | | | | ಅರ್ಥೈಸುವಿಕೆ | | | | | | ಅನ್ವಯ | | | | | | ಕೌಶಲ |
|---|---|---|---|---|---|---|---|---|---|---|---|---|---|---|---|---|---|---|---|
| ಇತಿಹಾಸ | 1 | 2 | 3 | 4 | 5 | 6 | 1 | 2 | 3 | 4 | 5 | 6 | 1 | 2 | 3 | 4 | 5 | 6 | 1 2 3 4 5 6 |
| | ಆ | ಅಸ | | ಸ | ಉ | ಅಉ | ಆ | ಅಸ | ಸ | ಉ | ಅಉ | ಆ | ಆ | ಅಸ | ಸ | ಉ | ಅಉ | ಆ | |
| 1 | | | | | | | | | 2(1) | | | | | | 2(2) | | | | |
| 2 | | | | | | | | | 2(1) | | | | | | | | | | |
| 3 | | | | | | | 1(1) | | | | | | | | | | | | |
| 4 | | | | | | | | 1(2) | | | | | | | | | | | |
| 5 | | | | | | | | 1(3) | | | | | | | | | | | |
| 6 | | | | | | | 1(1) | | | | | | | | 2(1) | | | | |
| 7 | | | | | | | | | | 3(1) | | | | | | | | | |
| 8 | 1(1) | | | | | | | | | | 4(1) | | | | | | | | |
| 9 | | 1(1) | | | | | | | | | | | | | | | | | |
| 10 | | | 2(1) | | | | | | | | | | | | | | | | |
| ರಾಜ್ಯಶಾಸ್ತ್ರ | | | | | | | | | | | | | | | | | | | |
| 1 | 1(1) | 1(2) | | | | | | | | | | | | | | | | | |
| 2 | | | | | | | | | | | | | | | | | | | |
| 3 | | | | | | | | | | | | | | | | | | | |
| 4 | 1(1) | | | | | | | | | 3(1) | | | | | | | | | |
| 5 | | | | | | | | | | | | | | | | | | | |
| ಸ. ಶಾಸ್ತ್ರ | | | | | | | | | | | | | | | | | | | |
| 1 | 1(1) | | | | | | | | | | | | | | | | | | |
| 2 | | | 2(1) | | | | 1(1) | | | | | | | | 2(1) | | | | |
| 3 | | | | | | | | | | | | | | | | | | | |
| 4 | 1(1) | | | | | | 1(1) | | | | | | | | | | | | |

2

| | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|
| ಭೂಗೋಳ | | | | | | | | | | | | | | | | | | | |
| 1 | 1(1) | | | | | | | | | | | | | | | | | | 2 |
| 2 | | | | | | | | | | | | | | | | | | | |
| 3 | | | | | | | 1(1) | | | | | | | | | 3(1) | | | |
| 4 | | | | | | | | | | | | | | | | | | | |
| 5 | | | | | | | | | | | | | | | | | | | |
| 6 | | | | | | | | | | | | | | | 2(1) | | | | 2 |
| 7 | | | | | | | | | | | | | | | | | | | |
| 8 | | | | | | | | | | | | | | | | | | | |
| 9 | | | | | | | | | | | | | | | | | | | |
| 10 | | | | | | | | | | | | | | | | | | | |
| 11 | 1(1) | | | | | | | | | | | | | | | | | | |
| 12 | | | | | | | | | | | | | | | | | | | |
| 13 | | | | | | | | | | | | | | | | | | | |
| ಅರ್ಥಶಾಸ್ತ್ರ | | | | | | | | | | | | | | | | | | | |
| 1 | 1(1) | 1(1) | | | | | | | | | | | | | | | | | |
| 2 | | | 2(1) | | | | | | | | | | | | | | | | |
| 3 | | | | | | | | | | | | | | | | | | | |
| 4 | | | | | | | | | | | | | | | | 3(1) | | | |
| ವ್ಯ.ಅಧ್ಯಯನ | | | | | | | | | | | | | | | | | | | |
| 1 | | | | | | | | | | | | | | | | | | | |
| 2 | | | | | | | | | | | | | | | | 3(1) | | | |
| 3 | | | | | | | | | | | | | | | | | | | |
| 4 | | | | | | | 1(1) | | | | | | | | | | | | |

## ಮಾದರಿ ಪ್ರಶ್ನೆ ಪತ್ರಿಕೆ

ತರಗತಿ : 10 ವಿಷಯ : ಸಮಾಜ ವಿಜ್ಞಾನ ಅಂಕಗಳು : 80

**I. ಈ ಕೆಳಗಿನ ಪ್ರಶ್ನೆಗಳಿಗೆ / ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರವನ್ನು ಸೂಚಿಸಲಾಗಿದೆ ಅವುಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.** **1 X10**

**1. ರಾಬರ್ಟ್ ಕ್ಲೈವನು ಬಂಗಾಳದಲ್ಲಿ ದ್ವಿಸರ್ಕಾರವನ್ನು ಜಾರಿಗೆ ತರಲು ಕಾರಣವೇನೆಂದರೆ**

ಅ. 24 ಪಂಗಡಗಳನ್ನು ಆ. ಇಂಗ್ಲಿಷರಿಗೆ ದಿವಾನಿ ಹಕ್ಕನ್ನು ನೀಡಿದರು

ಇ. ಬಂಗಾಳದಲ್ಲಿ ಆಳ್ವಿಕೆ ಪ್ರಾರಂಭಿಸಿದರು ಈ. ಬಂಗಾಳವನ್ನು ವಶಪಡಿಸಿಕೊಂಡರು

**2. ಝಾನ್ಸಿರಾಣಿ ಲಕ್ಷ್ಮೀಬಾಯಿ ಬ್ರಿಟಿಷರ ವಿರುದ್ಧ ಯುದ್ಧ ಸಾರಲು ಈ ಸೂತ್ರ ಕಾರಣವಾಗಿತ್ತು.**

ಅ. ದತ್ತುಮಕ್ಕಳಿಗೆ ಹಕ್ಕಿಲ್ಲ ಪದ್ಧತಿ ಆ. ಸಹಾಯಕಿ ಸೈನ್ಯ ಪದ್ಧತಿ

ಇ. ಒಡೆದು ಆಳುವ ನೀತಿ ಈ. ದ್ವಿಸರ್ಕಾರ ಪದ್ಧತಿ

**3. ಭಾರತದ ಉಕ್ಕಿನ ಮನುಷ್ಯ ಎಂದು ಖ್ಯಾತರಾಗಿದ್ದವರು**

ಅ. ಭಗತ್ ಸಿಂಗ್ ಆ. ಚಂದ್ರಶೇಖರ್ ಅಜಾಧ್

ಇ. ಸರ್ದಾರ ವಲ್ಲಭಬಾಯಿ ಪಟೇಲ್ ಈ. ಅಬ್ದುಲ್ ಕಲಾಂ ಅಜಾದ್

**4. 2011ರ ಜನಗಣತಿ ಪ್ರಕಾರ ಭಾರತದ ಜನಸಂಖ್ಯೆ ಈ ಮಿತಿಯನ್ನು ದಾಟಿದೆ**

ಅ. 121 ಕೋಟಿ ಆ. 119 ಕೋಟಿ ಇ. 120 ಕೋಟಿ ಈ. 122 ಕೋಟಿ

**5. ನಮ್ಮ ಸಂವಿಧಾನದ 24ನೇ ವಿಧಿಯ ಪ್ರಮುಖ ಘೋಷಣೆ ಈ ರೀತಿಯ ಆಪರಾಧವನ್ನು ಶಿಕ್ಷಾರ್ಹ ಎಂದಿದೆ**

ಅ. ವರದಕ್ಷಿಣೆ ಪದ್ಧತಿ ಆ. ಬಾಲ್ಯವಿವಾಹ ಪದ್ಧಥಿ

ಇ. ಬಾಲಕಾರ್ಮಿಕ ಪದ್ಧತಿ ಡಿ. ಅಸ್ಪೃಶ್ಯತಾ ಪದ್ಧತಿ

**6. ತಳ್ಳುಗಾಡಿಯ ಮೇಲೆ ತರಕಾರಿ ಮಾರುವವರನ್ನು ಈ ಕ್ಷೇತ್ರದ ಕೆಲಸಗಾರರೆಂದು ಗುರುತಿಸಬಹುದು**

ಅ. ಸಂಘಟಿತ ಆ. ದುಡಿಮೆ ಸಹತಿ ಇ. ಕೂಲಿ–ರಹಿತ ಈ. ಅಸಂಘಟಿತ

**7. ನೈಋತ್ಯ ಮಾನ್ಸೂನ್ ಮಾರುತಗಳು ಅಕ್ಟೋಬರ್‌ನಿಂದ ಹಿಮ್ಮೆಟ್ಟಲು ಪ್ರಾರಂಭ ಮಾಡುತ್ತವೆ ಏಕೆಂದರೆ ಈ ಪ್ರದೇಶವು**

ಅ. ಹೆಚ್ಚು ಉಷ್ಣಾಂಶ ಪಡೆಯುತ್ತದೆ

ಆ. ಹೆಚ್ಚು ಒತ್ತಡ ಪ್ರದೇಶವಾಗಿ ಪರಿವರ್ತನೆಯಾಗುತ್ತದೆ

ಇ. ನೇರ ಕಿರಣವನ್ನು ಪಡೆಯುತ್ತದೆ

ಈ. ಕಡಿಮೆ ಒತ್ತಡ ಪ್ರದೇಶವಾಗಿ ಪರಿವರ್ತನೆಯಾಗುತ್ತದೆ

**8. ಕೇಂದ್ರ ಸರ್ಕಾರದ ಆಯವ್ಯಯವನ್ನು ಲೋಕಸಭೆಯಲ್ಲಿ ಮಂಡಿಸುವವರು**

ಅ. ಗೃಹಸಚಿವರು ಆ. ಪ್ರಧಾನ ಮಂತ್ರಿಗಳು ಇ. ಹಣಕಾಸು ಸಚಿವರು ಈ. ರಾಷ್ಟ್ರಪತಿಗಳು

**9. ಸಣ್ಣ ಪ್ರಮಾಣದ ಮಧ್ಯಮ ಪ್ರಮಾಣದ ಉದ್ದಿಮೆಗಳನ್ನು ಸ್ಥಾಪಿಸಲು ಉದ್ಯಮಿಗಳಿಗೆ ಬೇಕಾದ ಹಣಕಾಸು, ತರಬೇತಿ, ಮಾರುಕಟ್ಟೆ, ಮುಂತಾದ ನೆರವು ನೀಡುವ ಸಂಸ್ಥೆಯನ್ನು ಆಯ್ಕೆ ಮಾಡಿರಿ.**

ಅ. ಭಾರತೀಯ ಕೈಗಾರಿಕಾ ಮರು ನಿರ್ಮಾಣ ಬ್ಯಾಂಕು
ಆ. ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು
ಇ. ರಾಜ್ಯ ಹಣಕಾಸು ನಿಗಮ ಈ. ಜಿಲ್ಲಾ ಕೈಗಾರಿಕಾ ಕೇಂದ್ರಗಳು

**10. ರಾಷ್ಟ್ರೀಯ ಉಳಿತಾಯ ಪತ್ರಗಳು ನೀಡುವ ಇಲಾಖೆ**
ಅ. ಮೈಸೂರು ಬ್ಯಾಂಕ್ ಆ. ಅಂಚೆ ಕಛೇರಿ
ಇ. ವಿಮಾ ಇಲಾಖೆ ಈ. ಭಾರತೀಯ ಸ್ಟೇಟ್ ಬ್ಯಾಂಕ್

**II ಕೆಳಗಿನ ಪ್ರಶ್ನೆಗಳಿಗೆ ಒಂದೊಂದೇ ವಾಕ್ಯಗಳಲ್ಲಿ ಉತ್ತರಿಸಿರಿ 1 x 5 =5**

11. ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರು ಯಾರಾಗಿದ್ದರು?
12. ಕಳ್ಳಸಾಗಣೆ ಎಂದರೇನು?
13. ಭಾರತದ ಯಾವುದಾದರೂ ಎರಡು ಸಾಮಾಜಿಕ ಸಮಸ್ಯೆಗಳನ್ನು ಹೆಸರಿಸಿರಿ
14. ಸಂಪರ್ಕ ಮಾಧ್ಯಮ ಎಂದರೇನು?
15. H.D.I (ಹೆಚ್.ಡಿ.ಐ) ಅನ್ನು ವಿಸ್ತರಿಸಿ.
16. ಅಲಿಪ್ತ ನೀತಿ ಎಂದರೇನು?
17. ಪೂರ್ವಾಗ್ರಹ ಎಂದರೇನು?
18. ಜೇಡ್ ಬೇಸಾಯ ಎಂದರೇನು?
19. ರಾಷ್ಟ್ರೀಯ ಆದಾಯ ಎಂದರೇನು?
20. ನಿರುದ್ಯೋಗ ಎಂದರೇನು?
21. ವಲಸೆ ಎಂದರೇನು?
22. ಭಾರತವನ್ನು ಪ್ರವೇಶಿಸುವ ನೈರುತ್ಯ ಮಾನಸೂನ್ ಮಾರುತಗಳ ಎರಡು ಕವಲುಗಳಾವುವು?
23. ದ್ವಿದಳ ಸರ್ಕಾರ ಪದ್ಧತಿಯನ್ನು ಜಾರಿಗೊಳಿಸಿದ ಶಾಸನ ಯಾವುದು?
24. ಬಸ್ಸಿನ್ ಒಪ್ಪಂದಕ್ಕೆ ಸಹಿ ಹಾಕಿದ ಪೇಶ್ವೆ ಯಾರು?

**III ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ 2 x 15 = 30**

25. 1909ರ ಶಾಸನದ ಸುಧಾರಣೆಗಳಾವುವು?
26. ಮೌಖಿಕ ಆಕರಗಳಾದ ಚರಿತ್ರೆಕಾರರಿಗೆ ವರಪ್ರಸಾದವಾಗಿವೆ ಹೇಗೆ?
27. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದಾದ ಪರಿಣಾಮಗಳು ಯಾವುವು? ವಿಶ್ಲೇಷಿಸಿರಿ.
28. ಕೈಗಾರಿಕೆಗಳ ಸ್ಥಾನೀಕರಣದ ಪ್ರಭಾವ ಬೀರುವ ಅಂಶಗಳಾವುವು?
29. ಭಾರತವೂ ಸೇರಿದಂತೆ ಎಲ್ಲಾ ರಾಷ್ಟ್ರಗಳು ಪರಸ್ಪರ ನಿಶ್ಚಿತ ನಾಶದ ವಿರುದ್ಧ ಹೋರಾಡಬೇಕು ಏಕೆ?
30. ಕಾರಿಡಾರ್ ಹೆದ್ದಾರಿಗಳನ್ನು ತಿಳಿಸಿ.
31. 'ಸಮುದ್ರಯಾನ'ಕ್ಕೆ ವೈಜ್ಞಾನಿಕ ಬೆಳವಣಿಗೆಯ ಕಾರಣ' ಈ ಹೇಳಿಕೆಯನ್ನು ಸಮರ್ಥಿಸಿ.
32. ವಿದೇಶಾಂಗ ನೀತಿಯ ರಾಷ್ಟ್ರದ ಅಭಿವೃದ್ಧಿಗೆ ಸಹಕಾರ ಹೇಗೆ? ಅಥವಾ

ಅನ್ಯ ರಾಷ್ಟ್ರಗಳೊಂದಿಗೆ ಉತ್ತಮ ಬಾಂಧವ್ಯದ ಅವಶ್ಯಕತೆ ಏಕೆ?

33. ನಿರುದ್ಯೋಗದ ಪ್ರಕಾರಗಳಾವುವು ತಿಳಿಸಿ. ಅಥವಾ
34. ಉತ್ತರದ ಮೈದಾನವನ್ನು ಸಂಚಯನ ಮೈದಾನವೆಂದು ಕರೆಯುತ್ತಾರೆ? ಏಕೆ?
35. ಮಣ್ಣಿನ ಸವೆತಕ್ಕೆ ಮುಖ್ಯ ಕಾರಣಗಳೇನು?
36. ಕರ್ನಾಟಕದ ಎರಡು ರಾಷ್ಟ್ರೀಯ ಉದ್ಯಾನವನಗಳನ್ನು ಹೆಸರಿಸಿರಿ.
37. ಪ್ರವಾಹ ಕಾಲುವೆ ಮತ್ತು ಸಾರ್ವಕಾಲಿಕ ಕಾಲುವೆಗಳ ನಡುವಿನ ವ್ಯತ್ಯಾಸ ತಿಳಿಸಿ
38. ಕಡಲಕೊರೆತ ನಿರ್ವಹಣೆಯನ್ನು ತಿಳಿಸಿ
39. ಹಸಿರು ಕ್ರಾಂತಿಗೆ ಪ್ರೇರಕವಾದ ಅಂಶಗಳಾವುವು?

**IV ಕೆಳಗಿನ ಪ್ರಶ್ನೆಗಳಿಗೆ ಆರು ವಾಕ್ಯಗಳಲ್ಲಿ ಉತ್ತರಿಸಿರಿ** **3 x6 =18**

40. ಕರ್ನಾಟಕದ ಜಲವಿದ್ಯುತ್ ಉತ್ಪದನಾ ಕೇಂದ್ರಗಳನ್ನು ಹೆಸರಿಸಿ. **ಅಥವಾ**
    ಭಾರತದ ಯಾವ ರಾಜ್ಯಗಳಲ್ಲಿ ಪವನ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲಾಗುತ್ತದೆ.
41. ಕೈಗಾರಿಕಾ ಕ್ರಾಂತಿಯಿಂದ ಭಾರತದಲ್ಲಾದ ಬದಲಾವಣೆಗಳೇನು? **ಅಥವಾ**
    ಗಾಂಧೀಜಿಯವರ ಸ್ವರಾಜ್ಯ ಕಲ್ಪನೆಯನ್ನು ವಿಕೇಂದರೀಕರಣದ ಹಿನ್ನೆಲೆಯಲ್ಲಿ ತಿಳಿಸಿ.
42. ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳ ಲಕ್ಷಣಗಳಾವುವು? ಈ ರೀತಿ ಹಿಂದುಳಿಯುವಿಕೆಯ ಕಾರಣಗಳಾವುವು? **ಅಥವಾ**
    ವಿಶ್ವಸಂಸ್ಥೆಯ ಉದ್ದೇಶಗಳನ್ನು ಪಟ್ಟಿಮಾಡಿರಿ.
43. ಮಹಿಳಾ ಸ್ವಸಹಾಯ ಸಮೂಹಗಳ ಪ್ರಾಮುಖ್ಯತೆಯನ್ನು ವಿವರಿಸಿರಿ ಅಥವಾ
    ಬಾಲಕಾರ್ಮಿಕರ ಸಮಸ್ಯೆಯ ನಿರ್ಮೂಲನಾ ಕ್ರಮಗಳೇನು? ವಿಚಾರಿಸಿರಿ
44. ಸಾರ್ವಜನಿಕ ಹಣಕಾಸು ಮತ್ತು ವೈಯುಕ್ತಿಕ ಹಣಕಾಸಿನ ನಡುವಿನ ಭಿನ್ನತೆಗಳನ್ನು ಗುರುತಿಸಿರಿ. **ಅಥವಾ**
    ಉದ್ಯಮಗಳ ಅಭಿವೃದ್ಧಿಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳ ಪಾತ್ರವನ್ನು ವಿವರಿಸಿ.
45. ವಿಮಾಕರ್ತನು ಅನುಸರಿಸಬೇಕಾದ ತತ್ವಗಳಾವುವು? **ಅಥವಾ**
    ಬ್ಯಾಂಕ್ ನಿರ್ವಹಿಸವು ಕಾರ್ಯಗಳಾವುವು.

**V ಕೆಳಗಿನ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿರಿ** **1 x 4 = 4**

46. ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಸ್‌ಚಂದ್ರಬೋಸ್‌ನ ಸಾಧನೆಗಳನ್ನು ವಿವರಿಸಿ.

**IV** 47. ಸುಂದರವಾದ ಭಾರತದ ಭೂಪಟ ಬರೆದು ಈ ಕೆಳಗಿನ ಸ್ಥಳಗಳನ್ನು ಗುರುತಿಸಿ **1 + 3 = 4**

ಅ. 82 1/2 ಪೂರ್ವ ರೇಖಾಂಶ, ಆ. ನರ್ಮದಾ ಕಣಿವೆ ಯೋಜನೆ

ಇ. ಕೋರಮಂಡಲ ತೀರ

****

**ಮಾದರಿ ಉತ್ತರ ಪತ್ರಿಕೆ**

ತರಗತಿ : 10 ವಿಷಯ : ಸಮಾಜ ವಿಜ್ಞಾನ ಪರಮಾವಧಿ

ಅಂಕ : 100

| | ಪ್ರ. ಸ. | ಉತ್ತರದ ಕ್ರಮಾಕ್ಷರ | ಪ್ರಶ್ನಾನುಸಾರ ಮೌಲ್ಯದೊಂದಿಗೆ | **1 x 10** | |
|---|---|---|---|---|---|
| I | 1<br>2<br>3<br>4<br>5<br>6<br>7<br>8<br>9<br>10 | (ಬಿ)<br>(ಎ)<br>(ಸಿ)<br>(ಎ)<br>(ಸಿ)<br>(ಡಿ)<br>(ಬಿ)<br>(ಸಿ)<br>(ಡಿ)<br>(ಬಿ) | ಇಂಗ್ಲಿಷರಿಗೆ ದಿವಾನಿ ಹಕ್ಕನ್ನು ನೀಡಿದರು<br>ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ<br>ಸರ್ದಾರ ವಲ್ಲಬಾಯಿ ಪಟೇಲ್<br>121 ಕೋಟಿ<br>ಬಾಲ ಕಾರ್ಮಿಕ ಪದ್ಧತಿ<br>ಅಸಂಘಟಿತ ಕೆಲಸಗಾರರು<br>ಹೆಚ್ಚು ಒತ್ತಡ ಪ್ರದೇಶವಾಗಿ<br>ಪರಿವರ್ತನೆಯಾಗುತ್ತದೆ<br>ಹಣಕಾಸು ಸಚಿವರು<br>ಜಿಲ್ಲಾಕೈಗಾರಿಕಾ ಕೇಂದ್ರಗಳು<br>ಅಂಚೆ ಕಛೇರಿ | 1<br>1<br>1<br>1<br>1<br>1<br>1<br>1<br>1<br>1 | |
| II | <br>11<br>12<br><br><br><br>13<br><br><br>14<br><br><br>15<br>16 | | **ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ**<br>ಡಾ॥ ಬಾಬು ರಾಜೆಂದ್ರ ಪ್ರಸಾದ್<br>ಯಾವುದೇ ಆಮದು ಸುಂಕವನ್ನು ಸರ್ಕಾರಕ್ಕೆ ನೀಡದೇ ಗುಪ್ತವಾಗಿ ವಿದೇಶಗಳಿಂದ ವಸ್ತುಗಳನ್ನು ತರಿಸಿ ಕೊಳ್ಳುವುದು<br>ಬಾಲಕಾರ್ಮಿಕ ಸಮಸ್ಯೆ, ಭ್ರಷ್ಟಚಾರ, ಮಹಿಳೆಯ ಶೋಷಣೆ, ವರದಕ್ಷಿಣೆ ಕಿರುಕುಳ<br>ವಿಷಯ ಮತ್ತು ಮಾಹಿತಿಗಳನ್ನು ಒಂದು ಕಡೆಯಿಂದ ಇನ್ನೊಂದು ಕಡಗೆ ರವಾನಿಸುವ ಮಾಧ್ಯಮ<br>ಮಾನವ ಅಭಿವೃದ್ಧಿ ಸೂಚಕ<br>ವಿಶ್ವದ ಯಾವುದೇ ಬಣಕ್ಕೆ ಸೇರದೇ | 1 x 14<br>1<br>1<br><br><br><br>1<br><br><br>1<br><br><br>1 | 14 |

| | | | | | |
|---|---|---|---|---|---|
| | 17 | | ಇರುವ ನೀತಿ? | 1 | |
| | 18 | | ಒಬ್ಬ ವ್ಯಕ್ತಿ ಅಥವಾ ಒಂದು ಸಮುದಾಯದವರ ಬಗ್ಗೆ ಹೊಂದಿರ ಬಹುದಾದ ಪೂರ್ವ ನಿಧಾರಿತ ಮನೋಭಾವನೆ | 1 | |
| | 19 | | ರಬಿ ಅಥವಾ ಖರೀಫ್ ಬೇಸಾಯದ ನಡುವಿನ ಅವಧಿಯಲ್ಲಿ ಭಾರತದ ಹಲವು ಕಡೆಗಳಲ್ಲಿ ಕಂಡುಬರುವ ಬೇಸಿಗೆಯ ಬೇಸಾಯ ಕ್ರಮ. | 1 | |
| | 20 | | ಒಂದು ರಾಷ್ಟ್ರದಲ್ಲಿ ಒಂದು ವರ್ಷದ ಅವಧಿಯಲ್ಲಿ ಉತ್ಪಾದನೆಯಾಗುವ ಎಲ್ಲಾ ಸರಕು ಸೇವೆಗಳ ಒಟ್ಟು ಮೌಲ್ಯಮಾಪನವನ್ನು ರಾಷ್ಟ್ರೀಯ ಆದಾಯ ಎನ್ನುವರು. | 1 | |
| | 21 | | ದುಡಿಯುವ ವಯಸ್ಸು, ಸಾಮರ್ಥ್ಯ, ಆಸಕ್ತಿ, ಅರ್ಹತೆ ಇದ್ದರೂ ಉದ್ಯೋಗ ಸಿಗದ ಪರಿಸ್ಥಿತಿ ಎಂದರ್ಥ. | 1 | |
| | 22 | | ಮಾನವನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಾಸಸ್ಥಳವನ್ನು ಬದಲಾಯಿಸುವುದಕ್ಕೆ ವಲಸೆ ಎನ್ನುವರು. | 1 | |
| | 23 | | ಅರಬ್ಬೀಸಮುದ್ರವು ಶಾಖೆ, ಬಂಗಾಳ ಕೊಲ್ಲಿ ಶಾಖೆ. | 1 | |
| | 24 | | 1919ರ ಭಾರತ ಸರ್ಕಾರದ ಶಾಸನ (ಯಾಂಬೆಗ್ಯು–ಚೆಮ್ಸ್‌ಫರ್ಡ್ ಸುಧಾರಣೆ) | 1 | |
| | 25 | | ಎರಡನೇ ಬಾಜೀರಾವ್‌ನು | 1 | |
| | | | ಕೇಂದ್ರ ಶಾಸಕಾಂಗದ ವಿಸ್ತರಣೆ, ಪ್ರಾಂತ್ಯಗಳ ಶಾಸನ ಸಭೆಯ ವಿಸ್ತರಣೆ | 1 | |

| | | | | | |
|---|---|---|---|---|---|
| II | | | **ಎರಡು ವಾಕ್ಯಗಳಲ್ಲಿ ಉತ್ತರಿಸಿರಿ** | 2 x 15 | 30 |
| I | 26 | | * ಐತಿಹ್ಯ, ಲಾವಣಿ, ಜನಪದಗೀತೆ, ರಾಷ್ಟ್ರಗಳನ್ನು ಅಧ್ಯಯನ ಮಾಡುವ ಮೂಲಕ ಮೌಖಿಕ ಚರಿತ್ರೆಯನ್ನು ಚರಿತ್ರೆಗಾರ ರಚಿಸುತ್ತಾನೆ | 1 | |
| | 27 | | * ಭಾವನಾತ್ಮಕವಾದ, ಅತಿಮಾನುಷ ವಾದ, ಸೃಜನಶೀಲತೆಯಿಂದ ಕೂಡಿರುವ ಜನಪದ ಆಕರಗಳು | 1 | |
| | | | * ಹಲವು ದೇಶೀಯ ಸಂಸ್ಥಾನಗಳು ಅಸ್ಥಿತ್ವಕಳೆದುಕೊಂಡವು<br>* ಸತಾರ, ಜೈಪುರಾ ಝಾನ್ಸಿ, ಉದಯಪುರ, ಸಂಸ್ಥಾನಗಳು ಬ್ರಿಟಿಷರ ವಶವಾದವು | 1<br>1 | |
| | 28 | | * ಕೈಗಾರಿಕೆಕಚ್ಚಾವಸ್ತುಗಳು, ಶಕ್ತಿ ಸಂಪನ್ಮೂಲ, ಕಾರ್ಮಿಕರ ಪೂರೈಕೆ, ಸಂಚಾರ ಸೌಲಭ್ಯ, ಮಾರುಕಟ್ಟೆ ಇತ್ಯಾದಿ | 1<br>1 | |
| | 29 | | * ಅಣ್ವಸ್ತ್ರ ಯುಗದಲ್ಲಿ ಯುದ್ಧವನ್ನು ಕೊನೆಗಾಣಿಸಲು<br>* ಮುಂದಿನ ಜಾಗತಿಕ ಸುರಕ್ಷತೆಗೆ | 1<br>1 | |
| | 30 | | * ದೇಶವನ್ನು ಉತ್ತರ ಮತ್ತು ದಕ್ಷಿಣ ಹಾಗೂ ಪೂರ್ವ ಮತ್ತು ಪಶ್ಚಿಮವಾಗಿ ಸಂಪರ್ಕಿಸುವ ಹೆದ್ದಾರಿಗಳೇ ಕಾರಿಡಾರ್ ರಸ್ತೆಗಳು. ಈ ರಸ್ತೆಗಳು ಕೈಗಾರಿಕಾ ಅಭಿವೃದ್ಧಿಗೆ ವರದಾನವಾಗಿವೆ. | 1<br>1 | |
| | 31 | | * ಹೊಸ ವೈಜ್ಞಾನಿಕ ಸಲಕಿರಣೆಗಳಾದ ದಿಕ್ಸೂಚಿ, | 2 | |

| | | | | | |
|---|---|---|---|---|---|
| | 32 | | ಸಿಡಿಮದ್ದು, ನೌಕಾಉಪಕರಣಗಳು, ಭೂಪಟ, ನಾವೀಕರಿಗೆ ಸಹಾಯಕವಾದವು.<br><br>* ಪ್ರತಿಯೊಂದು ರಾಷ್ಟ್ರವು ಅನ್ಯರಾಷ್ಟ್ರಗಳೊಡನೆ ಸಂಬಂಧವನ್ನು ಇಟ್ಟುಕೊಳ್ಳದೆ ಇರಲು ಸಾಧ್ಯವಿಲ್ಲ<br>* ಒಂದು ರಾಷ್ಟ್ರವು ಅನ್ಯರಾಷ್ಟ್ರಗಳೊಡನೆ ವ್ಯವಹಾರಿಸುವಾಗ ವಿದೇಶಾಂಗನೀತಿಯನ್ನು ಅನುಸರಿಸುತ್ತದೆ ತನ್ನ ನೆರೆಯ ರಾಷ್ಟ್ರಗಳೊಂದಿಗೆ ಶಾಂತಿಯ ಸಹಕಾರ ಸಹಬಾಳ್ವೆ ಅಗತ್ಯ | 1<br><br>1 | |
| | 33 | | * ಅರೆನಿರುದ್ಯೋಗ, ಮರೆಮಾಚಿದ ನಿರುದ್ಯೋಗ, ತಾಂತ್ರಿಕ ನಿರುದ್ಯೋಗ ಚಕ್ರೀಯ ನಿರುದ್ಯೋಗ, ಸ್ವಇಚ್ಛೆಯ ನಿರುದ್ಯೋಗ | 2 | |
| | 34 | | * ಸಂಪೂರ್ಣವಾಗಿ ಸಮತಟ್ಟಾಗಿದೆ<br>* ನದಿಗಳು ಹೊತ್ತು ತಂದು ಸಂಚಯಿಸಿದ ಮೆಕ್ಕಲು ಮಣ್ಣಿನಿಂದ ನಿರ್ಮಿತವಾಗಿದೆ | 1<br>1 | 2 |
| | 35 | | * ಅರಣ್ಯನಾಶ<br>* ಸಾಕುಪ್ರಾಣಿಗಳನ್ನು ಮೇಯಿಸುವುದು<br>* ಅವೈಜ್ಞಾನಿಕ ಬೇಸಾಯ<br>* ಅಧಿಕ ನೀರಾವರಿ ಬಳಕೆ | 2 | |
| | 36 | | * ಬನ್ನೇರುಘಟ್ಟ<br>* ಬಂಡಿಪುರ | 1<br>1 | 2 |
| | 37 | | * ಪ್ರವಾಹ ಕಾಲುವೆ<br>1. ಯಾವುದೇ ರೀತಿಯ ಅಣೆಕಟ್ಟುಗಳನ್ನು ಕಟ್ಟದೇ | 1 | 2 |


| | | | | | |
|---|---|---|---|---|---|
| | | | ನದಿಗಳಿಂದ ನೇರವಾಗಿ ಕಾಲುವೆ ತೋಡುವುದು.<br>2. ನದಿಗಳಿಂದ ತುಂಬಿ ಹರಿಯುವಾಗ ಈ ಕಾಲುವೆಗಳ ಮೂಲಕ ಹರಿಯುವುದು<br>* ಸರ್ವಕಾಲಿಕ ಕಾಲುವೆ – ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟಿ ಜಲಾಶಯಗಳನ್ನು ನಿರ್ಮಿಸಿ, ನೀರನ್ನು ಸಂಗ್ರಹಿಸಿ, ಕೃಷಿಭೂಮಿಗೆ ನೀರನ್ನು ಒದಗಿಸಲು ತೋಡಿರುವ ಕಾಲುವೆ | 1 | |
| | 38 | | * ತೀರ ಪ್ರದೇಶದಲ್ಲಿ ಮರಳು ತೆಗೆಯುವುದನ್ನು ನಿಯಂತ್ರಿಸಬೇಕು<br>* ತೀರ ಪ್ರದೇಶದುದ್ದಕ್ಕೂ ಮಾಂಗ್ರೋವ್ ಅರಣ್ಯಗಳನ್ನು ಬೆಳೆಸಲು ಕಾರ್ಯಕ್ರಮ ರೂಪಿಸುವುದು | 1<br>1 | 2 |
| | 39 | | * ಹೆಚ್ಚು ಇಳುವರಿ ನೀಡುವ ಬೀಜಗಳ ಬಳಕೆ<br>* ಎಲ್ಲ ಬೆಳೆಗಳಿಗೂ ಸುಧಾರಿತ ತಂತ್ರಜ್ಞಾನ ಬೆಳೆಸುವುದು | 1<br>1 | 2 |
| VI | 40 | | **ಆರು ವಾಕ್ಯಗಳನ್ನು ಉತ್ತರಿಸಿರಿ**<br>* ಶಿವನ ಸಮುದ್ರ<br>* ತುಂಗಾಭದ್ರಾ<br>* ಆವರ್ತ್ ಠೇವಣಿ ಖಾತೆ<br>* ನಿಶ್ಚಿತ ಠೇವಣಿ ಖಾತೆ | 3X 6 | 18 |
| | 41 | | * ಉತ್ಪಾದನಾ ಕೇಂದ್ರವಾದ ಭಾರತ ಕೇವಲ ಕಚ್ಚವಸ್ತುಗಳನ್ನು ರಫ್ತು ಮಾಡುವ ಸ್ಥಿತಿ ತಲುಪಿತು<br>* ಬ್ರಿಟಿಷರು ಸಿದ್ಧವಸ್ತುಗಳನ್ನು ಭಾರತಕ್ಕೆ ಕಡಿಮೆ ಬೆಲೆಗೆ ಮಾರಲು ಪ್ರಾರಂಭಿಸಿದರು | 3 | |

| | | | | | |
|---|---|---|---|---|---|
| | | | * ಇಂಗ್ಲೆಂಡ್ ವಸ್ತುಗಳೊಂದಿಗೆ ಭಾರತದ ವಸ್ತುಗಳು ಸ್ಪರ್ಧಿಸ ಲಾರದೇ ಸೋತವು<br>* ಕೈಗಾರಿಕೆಗಳು ತೀವ್ರ ನಷ್ಟ ಅನುಭವಿಸಿದವು<br>* ಕಾರ್ಮಿಕರು ನಿರುದ್ಯೋಗಿಗಳಾದರು | | |
| | 42 | | * ಹಸಿವು ಬಡತನಾ ಅನಾರೋಗ್ಯ ಉತ್ತಮ ವೈದ್ಯಕೀಯ ಸೌಲಭ್ಯದಿಂದ ವಂಚಿತರಾಗುವುದು ಶಿಕ್ಷಣ ಸೌಲಭ್ಯಗಳ ಕೊರತೆ ವಿಚಾರ, ತಂತ್ರಜ್ಞಾನಕ್ಕಾಗಿ ಅನ್ಯದೇಶಗಳ ಮೇಲೆ ಅವಲಂಬನೆ<br>* ಕಾರಣಗಳು 20 ನೇ ಶತಮಾನದ ಮಧ್ಯದವರೆಗೂ ಈ ರಾಷ್ಟ್ರಗಳು ಕಾಡುತ್ತಿದ್ದ ವಸಾಹತುಶಾಹಿ ಹಾಗೂ ಸಾಮ್ರಾಜ್ಯಶಾಹಿ ಆಡಳಿತ<br>* ಸಾಂಪ್ರದಾಯಿಕ ಕೈಗಾರಿಕೆಗಳು ನಾಶವಾದವು | | |
| | 43 | | * ಸ್ತ್ರೀಯರಲ್ಲಿ ಶಿಕ್ಷಣ ಜಾಗೃತಿ ಹಾಗೂ ಸ್ವಾವಲಂಬಿ ಜೀವನ ನಡೆಸಲು ಸಹಕಾರಿ<br>* ಸ್ತ್ರೀಯ ಮೇಲೆ ನಡೆಯುವ ದೌರ್ಜನ್ಯಗಳನ್ನು ಪಡೆಯಲು ಸಹಾಯಕ<br>* ಸ್ತ್ರೀಯರನ್ನು ತಮ್ಮ ಹಕ್ಕುಗಳನ್ನು ಪಡೆಯಲು ಸಹಕಾರಿ<br>* ಸ್ತ್ರೀಯರನ್ನು ಆರ್ಥಿಕವಾಗಿ ಸಾಮಾಜಿಕವಾಗಿ ಸಬಲರನ್ನಾಗಿಸುತ್ತವೆ<br>* ಸಾಮೂಹಿಕ ಹೊಣೆಗಾರಿಕೆಯ ಮೂಲಕ ಸಂಘರ್ಷಗಳ ನಿವಾರಣೆಯ ಸಾಮರ್ಥ್ಯ ಬೆಳೆಸುತ್ತಾನೆ. | | |

| | | | | | |
|---|---|---|---|---|---|
| | 44 | | * ವೈಯುಕ್ತಿಕ ಹಣಕಾಸು – ಸಾರ್ವಜನಿಕ ಹಣಕಾಸಿನ ನಡುವಿನ ಭಿನ್ನತೆ<br>* ವೈಯಕ್ತಿಕ ಹಣಕಾಸು :<br>– ಒಬ್ಬ ವ್ಯಕ್ತಿ ಅಥವಾ ಕುಟುಂಬದ ಆದಾಯ ವೆಚ್ಚಗಳಿಗೆ ಸಂಬಂಧ<br>– ಮೊದಲು ಆದಾಯ ಅಂದಾಜು ನಂತರ ವೆಚ್ಚ<br>– ವ್ಯವಹಾರಗಳು ಗೌಪ್ಯವಾಗಿರುತ್ತವೆ.<br>– ಉಳಿತಾಯ ಪ್ರಗತಿಗೆ ಪೂರಕ<br>ಸಾರ್ವಜನಿಕ ಹಣಕಾಸು<br>* ಸರಕಾರದ ಆದಾಯ ವೆಚ್ಚಗಳಿಗೆ ಸಂಬಂಧ<br>* ಮೊದಲು ವೆಚ್ಚದ ಅಂದಾಜು ನಂತರ ಆದಾಯದ ಹೊಂದಿಕೆ<br>* ಶಾಸನ ಸಭೆಗಳಲ್ಲಿ ಚರ್ಚೆ<br>* ಮಾಧ್ಯಮಗಳಲ್ಲಿ ಮಂಡನೆ ಅಥವಾ<br>ಗಾಂಧೀಜಿಯವರ ಸ್ವರಾಜ್ಯ ಕಲ್ಪನೆಯ ವಿಕೇಂದ್ರೀಕರಣದ ಹಿನ್ನಲೆ ಗಾಂಧೀಜಿಯವರು ಸ್ವಾತಂತ್ರ್ಯ ನಂತರದ ಭಾರತ ವಿಕೇಂದ್ರೀಕರಣದ ಹಿನ್ನೆಲಯೂ ಸದೃಢಗೊಳ್ಳಬೇಕು. ಗ್ರಾಮರಾಜ್ಯದ ನಿರ್ಮಾಣ ಗಾಂಧಿಯವರ ಕನಸಾಗಿತ್ತು ಇದರಿಂದ ಜನಸಾಮಾನ್ಯನೂ ಆಡಳಿತದಲ್ಲಿ ಭಾಗಿಯಾಗುವ ಅವಕಾಶವನ್ನು ಮಾಡಿಕೊಡುವುದು<br>ಮೂಲ ಶಿಕ್ಷಣದ ಮೂಲಕ ಸ್ವಯಂ ಉದ್ಯೋಗಕ್ಕೆ ಆದ್ಯತೆ.<br>ವಿವಿಧ ವರ್ಗದ ಜನರು ಒಂದುಗೂಡಿ ಬಾಳುವುದು. | | 3 |

| | | | | | |
|---|---|---|---|---|---|
| | 45 | | ವಿಮಾರ್ಕರ್ತನು ಅನುಸರಿಸಬೇಕಾದ ತತ್ವಗಳು<br>– ವಿಶ್ವಾಸಾರ್ಹತೆಯ ತತ್ವ<br>– ನಷ್ಟಪರಿಹಾರ ತತ್ವ<br>– ಸಮಾನ ಅನುಬೋಧತತ್ವ<br>– ನಿಕಟ ಕಾರಣತತ್ವ<br>– ಕೊಡುಗೆಯ ತತ್ವ<br>– ಕನಿಷ್ಟ ನಷ್ಟ ಶಮನ ತತ್ವ ಅಥವಾ ಬ್ಯಾಂಕ್ ನಿರ್ವಹಿಸುವ ಕಾರ್ಯಗಳು<br>* ಠೇವಣಿ ಅಂಗೀಕರಿಸುವುದು<br>* ಸಾಲಗಳನ್ನು ಕೊಡುವುದು<br>* ಹಣವರ್ಗಾಯಿಸುವುದು<br>* ಚೆಕ್ಕು ಹುಂಡಿಗಳ ಹಾಗೂ ವಸೂಲಿ<br>* ಹುಂಡಿಗಳನ್ನು ಸೋಡಿ ಮಾಡುವುದು<br>* ಭದ್ರತಾ ಕಪಾಟುಗಳನ್ನು ಬಾಡಿಗೆ ಕೊಡುವುದು<br>* ವಿದೇಶೀ ವಿನಿಮಯದ ವ್ಯವಹಾರ ನಿರ್ವಹಣೆ<br>* ಬೆಲೆ ಬಾಳುವ ವಸ್ತುಗಳನ್ನು ತಮ್ಮ ಸುಪರ್ದಿನಲ್ಲಿ ಇಟ್ಟುಕೊಳ್ಳುವುದು. | | |
| V | 46 | | ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಸ್ ಚಂದ್ರ ಬೋಸ್‌ರ ಸಾಧನೆ :<br>– ಭಾರತೀಯರನ್ನು ಸಂಘಟಿಸಿ ಬ್ರಿಟೀಷರ ವಿರುದ್ಧ ಹೋರಾಟ<br>– ವಿದೇಶಿ ಭಾರತೀಯರಿಂದ ಸ್ವಾತಂತ್ರ್ಯಕ್ಕೆ ಬೆಂಬಲ<br>– ಐಎನ್‌ಎ ಸ್ಥಾಪನೆ<br>– ಕಾಂಗ್ರೆಸ್ ಸಮಾಜವಾದಿ ಪಕ್ಷದ ಸ್ಥಾಪನೆ<br>– ಗಾಂಧಿ ಬೆಂಬಲದೊಂದಿಗೆ 'ಹರಿಪುರ' ಕಾಂಗ್ರೆಸ್ ಅಧಿವೇಶನ ಅಧ್ಯಕ್ಷರಾದರು | 4 | |

| | | | | | |
|---|---|---|---|---|---|
| | | | – ಗಾಂಧೀಜಿಯವರ ಮೃದು ಧೋರಣೆಗೆ ವಿರೋಧ<br>– ಕಾಂಗ್ರೆಸ್‌ನಿಂದ ಹೊರಬಂದು ಪಾರ್ವರ್ಡ್ ಬ್ಲಾಕ್ ಸ್ಥಾಪನೆ<br>– ಅಜಾದ್ ಹಿಂದ್ ರೇಡಿಯೋ ಮೂಲಕ ಭಾರತೀಯರ ಆಕರ್ಷಣೆ<br>– ಹಿಟ್ಲರ್‌ನಿಂದ ಸಹಾಯ ಪಡೆದರು.<br>– ದೆಹಲಿ ಚಲೋ ಆರಂಭಿಸಿದರು. | | |
| VI | 47 | | ಭಾರತದ ನಕ್ಷೆ – ಭೂಪಟ ಬರೆದು ಸ್ಥಳಗಳನ್ನು ಗುರುತಿಸಿ | 3+1 | |



**ಸಮಾಜವಿಜ್ಞಾನ ಪ್ರಯೋಗಾಲಯ :**

ಸ್ವರೂಪ : ಪರಿಣಾಮಕಾರಿ ಕಲಿಕೆಗೆ ಸರಿಹೊಂದುವ ವಾತಾವರಣ ಕಲ್ಪಿಸುವ ದಿಸೆಯಲ್ಲಿ ಸುಸಜ್ಜಿತವಾದ ಉಪಕರಣಗಳು ಮತ್ತು ವಸ್ತುಗಳನ್ನು ವಿಷಯಕ್ಕೆ ಪೂರಕವಾಗಿ ಸೃಷ್ಟಿಸುವ ಹಾಗೂ ನಿರ್ವಹಿಸುವ ಪ್ರಕ್ರಿಯೆಯನ್ನು ಸಮಾಜ ವಿಜ್ಞಾನ ಪ್ರಯೋಗಾಲಯವು ಹೊಂದಿದೆ. ಇದು ವಿದ್ಯಾರ್ಥಿಗಳು ಅನುಕೂಲಕಾರನ ಮಾರ್ಗದರ್ಶನದಲ್ಲಿ ಚಟುವಟಿಕೆಗಳ ಮೂಲಕ ಮತ್ತು ಪ್ರಾಯೋಗಿಕವಾಗಿ ಕಲಿಕಾಂಶಗಳಲ್ಲಿನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಒಂದು ಕಾರ್ಯಾಲಯದಂತೆ ಕೆಲಸ ನಿರ್ವಹಿಸುತ್ತದೆ.

ಸಮಾಜ ವಿಜ್ಞಾನ ಕಲಿಕೆಯನ್ನು ಪರಿಣಾಮಕಾರಿ, ಜೀವಂತ ಮತ್ತು ಆಸಕ್ತಿಯುತ ಗೊಳಿಸಲು ಭೂಪಟಗಳು, ಗ್ಲೋಬ್, ಚಿತ್ರಗಳು ಹಾಗೂ ಚಾರ್ಟ್ಸ್‌ಗಳನ್ನು ಶಾಶ್ವತವಾಗಿ ಒಂದು ನಿರ್ದಿಷ್ಟ ಸ್ಥಳಗಳಲ್ಲಿ ಪ್ರದರ್ಶಿಸಿ ಮುಂದಿಡುವ ಪ್ರಯತ್ನ ಇಲ್ಲಿ ಕಂಡುಬರುತ್ತದೆ.

**ಲಕ್ಷಣಗಳು :**

1. ಲೌಕಿಕ ನಿಜಸ್ಥಿತಿಯ ಅನುಕರಣೆಯಾಗಬೇಕು.
2. ವೈಜ್ಞಾನಿಕ ನಿಯಮಗಳ ಆದರ್ಶೀಕರಣ ಮಾಡಬೇಕು.
3. ಜಾಗತಿಕ ಪರಿಸರ ಪ್ರಜ್ಞೆ ಮೂಡಿಸುವಂತಿರಬೇಕು.
4. ಉಪಕರಣಗಳು ಮತ್ತು ಮಾದರಿಗಳು ನಿರೂಪಿತವಾಗಿರಬೇಕು
5. ಐತಿಹಾಸಿಕ ಮತ್ತು ಪ್ರಚಲಿತ ಸಾಮಾಜಿಕ ವ್ಯವಸ್ಥೆಯ ಚಿತ್ರಣ ನೀಡಬೇಕು.
6. ಜ್ಞಾನಯುಕ್ತ ಜಾಲವನ್ನು ನಿರ್ಮಿಸಬೇಕು.

**ಉದ್ದೇಶಗಳು :**

1. ವೈಜ್ಞಾನಿಕ ತಳಹದಿಯ ಮೇಲೆ ಕಲಿಕಾಂಶವನ್ನು ಅಭ್ಯಸಿಸುವುದು
2. ವಿವೇಚನಾಯುತ, ಗುಣಾತ್ಮಕ ಪ್ರಾಯೋಗಿಕ ವಿಧಾನವನ್ನು ಅನುಸರಿಸುವುದು.
3. ಚಿಕ್ಕ ಗುಂಪಿನಲ್ಲಿ ಕೆಲವು ಕಲಿಕಾ ಸಮಸ್ಯೆಗಳನ್ನು ತೆಗೆದುಕೊಂಡು ಪರೀಕ್ಷಿಸಿ ಪರಿಹರಿಸಿ ಕೊಳ್ಳುವುದು.
4. ತಾಂತ್ರಿಕ, ವೃತ್ತಿಪರ ಶಿಕ್ಷಣ ಹಾಗೂ ತರಬೇತಿಗಳಿಗೆ ಕೈಪಿಡಿ ಒದಗಿಸುವುದು.
5. ಮಾನವೀಯ ಮೌಲ್ಯಗಳ ಅಭಿವೃದ್ಧಿಗೆ ಸೂಕ್ತ ಪರಿಸರ ನಿರ್ಮಿಸುವುದು.

## ಸಮಾಜವಿಜ್ಞಾನ ಪ್ರಯೋಗಾಲಯದ ಉಪಕರಣಗಳು

* ಗ್ಲೋಬ್
* ವಿವಿಧ ಶಿಲೆಗಳ ತುಣುಕುಗಳು
* ವಿವಿಧ ಖನಿಜಗಳ ತುಣುಕುಗಳು
* **ನಕ್ಷೆಗಳು :**

1. ಪ್ರಪಂಚ ಭೂಪಟ
2. ಭಾರತ – ಸ್ವಾಭಾವಿಕ ಸಸ್ಯವರ್ಗ
3. ಭಾರತ–ಶಿಲೆಗಳು ಮತ್ತು ಖನಿಜಗಳು
4. ಭಾರತ–ಪ್ರಾಕೃತಿಕ ಲಕ್ಷಣಗಳು
5. ಭಾರತ–ಸ್ವಾಭಾವಿಕ ಪ್ರದೇಶಗಳು
6. ವಿವಿಧ ಮಾನವ ಕೌಶಲ ನಕ್ಷೆಗಳು
7. ಭಾರತ–ರಾಜಕೀಯ
8. ಭಾರತ ಕೈಗಾರಿಕೆಗಳು
9. ಏಷ್ಯಾ – ರಾಜಕೀಯ
10. ಏಷ್ಯಾ – ಪ್ರಾಕೃತಿಕ
11. ಉತ್ತರ ಅಮೆರಿಕ – ಪ್ರಾಕೃತಿಕ
12. ಉತ್ತರ ಅಮೆರಿಕ – ರಾಜಕೀಯ
13. ಆಫ್ರಿಕಾ – ರಾಜಕೀಯ
14. ಆಫ್ರಿಕಾ – ಪ್ರಾಕೃತಿಕ
15. ಯುರೋಪ್ – ಪ್ರಾಕೃತಿಕ
16. ದಕ್ಷಿಣ ಅಮೆರಿಕ – ರಾಜಕೀಯ
17. ಪ್ರಪಂಚ – ರಾಜಕೀಯ ಮತ್ತು ವ್ಯಾಪಾರ
18. ಆಸ್ಟ್ರೇಲಿಯಾ – ರಾಜಕೀಯ
19. ಕರ್ನಾಟಕ – ರಾಜಕೀಯ
20. ಕರ್ನಾಟಕ – ರಾಜಕೀಯ ಮತ್ತು ಪ್ರವಾಸ ರಸ್ತೆ ಮಾರ್ಗದರ್ಶಿ

* **ಚಾರ್ಟ್‌ಗಳು :**

1. ಸೌರವ್ಯೂಹ
2. ಸೂರ್ಯ ಮತ್ತು ಚಂದ್ರಗ್ರಹಣ
3. ಮಣ್ಣಿನ ರಚನೆ
4. ನೀರಿನ ಮೂಲಗಳು
5. ಜಲಚಕ್ರ
6. ಭೂಮಿಯ ಪ್ರಾಕೃತಿಕ ಲಕ್ಷಣಗಳು

* **ಭೌಗೋಳಿಕ ಮಾದರಿಗಳು:**

1. ನದಿಗಳ ಮೂರು ಹಂತಗಳು
2. ನೀರಿನ ಚಿಲುಮೆಗಳು
3. ಭೂ ಸ್ವರೂಪ ವ್ಯವಸ್ಥೆ
4. ನದಿಗಳ ಹರಿಯುವಿಕೆ ಮತ್ತು ಸರೋವರಗಳ ಸ್ವರೂಪ
5. ಭೂಮಿಯ ಉಬ್ಬರ (ಪ್ರವಾಹ) ಮೈದಾನ, ಸ್ವಾಭಾವಿಕ ಒಡ್ಡುಗಳು
6. ನದಿ ಮುಖಜ ಭೂಮಿ
7. ಜಲಪಾತ
8. ಕಣಿವೆಗಳು
9. ಸೂರ್ಯ ಮತ್ತು ಚಂದ್ರಗ್ರಹಣ ಮಾದರಿಗಳು

ಸಮಾಜ ವಿಜ್ಞಾನ ಪ್ರಯೋಗಾಲಯದಲ್ಲಿನ ಉಪಕರಣಗಳಿಗೆ ಸಂಬಂಧಿಸಿದಂತೆ ಈ ಮೇಲಿನ ಉದಾಹರಣೆಗಳ ಜೊತೆಗೆ ಕಲಿಕಾಂಶಗಳಿಗೆ ಪೂರಕವಾಗಿ ಇನ್ನು ಹೆಚ್ಚಿನ ಉಪಕರಣಗಳನ್ನು ಅನುಕೂಲಕಾರರು ಸಂಗ್ರಹಿಸಲು ಅವಕಾಶವಿದೆ. ಪ್ರಯೋಗಾಲಯ ನಿರ್ಮಿಸಿಕೊಳ್ಳುವುದರ ಮೂಲಕ ಸಮಾಜ ವಿಜ್ಞಾನಕ್ಕೆ ಒಂದು ಜೀವಂತಿಕೆಯನ್ನು ತಂದುಕೊಡಬಹುದಾಗಿದೆ.

## ಅನುಬಂಧಗಳು

**ತಪಶೀಲು ಪಟ್ಟಿ –1**

* **ಸ್ವರೂಪ :** ಕಲಿಕಾ ಸಂದರ್ಭದಲ್ಲಿ ವಿದ್ಯಾರ್ಥಿಗಳು ವಿವಿಧ ರೀತಿಯ ಚಟುವಟಿಕೆಗಳಲ್ಲಿ ಭಾಗವಹಿಸಬೇಕಾಗುತ್ತದೆ. ಉದಾ: ಚರ್ಚೆ, ಗುಂಪುಚರ್ಚೆ, ಭಾಷಣ, ಸ್ವ ಅಭಿಪ್ರಾಯ, ವಿಷಯ ಮಂಡನೆ, ವಿಷಯ ವಿಶ್ಲೇಷಣೆ, ಇತ್ಯಾದಿ ವೈವಿದ್ಯಮಯ ಕಲಿಕಾ ಪ್ರಕ್ರಿಯೆಗಳಲ್ಲಿ ತೊಡಗಿರುತ್ತಾರೆ. ಇವುಗಳನ್ನು ಅನುಕೂಲಕಾರರು ಸಂದರ್ಭೋಚಿತವಾಗಿ ಕಲಿಕಾ ಸಮಯದಲ್ಲಿ ಮೌಲ್ಯಮಾಪನಕ್ಕೆ ಒಳಪಡಿಸಬೇಕಾಗುತ್ತದೆ. ಹೀಗೆ ವಿವಿಧ ಚಟುವಟಿಕೆಗಳನ್ನು ಮೌಲ್ಯೀಕರಿಸಲು ಹಾಕಿಕೊಂಡ ಮಾನಕಗಳೇ ತಪಶೀಲು ಪಟ್ಟಿಗಳಾಗಿವೆ.

ತಪಶೀಲು ಪಟ್ಟಿಗಳನ್ನು ರಚಿಸಿಕೊಳ್ಳುವಾಗ ಅನುಕೂಲಕಾರರಿಗೆ ಯಾವುದೇ ಬಗೆಯ ನಿರ್ಬಂಧಗಳಿರುವುದಿಲ್ಲ. ಕಲಿಕಾಂಶಕ್ಕೆ ಪೂರಕವಾಗಿ ವಿವಿಧ ಚಟುವಟಿಕೆಗಳನ್ನು ನೀಡವು ಮತ್ತು ಅದನ್ನು ಮೌಲ್ಯೀಕರಿಸಲು ತಮ್ಮದೇ ಆದ ತಪಶೀಲು ಪಟ್ಟಿಗಳನ್ನು ರಚಿಸಿಕೊಳ್ಳುವ ಸಂಪೂರ್ಣ ಸ್ವಾತಂತ್ರ್ಯವಿದೆ. ಅನುಕೂಲಕಾರರು ತಮ್ಮ ತರಗತಿಯ ಪರಿಸರಕ್ಕೆ ಅನುಗುಣ ವಾಗಿ ತಪಶೀಲು ಪಟ್ಟಿಗಳನ್ನು ರಚಿಸಿಕೊಳ್ಳಬಹುದು.

* **ಲಕ್ಷಣಗಳು :**

1. ಮಗುವಿನ ವ್ಯಕ್ತಿತ್ವದ ಬೆಳವಣಿಗೆಗೆ ಪೂರಕವಾಗಿರಬೇಕು.
2. ವರ್ತನೆಯ ನೈಜ ಮಾಪನವಾಗಬೇಕು.
3. ಕಲಿಕೆಯ ನಿಖರ ಮೌಲ್ಯಮಾಪನವಾಗುವಂತಿರಬೇಕು.
4. ಸ್ವರ್ಧಾತ್ಮಕ ಮನೋಭಾವ ಬೆಳೆಸುವಂತಿರಬೇಕು.
5. ಮುಕ್ತ ಹಾಗೂ ನಿರ್ಭಯ ವಾತಾವರಣ ಕಲ್ಪಿಸಬೇಕು.
6. ಮಗುವಿನ ಸುಪ್ತ ಕೌಶಲಗಳ ಅನಾವರಣವಾಗುವಂತಿರಬೇಕು.

* **ಉದ್ದೇಶಗಳು :**

1. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬೆಳೆಸುವುದು
2. ವಿಷಯದ ಮೇಲಿನ ಪ್ರಭುತ್ವವನ್ನು ಓರೆ ಹಚ್ಚುವುದು

3. ಕಲಿಕಾಂಶವನ್ನು ವಿಮರ್ಶಾತ್ಮಕ ಚಿಂತನೆಗೆ ಒಳಪಡಿಸುವುದು

4. ಕಲಿಕಾ ಹಂತಗಳ ಪಾರದರ್ಶಕ ಮೌಲ್ಯಮಾಪನ

5. ಸಾಮಾಜಿಕ ಮೌಲ್ಯಗಳ ಕುರಿತು

## ಮಾದರಿ ಅನುಬಂಧ

| ಕ್ರ.ಸಂ | ಮಾನಕಗಳು | ಹೌದು | ಇಲ್ಲ |
|---|---|---|---|
| 1 | ಸನ್ನಿವೇಶವನ್ನು ಅರ್ಥೈಸಿಕೊಳ್ಳುವ ಕೌಶಲ ವಿದೆಯೇ? | | |
| 2 | ಮಗುವಿನಲ್ಲಿ ನಾಯಕತ್ವ ಗುಣವಿದೆಯೇ? | | |
| 3 | ಸೌಂದರ್ಯೋಪಾಸನೆ ಕೌಶಲಗಳನ್ನು ಪ್ರತಿಬಿಂಬಿಸುತ್ತದೆಯೇ? | | |
| 4 | ಕಲಿಕಾ ಚಟುವಟಿಕೆಗೆ ಸಂಬಂಧಿಸಿದ ಜ್ಞಾನವಿದೆಯೇ? | | |
| 5 | ತನ್ನ ಸಾಮರ್ಥ್ಯಕ್ಕೆ ಅನುಗುಣವಾದ ಚಟುವಟಿಕೆಯನ್ನು ಆರಿಸಿಕೊಳ್ಳುತ್ತದೆಯೇ? | | |

## ಯೋಜನಾ ಪತ್ರ

* **ಸ್ವರೂಪ :**

ಕಲಿಕಾ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ, ಚಿತ್ರಗಳು, ಮಾದರಿಗಳು ತಯಾರಿಸಲು ಹಾಗೂ ಸ್ವ-ಕಲಿಕೆ, ಕಲಿಕೆಯ ಮುಂದುವರಿಕೆ ಮತ್ತು ಕಲಿಕೆಯ ಅನ್ವಯ ಗಳಿಗಾಗಿ ಬಳಸಿಕೊಳ್ಳುವ ಚಟುವಟಿಕೆಯನ್ನು 'ಯೋಜನಾ ಕಾರ್ಯ' ಎನ್ನಬಹುದು.

ಯೋಜನಾ ಕಾರ್ಯವು ಮಗುವಿನ ಸರ್ವತೋಮುಖ ಬೆಳವಣಿಗೆಯನ್ನು ಉತ್ತೇಜಿಸುವಂತೆ ಇರಬೇಕು. ಶಾಲಾ ಪರಿಸರದ ವ್ಯಾಪ್ತಿಯೊಳಗೆ ಸಾಮೂಹಿಕ ನೇತೃತ್ವದಲ್ಲಿ ಈ ಕಾರ್ಯವು ಜರುಗುವಂತೆ ಅನುಕೂಲಿಸಬೇಕಾದುದು ಅನುಕೂಲಕಾರರ ಹೊಣೆಗಾರಿಕೆ ಯಾಗಿದೆ.

* **ಲಕ್ಷಣಗಳು :**

1. ಸ್ಥಳೀಯ ಸಂಪನ್ಮೂಲಗಳಿಂದಲೇ ಸಿದ್ಧವಾಗಬೇಕು
2. ಆರ್ಥಿಕ ಹೊರೆಯಾಗದ ರೀತಿಯಲ್ಲಿರಬೇಕು.
3. ಮಗುವಿಗೆ ಸ್ವಾತಂತ್ರ್ಯವಿರಬೇಕು.
4. ಸಾಮೂಹಿಕ ಹೊಣೆಗಾರಿಕೆಯನ್ನು ಪ್ರತಿಬಿಂಬಿಸಬೇಕು
5. ಮಗು ವಿವಿಧ ದೃಷ್ಟಿಕೋನಗಳಲ್ಲಿ ಆಲೋಚಿಸಲು ಪ್ರೇರಕವಾಗಬೇಕು.
6. ಕ್ರಮಬದ್ಧತೆ, ಆಕರ್ಷಣೀಯತೆ, ಪರಿಣಾಮಕಾರತ್ವದಿಂದ ಕೂಡಿರಬೇಕು.

* **ಉದ್ದೇಶಗಳು:**

1. ಸ್ವಕಲಿಕೆ, ಚಿಂತನೆಗಳಿಗೆ ಅವಕಾಶ ನೀಡುವುದು.
2. ನಾಯಕತ್ವದ ಹೊಣೆಗಾರಿಕೆಯನ್ನು ಬೆಳೆಸುವುದು.
3. ಸ್ಪರ್ಧಾತ್ಮಕ ಮನೋಭಾವಕ್ಕೆ ಉತ್ತೇಜನ ನೀಡುವುದು.
4. ಸ್ಥಳೀಯ ಸಂಪನ್ಮೂಲಗಳ ಸದ್ಬಳಕೆಯ ಮಹತ್ವ
5. ಕಾರ್ಯತತ್ಪರತೆ ಮತ್ತು ಜವಾಬ್ದಾರಿಯ ಅರಿವು ಮೂಡಿಸುವುದು
6. ಕಲಿಕೆಯನ್ನು ಜೀವನದಲ್ಲಿ ಅನ್ವಯಿಸಿಕೊಳ್ಳುವ ಬಗೆಯನ್ನು ಪರಿಚಯಿಸುವುದು.

ಈ ಘಟಕಗಳಿಗೆ ಪೂರಕವಾಗಿ ಯೋಜನಾ ಕಾರ್ಯಕ್ಕೆ ಉದಾಹರಣೆಗಳು :

- 'ವೈಜ್ಞಾನಿಕ ಬೆಳವಣಿಗೆಗಳು ಪ್ರಪಂಚದಲ್ಲಿ ಹಲವು ಬದಲಾವಣೆಗಳನ್ನು ತಂದಿವೆ' ಈ ವಿಷಯದ ಕುರಿತು ಪ್ರಬಂಧ ಬರೆಯಿರಿ.
- ವೃತ್ತ ಪತ್ರಿಕೆಗಳಲ್ಲಿ ಬರುವ ವಿದೇಶಾಂಗ ನೀತಿ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿ.
- ನಿಮ್ಮ ಪ್ರದೇಶದಲ್ಲಿರುವ ಅಸಂಘಟಿತ ಕಾರ್ಮಿಕರನ್ನು ಸಂದರ್ಶನ ಮಾಡಿ ಅವರ ಸಮಸ್ಯೆಗಳ ಬಗ್ಗೆ ವರದಿ ಸಿದ್ಧಪಡಿಸಿ.
- ಭಾರತದ ನಕ್ಷೆ ಬರೆದು ಪ್ರಮುಖ ಅಕ್ಷಾಂಶ ಮತ್ತು ರೇಖಾಂಶಗಳು ಹಾಗೂ ನಿಮ್ಮ ನೆರೆಯ ರಾಷ್ಟ್ರಗಳನ್ನು ಗುರುತಿಸಿ.
- ಆಯ-ವ್ಯಯ ಮಂಡನೆಯಾದ ಮರುದಿನ ಪತ್ರಿಕೆಯಲ್ಲಿ ಬರುವ ವರದಿಗಳನ್ನು ಸಂಗ್ರಹಿಸಿ ಒಂದು ಆಲ್ಬಂ ಸಿದ್ದಪಡಿಸಿರಿ.
- ಜಾಗತೀಕರಣದಿಂದಾಗುವ ಪ್ರಭಾವಗಳ ಬಗ್ಗೆ ಅಂತರ್ಜಾಲದ ನೆರವಿನಲ್ಲಿ ಚಿತ್ರಸಹಿತ ಮಾಹಿತಿ ಸಂಗ್ರಹಿಸಿ ವರದಿ ಸಿದ್ದಪಡಿಸಿ.

**ಯೋಜನಾ ಕಾರ್ಯದ ಮೌಲ್ಯಮಾಪನ ತಪಶೀಲು ಪಟ್ಟಿ :**

| ಕ್ರ.ಸಂ | ಮಾನಕಗಳು | ಹೌದು | ಇಲ್ಲ |
|---|---|---|---|
| 1 | ಚಟುವಟಿಕೆಗಳಿಗೆ ಸಂಬಂಧಿಸಿದ ಜ್ಞಾನವಿದೆಯೇ? | | |
| 2 | ಸಂಗ್ರಹಿಸಿದ ಅಂಶಗಳನ್ನು ಸಂಸ್ಕರಿಸಿ, ಕ್ರಮಬದ್ಧವಾಗಿ ಜೋಡಿಸಿದ್ದಾರೆಯೇ? | | |
| 3 | ಚಿತ್ರಗಳು, ನಕ್ಷೆಗಳು, ಮಾದರಿಗಳು ವಿಷಯಕ್ಕೆ ಪೂರಕ ವಾಗಿದೆಯೇ? | | |
| 4 | ಯೋಜನೆಯ ಅಂಶಗಳು ನೈಜತೆಗೆ ಹತ್ತಿರವಾಗಿದೆಯೇ? | | |
| 5 | ಇತರೆ ಮೂಲಗಳಿಂದ (ಸಮುದಾಯ, ಸಂದರ್ಶನ) ಮಾಹಿತಿ ಪಡೆಯಲು ಸಂಪರ್ಕಿಸಿದ್ದಾರೆಯೇ? | | |
| 6 | ಮಗುವಿನಲ್ಲಿ ಪ್ರಶಂಸಿಸುವ ಗುಣವಿದೆಯೇ? | | |
| 7 | ಯೋಜನೆ ತಯಾರಿಸುವಾಗ ಹೊಸ ರೀತಿಯ ಆಲೋಚನೆಗಳು ವ್ಯಕ್ತವಾಗಿದೆಯೇ? (ಸೃಜನಶೀಲತೆ ವ್ಯಕ್ತವಾಯಿತೇ) | | |
| 8 | ಸ್ನೇಹಿತರ ನೆರವನ್ನು ಪಡೆದುಕೊಂಡಿದ್ದಾರೆಯೇ? | | |
| 9 | ಕೆಲಸ ಪೂರ್ಣಗೊಳಿಸಲು ಇತರರಿಗೆ ಸಹಕರಿಸಿದ್ದಾರೆಯೇ? | | |
| 10 | ಯೋಜನೆಯನ್ನು ವ್ಯವಸ್ಥಿತವಾಗಿ ಪೂರ್ಣಗೊಳಿಸಿದ್ದಾರೆಯೇ? | | |

**ದರ್ಜಾಮಾಪನ –3**

* ಸ್ವರೂಪ : ಮಗು ಕಲಿಕೆಯ ಸಂದರ್ಭದಲ್ಲಿ ಯಾವ ರೀತಿಯ ವರ್ತನೆಗಳನ್ನು ಪ್ರದರ್ಶಿಸುತ್ತದೆ ಎಂಬುದನ್ನು ತಿಳಿಯಲು ನಿರ್ದಿಷ್ಟ ಉದ್ದೇಶಗಳನ್ನು ಆಧರಿಸಿಕೊಂಡು ವರ್ತನೆಗಳನ್ನು ಶ್ರೇಣೀಕರಿಸಿ ದಾಖಲಿಸಲು ಬಳಸುವ ಸಾಧನವೇ ದರ್ಜಾ ಮಾಪನ.

* **ಲಕ್ಷಣಗಳು :**

1. ಮಗುವಿನ ವರ್ತನೆಯ ಸರಿಯಾದ ಮಾಪನವಾಗುವಂತಿರಬೇಕು.
2. ವರ್ತನೆಯ ಧನಾತ್ಮಕ ಅಂಶಗಳನ್ನು ಮತ್ತಷ್ಟು ವೃದ್ಧಿಸುವಂತಿರಬೇಕು
3. ಋಣಾತ್ಮಕ ಅಂಶಗಳನ್ನು ಕುಂದಿಸುವಂತಿರಬೇಕು.
4. ನಿಷ್ಪಕ್ಷಪಾತವಾದ ಮಾಪನವಾಗಬೇಕು.
5. ಪೂರ್ವಾಗ್ರಹ ಪೀಡಿತವಾಗಿರಬಾರದು.
6. ಕೌಶಲಗಳ ಬೆಳವಣಿಗೆಗೆ ಪ್ರೇರಕವಾಗಿರಬೇಕು.

* **ಉದ್ದೇಶಗಳು :**

1. ಮಗುವಿನಲ್ಲಿ ಧನಾತ್ಮಕ ಅಂಶಗಳನ್ನು ಬೆಳೆಸಿ ಸಮಾಜಮುಖಿಯನ್ನಾಗಿ ಮಾಡುವುದು
2. ಬದುಕುವ ಕಲೆಯನ್ನು ಕರಗತ ಮಾಡುವುದು.
3. ಸಂದಿಗ್ಧ ಪರಿಸ್ಥಿತಿಗಳನ್ನು ಎದುರಿಸುವ ಬಗೆಯನ್ನು ತಿಳಿಸುವುದು.
4. ತಾಳ್ಮೆ, ಸಹಕಾರ, ಗೌರವ ಮುಂತಾದ ಮೌಲ್ಯಗಳ ವೃದ್ಧಿಸುವುದು.
5. ಗುರಿ ಸಾಧಿಸುವ ಬಗೆಯನ್ನು ಮನವರಿಕೆ ಮಾಡುವುದು.

ಜೀವನ ಕೌಶಲಗಳಿಗೆ ಸಂಬಂಧಿಸಿದಂತೆ ಸಾಮಾಜಿಕ ಕೌಶಲಗಳು ಹಾಗೂ ಭಾವನಾತ್ಮಕ ಕೌಶಲಗಳ ದರ್ಜಾಮಾಪನವನ್ನು ಈ ಕೆಳಗಿನ ಅನುಬಂಧದಲ್ಲಿ ಉದಾಹರಿಸಲಾಗಿದೆ:

## ದರ್ಜಾ ಮಾಪನ ಅನುಬಂಧ

| ಕ್ರ.ಸಂ | ಹೇಳಿಕೆಗಳು | ಯಾವಾಗಲೂ | ಕೆಲವೊಮ್ಮೆ | ಯಾವಾಗಲೂ ಇಲ್ಲ |
|---|---|---|---|---|
| 1 | ತನ್ನನ್ನು ಶ್ಲಾಘಿಸಬೇಕೆಂದು ಬಯಸುತ್ತದೆ | | | |
| 2 | ಜೊತೆಗಾರನ ಅಭಿಪ್ರಾಯವನ್ನು ಮೆಚ್ಚುವ ಗುಣವಿದೆ | | | |
| 3 | ಹಿರಿಯರನ್ನು ಗೌರವಿಸುವ ಮನೋಭಾವವಿದೆ | | | |
| 4 | ಕಾರ್ಯಗಳನ್ನು ಪೂರ್ಣಗೊಳಿಸಲು ಸಹಪಾಠಿಗಳಿಗೆ ಸಹಕರಿಸುತ್ತದೆ | | | |
| 5 | ಗುರಿಸಾಧನೆಗೆ ನಿಗದಿಪಡಿಸದ ನಿಯಮಗಳನ್ನು ತನ್ನ ಒರಟು ಮಾತಿನಿಂದ ಮುರಿಯುತ್ತದೆ | | | |
| 6 | ಇತರರನ್ನು ನೋಯಿಸುವಂತೆ ವರ್ತಿಸುತ್ತದೆ | | | |
| 7 | ಕಷ್ಟಕರ ಸನ್ನಿವೇಶವನ್ನು ಎದುರಿಸುವಾಗ ಶಿಕ್ಷಕರ/ಸ್ನೇಹಿತರ ಸಹಕಾರ ಪಡೆಯುತ್ತದೆ | | | |
| 8 | ಯಾವುದೇ ಸ್ಪರ್ಧೆಯಲ್ಲಿ ತಾನು ಗೆಲ್ಲುವುದಿಲ್ಲ ಎಂಬ ಭಾವನೆ ಹೊಂದಿದೆ | | | |
| 9 | ಒತ್ತಡಕ್ಕೊಳಗಾದಾಗಲೂ ತನ್ನನ್ನು ತಾನು ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತದೆ | | | |
| 10 | ಚರ್ಚೆ ಸಂದರ್ಭದಲ್ಲಿ ಮಗು ವಾದ ಮಾಡಲು ಮುಂದಾಗುತ್ತದೆ | | | |

| | | | | |
|---|---|---|---|---|
| 11 | ತನ್ನ ಸಾಮರ್ಥ್ಯಕ್ಕೆ ಅನುಗುಣವಾದ ಚಟುವಟಿಕೆಯನ್ನು ಆರಿಸಿಕೊಳ್ಳುತ್ತದೆ | | | |
| 12 | ಆಸಕ್ತಿಯುತವಾಗಿ ಚಟುವಟಿಕೆಗಳಲ್ಲಿ ಭಾಗವಹಿಸುತ್ತದೆ | | | |
| 13 | ವಿಷಯಕ್ಕನುಗುಣವಾದ ಅಭಿಪ್ರಾಯ ವ್ಯಕ್ತಪಡಿಸುತ್ತದೆ | | | |
| 14 | ಶಾಲೆಯ ವ್ಯವಸ್ಥೆಗೆ ಅಗೌರವ ತೋರುತ್ತದೆ | | | |
| 15 | ಗುಂಪಿನಲ್ಲಿ ಕಲಿಯುವ ಪ್ರಕ್ರಿಯೆಯಲ್ಲಿ ನಿಧಾನಗತಿಯಲ್ಲಿ ಕಲಿಯುವ ಮಕ್ಕಳ ಬಗ್ಗೆ ತಾಳ್ಮೆಯಿಂದ ವರ್ತಿಸುತ್ತದೆ | | | |

## ಅವಲೋಕನ ನಮೂನೆ

ತರಬೇತಿಯ ಸಂದರ್ಭದಲ್ಲಿ ಸಂಪನ್ಮೂಲ ವ್ಯಕ್ತಿಗಳಿಂದ ಅನುಕೂಲಿಸಲ್ಪಟ್ಟ ತರಬೇತಿ ಸಾಮರ್ಥ್ಯ ಅರ್ಥೈಸಿಕೊಂಡಿರುವುದಕ್ಕೆ ಸಂಬಂಧಿಸಿದಂತೆ ತರಬೇತುದಾರರು ಗ್ರಹಿಸಿಕೊಂಡಂತೆ ಈ ನಮೂನೆಯ ಕಾಲಂಗಳನ್ನು ಭರ್ತಿ ಮಾಡಿಕೊಳ್ಳುವುದು.

| ಕ್ರ.ಸಂ / ಅವಧಿ | ತರಬೇತಿಯ ಕಲಿವಿನ ಅಂಶಗಳು | ಹೇಗೆ ನಿರ್ವಹಿಸಲಾಯಿತು | ಈ ಸಂದರ್ಭದಲ್ಲಿ ಕಟ್ಟಿಕೊಂಡ ಜ್ಞಾನ | ಸಲಹೆಗಳು |
|---|---|---|---|---|
| 1 | | | | |
| 2 | | | | |
| 3 | | | | |
| 4 | | | | |
| 5 | | | | |
| 6 | | | | |
| 7 | | | | |
| 8 | | | | |
| 9 | | | | |
| 10 | | | | |
| 11 | | | | |
| 12 | | | | |
| 13 | | | | |
| 14 | | | | |

| ತರಬೇತಿ ವೇಳಾಪಟ್ಟಿ | | | | | |
|---|---|---|---|---|---|
| ದಿನಾಂಕ / ದಿನಗಳು | ಬೆ. 9.30 ರಿಂದ 10.00 | ಬೆ.10.00 ರಿಂದ 11.30 | ಬೆ. 11.45 ರಿಂದ ಮ. 1.15 | ಮ. 2.00 ರಿಂದ 3.30 | ಮ. 3.45 ರಿಂದ 5.15 |
| 1ನೇ ದಿನ | ನೊಂದಣಿ ಪರಿಚಯ ಕಾರ್ಯಕ್ರಮದ ಉದ್ಘಾಟನೆ | | ಪೂರ್ವಪರೀಕ್ಷೆ ಆಶಯನುಡಿ | ಎನ್‌ಸಿಎಫ್ 2005ರ ಚೌಕಟ್ಟಿನಲ್ಲಿ ಪರಿಚಯ | ತರಬೇತಿಯ ಉದ್ದೇಶಗಳು |
| 2ನೇ ದಿನ | ಪ್ರಾರ್ಥನೆ ಚಿಂತನೆ ವರದಿ ವಾಚನ | ಹತ್ತನೇ ತರಗತಿ ಸಮಾಜ ವಿಜ್ಞಾನ ಪಠ್ಯದ ಪರಿಚಯ (ಚರ್ಚೆಯೊಂದಿಗೆ) | ಕಲಿವಿನ ವಿಧಾನವಾಗಿ ಯೋಜನಾ ವಿಧಾನ | ಕಲಿವಿನ ವಿಧಾನವಾಗಿ ಸಂದರ್ಶನ ವಿಧಾನ | ಶಿಬಿರಾರ್ಥಿ ಗಳಿಂದ ವಿಧಾನಗಳನ್ನು ಒಳಗೊಂಡ ಪ್ರಾದ್ಯಕ್ಷಿಕೆ |
| 3ನೇ ದಿನ | ಪ್ರಾರ್ಥನೆ ಚಿಂತನೆ ವರದಿವಾಚನ | ಸಮಾಜವಿಜ್ಞಾನ ಪಠ್ಯವನ್ನು ಶ್ರೀಮಂತ ಗೊಳಿಸುವಿಕೆ ಕ್ರಮ. (ಚರ್ಚೆ) | ಕಲಿಕಾ ಚಟುವಟಿಕೆಗಳಾಗಿ ಕ್ಷೇತ್ರಾಧ್ಯಯನ / ಅವಲೋಕನ | ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಪರಿಕಲ್ಪನೆ | ಶಿಬಿರಾರ್ಥಿ ಗಳಿಂದ ಚಟುವಟಿಕೆಯ ನ್ನೊಳಗೊಂಡ ಪ್ರತ್ಯಕ್ಷಿಣೆ |
| 4ನೇ ದಿನ | ಪ್ರಾರ್ಥನೆ ಚಿಂತನೆ ವರದಿವಾಚನ | ನಿರಂತರ ಮತ್ತು ವ್ಯಾಪಕ ಮೌಲ್ಯ ಮಾಪನದ ಅನುಷ್ಠಾನ /ನಿರ್ವಹಣೆ | ಕಲಿಕಾ ಚಟುವಟಿಕೆಗಳಾಗಿ ಭೇಟಿ / ಪ್ರಯೋಗ | ಪ್ರಶ್ನೆಪತ್ರಿಕೆ ವಿನ್ಯಾಸ ನೀಲನಕಾಶೆ ಯೊಂದಿಗೆ | ಪ್ರಶ್ನೆಪತ್ರಿಕೆ ರಚನೆ / ಶಿಬಿರಾರ್ಥಿ ಗಳಿಂದ |
| 5ನೇ ದಿನ | ಪ್ರಾರ್ಥನೆ ಚಿಂತನೆ ವರದಿವಾಚಕ | ಸಮಾಜವಿಜ್ಞಾನ ಪ್ರಯೋಗಾಲಯ ನಿರ್ವಹಣೆ | ರಚನೆಯಾದ ಪ್ರಶ್ನೆ ಪತ್ರಿಕೆಯ ಗುಂಪುವಾರು ಮಂಡನೆ | ಸಿಸಿಇ ದಾಖಲೆಗಳು ಸಾಫಲ್ಯಪರೀಕ್ಷೆ | ಸಮಾರೋಪ |